ಸಂಪುಟ: 14 Volume | ಸಂಚಿಕೆ: 94 Issue | ಪುಟಗಳು 08 Pages | ಶುಕ್ರವಾರ 17 ಜುಲೈ 2026 | ₹4 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ನಿನ್ನನ್ನು ಪೀಡಿಸುವ ಸಂಕಟಗಳನ್ನು ನಗುನಗುತ್ತಾ ನಾಶಪಡಿಸು.

–ಸ್ವಾಮಿ ವಿವೇಕಾನಂದ

## ಬಾಬುಜೀ ನಾಮಫಲಕಕ್ಕೆ ಅವಮಾನ ಖಂಡಿಸಿ ಮನವಿ



**ಕಲಬುರಗಿ:** ಚಿಂಚೋಳಿ ತಾಲೂಕಿನ ಚಂದನಕೇರಾ ಪಂಚಾಯತ ವ್ಯಾಪ್ತಿಯ ಕೋಟಗ ಗ್ರಾಮದಲ್ಲಿ ಹಸಿರು ಕ್ರಾಂತಿಯ ಹರಿಕಾರ ಭಾರತದ ಪ್ರಥಮ ಉಪ ಪ್ರಧಾನಿ ಡಾ.ಬಾಬು ಜಗಜೀವನರಾಂ ರವರ ನಾಮಫಲಕಕ್ಕೆ ಕಿಡಿಗೇಡಿಗಳು ಉದ್ದೇಶ ಪೂರ್ವಕವಾಗಿ ಚಪ್ಪಲಿ ಹಾರ ಮತ್ತು ಸಗಣಿ ಹಾಕಿ ಅವಮಾನ ಮಾಡಿರುವುದನ್ನು ಖಂಡಿಸಿ ಬುಧವಾರ ಚಿಂಚೋಳಿ ತಾಲೂಕಿನ ರೇವಗ್ಗಿ ಗುಡ್ಡದಲ್ಲಿ ಪ್ರತಿಭಟನೆ ನಡೆಸಿ ತಹಶೀಲ್ದಾರ ಮುಖಾಂತರ ಗೃಹ ಸಚಿವರಿಗೆ ಮನವಿ ಪತ್ರ ಸಲ್ಲಿಸಿದರು. ಈ ಪ್ರತಿಭಟನೆಯೂ ಸಮಾಜದ ಮುಖಂಡರಾದ ಗಿರೀಶ ಸಿಂಗೆ ಹಾಗೂ ಸಂದೀಪ ದೊಡ್ಡಮನಿ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಯಿತು. ನಂತರ ಮಾತನಾಡಿದ ಮುಖಂಡರು ಮಹಾತ್ಮರ ಪುತ್ಥಳಿ,ಮೂರ್ತಿ ಹಾಗೂ ನಾಮಫಲಕಗಳಿಗೆ ರಕ್ಷಣೆ ಇಲ್ಲದಂತಾಗಿದೆ.ಅವಮಾನಿಸುವ ಘಟನೆ ನಿರಂತರ ನಡೆಯುತ್ತಿದ್ದು, ಕಡಿವಾಣ ಹಾಕುವ ನಿಟ್ಟಿನಲ್ಲಿ ಕಠಿಣ ಕ್ರಮ ಅಗತ್ಯವಾಗಿದೆ. ಕೋಟಗಾದಲ್ಲಿ ಬಾಬೂಜಿ ನಾಮಫಲಕಕ್ಕೆ ಪಾದರಕ್ಷೆ ಹಾಕಿ, ಸಗಣಿ ಬಡಿದಿರುವುದು ಖಂಡನೀಯ. ಕೂಡಲೇ ಸಂಬಂಧಿತರನ್ನು ಅರೆಸ್ಟ್ ಮಾಡಬೇಕು, ಕಠಿಣ ಕ್ರಮಕ್ಕೆ ಮುಂದಾಗಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.



ಪೀಣ್ಯ ದಾಸರಹಳ್ಳಿ: ಕ್ಷೇತ್ರದ ಶಾಸಕರಾದ ಎಸ್.ಮುನಿರಾಜು ಅವರ ಆದೇಶದ ಮೇರೆಗೆ ಬಿ ಎನ್.ದಿನೇಶ್ ಅವರನ್ನು ರಾಜಗೋಪಾಲ ನಗರ ವಾರ್ಡ್ ಅಧ್ಯಕ್ಷರಾಗಿ ಆಯ್ಕೆ ಮಾಡಿ ನೇಮಕಾತಿ ಪತ್ರ ನೀಡಲಾಯಿತು. ಈ ಸಂದರ್ಭದಲ್ಲಿ ಶಾಸಕ ಎಸ್. ಮುನಿರಾಜು, ಶ್ರೀಮತಿ ಸುಜಾತ ಮುನಿರಾಜು ಹಾಗೂ ಕ್ಷೇತ್ರದ ಅಧ್ಯಕ್ಷರಾದ ಸೋಮಶೇಖರ್ ಅವರಿಗೆ ಸನ್ಮಾನಿಸಿ ಅಭಿನಂದಿಸಿದರು.

## ಬೆಳೆ ವಿಮೆ ಅರ್ಜಿ ಸಲ್ಲಿಸಲು ಅವಕಾಶ ನೀಡುವಂತೆ ಕರವೇ ಮನವಿ

**ಕಲಬುರಗಿ:** ಎನ್.ಪಿ ಖಾತೆ ಮೂಲಕ ಬೆಳೆ ವಿಮೆ ಅರ್ಜಿ ಸಲ್ಲಿಸಲು ಅವಕಾಶ ನೀಡುವಂತೆ ಬ್ಯಾಂಕ್ ಅಧಿಕಾರಿಗಳಿಗೆ ಸೂಚನೆ ನೀಡಿಸುವಂತೆ ಕರ್ನಾಟಕ ರಕ್ಷಣಾ ವೇದಿಕೆ(ಪ್ರವೀಣ ಸದೆಟ್ಟಿ) ಬಣದ ಕಲಬುರಗಿ ತಾಲೂಕು ಅಧ್ಯಕ್ಷ ವಿಜಯಕುಮಾರ ಅಂಕಲಗಿ ಅವರು ಮನವಿ ಮಾಡಿಕೊಂಡರು. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿದ ಅವರು, "2026–2027 ನೇ ಸಾಲಿನ ಬೆಳೆಗಳಿಗೆ ಫಸಲ್ ವಿಮಾ ಯೋಜನೆಯಡಿ ಬೆಳೆ ವಿಮೆ ನೊಂದಣಿ ಮಾಡಿಸಿಕೊಳ್ಳಲು ರೈತರು ಬ್ಯಾಂಕ್ ಗೆ ಹೋದಾಗ, ರೈತರು ಸಾಲ ಪಡೆದ ಕಟಬಾಕಿ ಹೊಂದಿರುವ ರೈತರಿಗೆ ಬ್ಯಾಂಕ್ ಖಾತೆಯು NP Non Performing Account ಇರುವುದರಿಂದ ಅರ್ಜಿ ಸ್ವೀಕರಿಸಲು ಬ್ಯಾಂಕ್ ಅಧಿಕಾರಿಗಳು ನಿರಾಕರಿಸುತ್ತಿದ್ದಾರೆ"ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

## ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಲೋಕಸಭಾ ಸದಸ್ಯರಾದ ರಾಧಾಕೃಷ್ಣ ದೊಡ್ಡಮನಿ ಅವರು ಇತ್ತೀಚಿಗೆ ಕಲಬುರಗಿಯ ತಮ್ಮ ಕಚೇರಿಯಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಡಿ ಪ್ರಸ್ತಾಪಿಸಿದ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಿದರು. ಜೊತೆಗೆ ಜಿಲ್ಲೆಯಲ್ಲಿ ರಾಜ್ಯ ಹಾಗೂ ಕೇಂದ್ರ ಪುರಸ್ಕೃತ ಯೋಜನೆಗಳಡಿಯಲ್ಲಿ ಮಂಜೂರಾದ ಇತರ ಅಭಿವೃದ್ಧಿ ಕಾಮಗಾರಿಗಳ ವಸ್ತುಸ್ಥಿತಿ ಬಗ್ಗೆ ಮಾಹಿತಿಯನ್ನು ಪಡೆದು, ಯಾವುದೇ ರೀತಿಯ ವಿಳಂಬಕ್ಕೆ ಆಸ್ಪದ ನೀಡದೇ ಸದರಿ ಕಾಮಗಾರಿಗಳನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸಲು ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿದರು.

ಸದರಿ ಸಭೆಯಲ್ಲಿ ಜಿಲ್ಲಾಧಿಕಾರಿ ಇಕ್ರಮ್ ಷರೀಫ್ ಹಾಗೂ ಸಿಇಓ ರಾಹುಲ್ ಸಂಕನೂರು ಸೇರಿದಂತೆ



ಮತ್ತಿತರ ಅಧಿಕಾರಿಗಳು ಭಾಗವಹಿಸಿದ್ದರು.

ಮುಂದುವರೆದು ಸಂಸದರು ಕಲಬುರಗಿ ವಿಮಾನ ನಿಲ್ದಾಣದಲ್ಲಿ ವಿಮಾನ ನಿಲ್ದಾಣ ಸಲಹಾ ಸಮಿತಿಯ ಸದಸ್ಯರ ಹಾಗೂ ಅಧಿಕಾರಿಗಳ ಸಭೆ ನಡೆಸಿದರು. ಜಿಲ್ಲೆಯ ಪ್ರಯಾಣೀಕರ ಸುಗಮ ಪ್ರಯಾಣಕ್ಕೆ ಅನುಕೂಲಕರ ವಾತಾವರಣ ನಿರ್ಮಾಣ ಮಾಡುವ ಉದ್ದೇಶದೊಂದಿಗೆ ಅವಶ್ಯಕ ಕಾಮಗಾರಿಗಳ ಪಟ್ಟಿ ಮಾಡಿಕೊಡಲು ಸೂಚಿಸಿ, ಶೀಘ್ರದಲ್ಲಿ ಸಂಭಂದಪಟ್ಟ ಇಲಾಖೆಯಿಂದ ಕೆಲಸಗಳನ್ನು ತ್ವರಿತಗತಿ ನೆರವೇರಿಸಿಕೊಡುವ ನಿರ್ಣಯ ಕೈಗೊಂಡರು.

## 14 ಸಾವಿರ ವಿದ್ಯಾರ್ಥಿಗಳಿಗೆ ಪುರಸ್ಕಾರ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದ ಸಮುದಾಯದ ಒಟ್ಟು 14000 ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ವೀರಶೈವ ಲಿಂಗಾಯತ ಮಹಾಸಭಾದಿಂದ ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದೆ ಎಂದು ಸಭಾದ ರಾಷ್ಟ್ರೀಯ ಅಧ್ಯಕ್ಷ ಈಶ್ವರ ಬಿ ಖಂಡ್ರೆ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ತಮ್ಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ 13500 ವಿದ್ಯಾರ್ಥಿಗಳಿಗಷ್ಟೇ ಅಲ್ಲದೆ ಕೇರಳ, ಮಹಾರಾಷ್ಟ್ರ, ತಮಿಳುನಾಡು ಮತ್ತು ತೆಲಂಗಾಣದ ವಿದ್ಯಾರ್ಥಿಗಳಿಗೂ ಮಹಾಸಭಾದಿಂದ ಪುರಸ್ಕಾರ ನೀಡಲಾಗುತ್ತಿದೆ ಎಂದರು.

ಆರು ರಾಜ್ಯಗಳಿಂದ ಒಟ್ಟು 16117 ಅರ್ಜಿಗಳು ಬಂದಿದ್ದು, ಪರಿಶೀಲನೆಯ ಬಳಿಕ 14000 ಪ್ರತಿಭಾವಂತ



ವಿದ್ಯಾರ್ಥಿಗಳಿಗೆ ಪ್ರಶಸ್ತಿ, ನಗದು ಪುರಸ್ಕಾರ ನೀಡಲು ಮಹಾಸಭಾದ ಕಾರ್ಯಕಾರಿ ಮಂಡಳಿ ತೀರ್ಮಾನ ಕೈಗೊಂಡಿತು ಎಂದು ತಿಳಿಸಿದರು.

ಇತ್ತೀಚೆಗೆ ಸುಜ್ಞಾನಮಂದಿರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬೆಂಗಳೂರು ನಗರ ಘಟಕದ ವತಿಯಿಂದ 800ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ತಲಾ 1 ಸಾವಿರ ರೂ. ನಗದು, ಪ್ರಶಸ್ತಿ ಪತ್ರ ನೀಡಲಾಯಿತು ಎಂದು ಈಶ್ವರ ಖಂಡ್ರೆ ತಿಳಿಸಿದರು.

# ಸಚಿವಗಿರಿಗೆ ಸದ್ಯ ಬ್ರೇಕ್

## ಸಚಿವ ಸಂಪುಟ ವಿಸ್ತರಣೆ ವಿಷಯ ಮತ್ತೆ ಚರ್ಚೆಗೆ | ಆಕಾಂಕ್ಷಿಗಳ ಕುತೂಹಲ ಹೆಚ್ಚಳ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಸಚಿವ ಸಂಪುಟ ವಿಸ್ತರಣೆ ವಿಷಯ ಮತ್ತೆ ಚರ್ಚೆಗೆ ಗ್ರಾಸವಾಗಿದೆ. ಬಹುಕುತೂಹಲ ಕೆರಳಿಸಿದ್ದ ಈ ವಿಚಾರ ಇದೀಗ ಒಂದು ವಾರಗಳ ಕಾಲ ಮುಂದೂಡಲಾಗಿದೆ ಎಂದು ಮೂಲಗಳು ತಿಳಿಸಿವೆ. ದೆಹಲಿಯಲ್ಲಿ ಸಿಎಂ ಡಿಕೆ ಶಿವಕುಮಾರ್, ಮಾಜಿ ಸಿಎಂ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಬಿಕೆ ಹರಿಪ್ರಸಾದ್ ಅವರು ಲೋಕಸಭಾ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿದ್ದು, ಈ ಕ್ರಮ ಕೈಗೊಳ್ಳಲಾಗಿದೆ.

**ಯಾವುದೇ ತೀರ್ಮಾನ ಇಲ್ಲ:** ಸಂಪುಟ ವಿಸ್ತರಣೆ, ರಾಜ್ಯದಲ್ಲಿ ನಡೆಯುತ್ತಿರುವ ರಾಜಕೀಯ ಬೆಳವಣಿಗೆಗಳ ಬಗ್ಗೆ ಚರ್ಚೆ ನಡೆಸಿದ್ದರು. ಈ ನಡುವೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತುರ್ತು ಬೆಂಗಳೂರಿಗೆ ವಾಪಸ್ ಆದ ಹಿನ್ನೆಲೆಯಲ್ಲಿ ಸಂಪುಟ ವಿಸ್ತರಣೆಯ ಕುರಿತಾಗಿ ಚರ್ಚೆ ನಡೆದರೂ ಈ ಬಗ್ಗೆ ಯಾವುದೇ ತೀರ್ಮಾನವನ್ನು ಕೈಗೊಳ್ಳಲಾಗಿಲ್ಲ.

**ಹರಿಪ್ರಸಾದ್ ಮಾಹಿತಿ:** ದೆಹಲಿ ಭೇಟಿ ಬಗ್ಗೆ ಕೆಪಿಸಿಸಿ ಅಧ್ಯಕ್ಷ ಬಿಕೆ ಹರಿಪ್ರಸಾದ್ ಅವರು ಮಾಹಿತಿ ಹಂಚಿಕೊಂಡಿದ್ದರು. ಲೋಕಸಭೆ ವಿರೋಧ ಪಕ್ಷದ ನಾಯಕರಾದ ರಾಹುಲ್ ಗಾಂಧಿ ಅವರನ್ನು ದೆಹಲಿಯ 10ನೇ ಜನಪಥ್ ರಸ್ತೆಯ ನಿವಾಸದಲ್ಲಿ ಭೇಟಿ ಮಾಡಿ ಪಕ್ಷ ಸಂಘಟನೆ ಹಾಗೂ ಪ್ರಸ್ತುತ ರಾಜಕೀಯ ವಿದ್ಯಮಾನಗಳ ಬಗ್ಗೆ ಸುಧೀರ್ಘವಾಗಿ ಚರ್ಚೆ ನಡೆಸಲಾಯಿತು ಎಂದಿದ್ದರು.



### ಖರ್ಗೆ ಅವರು ದಿಲ್ಲಿಗೆ ಹೋದ ಬಳಿಕ..!

ದೆಹಲಿಯಲ್ಲಿದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ದಿಢೀರ್ ಅಗಿ ಬೆಂಗಳೂರಿಗೆ ವಾಪಸ್ ಆಗುತ್ತಿದ್ದಾರೆ. ಖಾಸಗಿ ಕಾರಣಕ್ಕಾಗಿ ಅವರು ದೆಹಲಿಯಲ್ಲಿ ಬೆಂಗಳೂರಿಗೆ ವಾಪಸ್ ಬರುತ್ತಿದ್ದು, ಸದ್ಯ ಸಂಪುಟ ವಿಸ್ತರಣೆ ಮುಂದೂಡಲಾಗಿದೆ ಎಂಬ ಮಾಹಿತಿ ಇದೆ. ಖರ್ಗೆ ಅವರು ಮರಳಿ ದೆಹಲಿಗೆ ತೆರಳಿದ ಬಳಿಕ ಸಂಪುಟ ವಿಸ್ತರಣೆ ಚರ್ಚೆ ನಡೆದು ಅಂತಿಮ ತೀರ್ಮಾನ ಕೈಗೊಳ್ಳೋ ಸಾಧ್ಯತೆ ಇದೆ.

### ಸಿದ್ದು ಅಭಿಮತ ಏನು?

ಖಾಲಿಯಿರುವ 20 ಸ್ಥಾನಗಳಿಗೂ ಒಂದೇ ಕಂತಿನಲ್ಲಿ ಸಂಪುಟ ವಿಸ್ತರಣೆಯಾಗಬೇಕು ಂಬುದು ಮಾಜಿ ಸಿಎಂ ಸಿದ್ದರಾಮಯ್ಯ ಅವರ ಅಭಿಪ್ರಾಯ ಎನ್ನಲಾಗಿದೆ. ಆದರೆ ಸದ್ಯಕ್ಕೆ 18 ಸಚಿವರನ್ನು ನಿಯೋಜಿಸಿ, ಬಾಕಿ ಎರಡು ಸ್ಥಾನಗಳಿಗೆ ಜಿಬಿಎ ಮತ್ತು ಪಂಚಾಯತ್ ಚುನಾವಣೆಯ ಬಳಿಕ ನೇಮಕಾತಿ ಮಾಡಲು ಸಿಎಂ ಡಿ.ಕೆ.ಶಿ ಆಸಕ್ತಿ ಹೊಂದಿದ್ದಾರೆ ಎಂದು ಮೂಲ ತಿಳಿಸಿದೆ.

### ಸಿಎಂ ಬಳಿ ಲಿಸ್ಟ್ ಇತ್ತು..!

ಸಂಪುಟ ವಿಸ್ತರಣೆಯ ವಿಚಾರವಾಗಿಯೇ ರಾಜ್ಯ ನಾಯಕರಿಗೆ ಹೈಕಮಾಂಡ್ ಬುಲಾವ್ ನೀಡಿತ್ತು. ರಾಹುಲ್, ಸುರ್ಜೇವಾಲ ಅವರ ಜೊತೆಗೆ ಮಾತುಕತೆ ನಡೆಸಲಾಗಿತ್ತು. ಸಿಎಂ ಡಿಕೆಶಿ ಅವರು, ಸಂಪುಟದಲ್ಲಿ ಯಾರಿರಬೇಕೆಂಬ ಲಿಸ್ಟ್ ಜೊತೆಗೆ ದಿಲ್ಲಿಗೆ ತೆರಳಿದ್ದರು. ಖಾಲಿ ಇರುವ 20 ಸ್ಥಾನಕ್ಕೆ 50 ಕ್ಕೂ ಹೆಚ್ಚು ಆಕಾಂಕ್ಷಿಗಳಿದ್ದಾರೆ. ಹೀಗಾಗಿ ಸಂಪುಟ ವಿಸ್ತರಣೆ ಸವಾಲಾಗಿದೆ.

### ರಾಹುಲ್ ಒಪ್ಪಿಗೆ ಬಾಕಿ

ಬೆಂಗಳೂರಿನಲ್ಲಿ ಸಿದ್ದರಾಮಯ್ಯ ಮನೆಗೆ ಭೇಟಿ ನೀಡಿದ್ದ ಸಿಎಂ, ಸಂಪುಟ ವಿಸ್ತರಣೆ ಬಗ್ಗೆ ಚರ್ಚಿಸಿದ್ದರು. ಇದಕ್ಕೂ ಮುನ್ನ ಕೆಪಿಸಿಸಿ ಅಧ್ಯಕ್ಷರ ಜೊತೆ ಮಹತ್ವದ ಮಾತುಕತೆ ನಡೆಸಲಾಗಿತ್ತು. ಮೂವರು ಸಿದ್ಧಪಡಿಸಿರುವ ಸಂಭವನೀಯ ಸಚಿವರ ಕರಡು ಪಟ್ಟಿಯ ಬಗ್ಗೆ ಕೆ.ಸಿ.ವೇಣುಗೋಪಾಲ್ ನೇತೃತ್ವದಲ್ಲಿ ನಡೆಯುವ ಪೂರ್ವಭಾವಿ ಸಭೆಯಲ್ಲಿ ಚರ್ಚಿಸಿದ್ದು, ರಾಹುಲ್ ಒಪ್ಪಿಗೆ ಬಾಕಿ ಇದೆ.

## ಕಲಬೆರಕೆ ಹಾಲು ತಡೆಗೆ ಕ್ರಮ ಕೈಗೊಳ್ಳುವಂತೆ ಮನವಿ ಸಲ್ಲಿಸಿದ ಮಾಜಿ ಸಚಿವ

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ಜಿಲ್ಲೆಯು ನೆರೆ ಮಹಾರಾಷ್ಟ್ರದ ಗಡಿಯನ್ನು ಹಂಚಕೊಂಡಿದ್ದು ಗಡಿ ಭಾಗದಿಂದ ನಮ್ಮ ವಿಜಯಪುರ ಜಿಲ್ಲೆ ಹಾಗೂ ನಗರದಲ್ಲಿ ಬೇರೆ ರಾಜ್ಯದ ಜಿಲ್ಲೆಗಳಿಂದ ಕೆಮಿಕಲ್ ನಿಂದ ತಯಾರಿಸಿದ ಹಾಲು ಪೂರೈಸುತೀರುವುದನ್ನು ಕಂಡು ಬಂದಿದ್ದು ಯಾವುದೇ ಕಂಪನಿಯ ಪ್ಯಾಕೇಟ ಇಲ್ಲದೆ ಕ್ಯಾನುಗಳಲ್ಲಿ ಇದನ್ನು ತಂದು ಜನಸಾಮಾನ್ಯರ ಮನೆಗಳಿಗೆ ಹಾಲನ್ನು ವಿತರಿಸುತ್ತಿದ್ದಾರೆ ಆದ್ದರಿಂದ ಇದನ್ನು ತಡೆಗಟ್ಟಿ , ವಿಜಯಪುರ ನಗರ ಹಾಗೂ



ಸುತ್ತಮುತ್ತಲಿನ ತಾಲೂಕುಗಳಲ್ಲಿ ಹಾಲು ಪರೀಕ್ಷಾ ಕೇಂದ್ರಗಳನ್ನು(ಲ್ಯಾಬ್) ಸ್ಥಾಪಿಸಿ ಹಾಲನ್ನು ವಿತರಿಸುವವರು ಕಡ್ಡಾಯವಾಗಿ ಇಲ್ಲಿ ಪರೀಕ್ಷಿಸಿ ನಂತರ ವಿತರಿಸಬೇಕು ಎಂದು ಕಟ್ಟು ನಿಟ್ಟಿನ ಆದೇಶವನ್ನು ಹೊರಡಿಸಬೇಕು ಎಂದು ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಿದ್ದು ಮಲ್ಲಿಕಾರ್ಜುನಮಠ, ಕಾಂತು ಶಿಂದೆ, ವಿನಾಯಕ ದಹಿಂಡೆ, ವಿವೇಕ ತಾವರಗೇರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಸಾಂಕ್ರಾಮಿಕ ರೋಗ ತಡೆಗೆ ಡಿ.ಸಿ ದಿಟ್ಟ ಹೆಜ್ಜೆ..!

• ಮಲ್ಲಮ್ಮ ನುಡಿ ವಾರ್ತೆ ಬೀದರ್

ಜಿಲ್ಲೆಯಲ್ಲಿ ಮಲೇರಿಯಾ, ಡೆಂಗೆ, ಚಿಕುನ್‌ಗುನ್ಯಾ ಸೇರಿದಂತೆ ವಿವಿಧ ರೋಗವಾಹಕ ಅಶ್ರಿತ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಎಲ್ಲಾ ಇಲಾಖೆಗಳು ಸಮರೋಪಾದಿಯಲ್ಲಿ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ರಾಷ್ಟ್ರೀಯ ರೋಗವಾಹಕ ಅಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮದ ಪ್ರಗತಿ ಪರಿಶೀಲನೆ ಹಾಗೂ ಜಿಲ್ಲಾ ಮಟ್ಟದ ಅಂತರ್ ಇಲಾಖಾ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, 2027ರೊಳಗೆ ಜಿಲ್ಲೆಯನ್ನು ಸಂಪೂರ್ಣವಾಗಿ ಮಲೇರಿಯಾ, ಡೆಂಗ್ಯೂ, ಚಿಕುನ್ ಗುನ್ಯ, ಆನೆಕಾಲು ರೋಗ, ಮೆದಳು ಜ್ವರ ಹಾಗೂ ಝಿಕಾ ರೋಗವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಮಹತ್ತರ ಗುರಿಯನ್ನು ಹೊಂದಲಾಗಿದೆ ಎಂದು ಹೇಳಿದ್ದಾರೆ.

**ಅಧಿಕಾರಿಗಳಿಗೆ ಸೂಚನೆ:** ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟಲು ವಾರಕ್ಕೊಮ್ಮೆ ಕಡ್ಡಾಯವಾಗಿ ಲಾರ್ವಾನಾಶಕ ದ್ರಾವಣವನ್ನು ಸಿಂಪಡಿಸಬೇಕು ಮತ್ತು ಸಾರ್ವಜನಿಕ ಪ್ರದೇಶಗಳಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕೆಂದು ನಗರಾಭಿವೃದ್ಧಿ ಇಲಾಖೆಯ ಅಧಿಕಾರಿಗಳಿಗೆ ಆದೇಶಿಸಿದ್ದಾರೆ.

**ಸೂಕ್ತ ಚರಂಡಿ ವ್ಯವಸ್ಥೆಗೆ ಅಸ್ತು:** ಗ್ರಾಮೀಣ ಭಾಗದ ಸ್ವಚ್ಛತೆಗೆ ಹಳ್ಳಿಗಳಲ್ಲಿನ ಗುಂಡಿ ಹಾಗೂ ತಗ್ಗುಗಳನ್ನು ಮುಚ್ಚಿ ನೀರು ಸಂಗ್ರಹವಾಗದಂತೆ ತಡೆಗಟ್ಟಬೇಕು. ಕೊಳವೆ ಬಾವಿ ಹಾಗೂ ಸಾರ್ವಜನಿಕ ನಲ್ಲಿಗಳ ಸುತ್ತಮುತ್ತ ಹೂಳೆತ್ತಿ ಸೂಕ್ತ ಚರಂಡಿ ವ್ಯವಸ್ಥೆ ಮಾಡಬೇಕು. ಕುಡಿಯುವ ನೀರಿನ ಮೇಲ್ಚಾವಣಿ ತೊಟ್ಟಿಗಳನ್ನು ಭದ್ರವಾದ ಮುಚ್ಚಳದಿಂದ ಮುಚ್ಚುವುದರ ಜೊತೆಗೆ, ನೀರು ಸರಬರಾಜು ಮಾಡುವ ಮುನ್ನ ಕಡ್ಡಾಯವಾಗಿ ಸೂಕ್ತ ಪ್ರಮಾಣದಲ್ಲಿ ಕ್ಲೋರಿನ್ ಹಾಕಬೇಕು ಎಂದಿದ್ದಾರೆ.



### ಸೊಳ್ಳೆಗಳಿಂದ ಹರುಡವ ರೋಗಕ್ಕೆ ಮದ್ದು

ಅಂಗನವಾಡಿ ಕಾರ್ಯಕರ್ತೆಯರ ಮೂಲಕ ಸೊಳ್ಳೆಗಳಿಂದ ಹರಡುವ ರೋಗಗಳ ಬಗ್ಗೆ ಮನೆ– ಮನೆಗೆ ತೆರಳಿ ವ್ಯಾಪಕ ಪ್ರಚಾರ ಕೈಗೊಳ್ಳಬೇಕು ಮತ್ತು ಅಂಗನವಾಡಿ ಆವರಣದಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ಶಿಕ್ಷಣ ಇಲಾಖೆಯು ಎಲ್ಲಾ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಡೆಂಗ್ಯು, ಚಿಕುನ್‌ಗುನ್ಯಾ ನಿಯಂತ್ರಣದ ಬಗ್ಗೆ ಆರೋಗ್ಯ ಇಲಾಖೆಯ ವತಿಯಿಂದ ಕಾರ್ಯಾಗಾರ ಹಾಗೂ ಆರೋಗ್ಯ ತಪಾಸಣೆ ಹಮ್ಮಿಕೊಳ್ಳಬೇಕು. ಸಾರಿಗೆ ಇಲಾಖೆಯು ಬಸ್ ಡಿಪೋಗಳಲ್ಲಿ ಬಿಸಾಡಿದ ಟೈರ್‌ಗಳು ಮತ್ತು ಬಿಡಿಭಾಗಗಳಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು ಎಂದು ನುಡಿದಿದ್ದಾರೆ.

ಗಡಿ ಜಿಲ್ಲೆಯಾಗಿರುವುದ್ದರಿಂದ ಹೊಸ ಕಾರ್ಮಿಕರು ಬಂದಾಗ ತಕ್ಷಣ ಆರೋಗ್ಯ ಇಲಾಖೆಗೆ ಮಾಹಿತಿ ನೀಡಬೇಕು. ವಲಸೆ ಕಾರ್ಮಿಕರು ಹೆಚ್ಚಾಗಿ ಬರುವುದರಿಂದ ಕಾರ್ಮಿಕರಿಗೆ ಪ್ರತ್ಯೇಕವಾದ ಆರೋಗ್ಯ ಚೀಟಿ ಒದಗಿಸುವುದರ ಜೊತೆಗೆ ಸೊಳ್ಳೆ ಪರದೆ ಹಾಗೂ ರೆಪೆಲೆಂಟ್‌ಗಳ ಬಳಸುವಂತೆ ಉತ್ತೇಜಿಸಬೇಕು.

–ಶಿಲ್ಪಾ ಶರ್ಮಾ, ಜಿಲ್ಲಾಧಿಕಾರಿ

### ಏಡ್ಸ್ ತಡೆಗೆ ಅಧಿಕಾರಿಗಳ ಜತೆ ಸಭೆ

ಜಿಲ್ಲೆಯಲ್ಲಿ ಒಟ್ಟು 14 ಐ.ಸಿ.ಟಿ.ಸಿ ಕೇಂದ್ರಗಳಿದ್ದು, ಜಿಲ್ಲೆಯ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಏಡ್ಸ್ ಬಾದಿತರಿಗಾಗಿ ಪರೀಕ್ಷೆ ನಡೆಸಲಾಗುತಿದ್ದು, ಬಾದಿತರು ಜಿಲ್ಲಾ ಬ್ರೀಮ್ಸ್ ಆಸ್ಪತ್ರೆಯಲ್ಲಿ ಆಪ್ತ ಸಮಲೋಚನಾ ಕೇಂದ್ರಕ್ಕೆ ತೆರಳಿ ಸೂಕ್ತ ಸಲಹೆ–ಸೂಚನೆಗಳನ್ನು ಪಡೆದು ಚಿಕಿತ್ಸೆ ಪಡೆದುಕೊಳ್ಳುವಂತೆ ಡಿ.ಸಿ ಶಿಲ್ಪಾ ಶರ್ಮಾ ತಿಳಿಸಿದ್ದಾರೆ. ಮಾಬೈಲಾಯಿಜೇಶನ್ ಏಡ್ಸ್ ಸುರಕ್ಷಾ ಅಭಿಯಾನದಡಿ ಜಿಲ್ಲೆಯಲ್ಲಿ ಪ್ರಥಮ ಹಂತವಾಗಿ ಶೇ. 95ರಷ್ಟು ಗುರಿ ಹೊಂದಿದ್ದು, ಶೇ. 85ರಷ್ಟು ಗುರಿ ಸಾಧಿಸಲಾಗಿದೆ. ದ್ವೀತಿಯ ಹಂತದ ಕಾರ್ಯಕ್ರಮದಲ್ಲಿ ಶೇ. 95ರಷ್ಟು ಗುರಿಯಲ್ಲಿ ಶೇ. 85ರಷ್ಟು ಗುರಿ ಸಾಧಿಸಲಾಗಿದೆ. ತೃತೀಯ ಹಂತದಲ್ಲಿ ಶೇ. 99ರಷ್ಟು ಗುರಿ ಹೊಂದಿದ್ದು, ಶೇ. 95ರಷ್ಟು ಗುರಿ ಸಾಧಿಸಲಾಗಿದೆ ಎಂದಿದ್ದಾರೆ. ಬೀದರ್ ಮಹಾನಗರ ಪಾಲಿಕೆ ಆಯುಕ್ತರಾದ ಮುಕಲ್ ಜೈನ, ಜಿ.ಪಂ. ಯೋಜನ ನಿರ್ದೇಶಕ ಸುರ್ಯಾಕಾಂತ ಬಿರಾದರ, ಡಾ. ಧ್ಯಾನೆಶ್ವರ ನಿರಗೂಡೆ, ಸೇರಿದಂತೆ ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

**ಚುನಾವಣೆಯಲ್ಲಿ ನಿಮಗೆ ಬುದ್ಧಿ ಕಲಿಸ್ತೀವಿ ಅಂತಾರೆ, ಯಾರು ಬುದ್ಧಿ ಕಲಿಸ್ತಾರೆ? ದೇವರು ನನಗೆ ಅಧಿಕಾರ ಕೊಟ್ಟಿದ್ದಾನೆ: ಡಿಕೆ ಶಿವಕುಮಾರ್, ಸಿಎಂ**

# ರಾಜ್ಯದ ರೈತರ ನೆರವಿಗೆ ಸರ್ಕಾರ ಮುಂದೆ ಬರಲಿ

ರಾಜ್ಯದ ರೈತರು ಇಂದು ಅನೇಕ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ಮಳೆ ಕೊರತೆ, ಬೆಳೆ ನಷ್ಟ, ಉತ್ಪಾದನಾ ವೆಚ್ಚದ ಏರಿಕೆ, ಸಮರ್ಪಕ ಬೆಲೆ ಸಿಗದಿರುವುದು ಹಾಗೂ ಸಾಲದ ಹೊರೆ ರೈತರ ಬದುಕನ್ನು ದುಸ್ತರಗೊಳಿಸಿದೆ. ಅನ್ನದಾತನ ಪರಿಶ್ರಮದ ಮೇಲೆ ದೇಶದ ಆಹಾರ ಭದ್ರತೆ ನಿಂತಿದ್ದರೂ, ಅವರ ಸಮಸ್ಯೆಗಳಿಗೆ ತ್ವರಿತ ಪರಿಹಾರ ದೊರೆಯದಿರುವುದು ವಿಷಾದನೀಯ.

## ಸಂಪಾದಕೀಯ



**ಮಾಣಿಕರೆಡ್ಡಿ ಕೌಡಾಳೆ**
**ಪ್ರಧಾನ ಸಂಪಾದಕರು**
**ಮೊ: 9845028349**

ಸರ್ಕಾರ ರೈತರ ಸಂಕಷ್ಟವನ್ನು ಗಂಭೀರವಾಗಿ ಪರಿಗಣಿಸಿ, ಬೆಳೆ ಹಾನಿಗೆ ಸೂಕ್ತ ಪರಿಹಾರವನ್ನು ಶೀಘ್ರವೇ ಬಿಡುಗಡೆ ಮಾಡಬೇಕು. ಬೆಳೆ ವಿಮೆ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿ, ಅರ್ಹ ರೈತರಿಗೆ ಯಾವುದೇ ವಿಳಂಬವಿಲ್ಲದೆ ಪರಿಹಾರ ತಲುಪುವಂತೆ ನೋಡಿಕೊಳ್ಳಬೇಕು. ಕೃಷಿ ಸಾಲ ಮರುಪಾವತಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿ, ಬಡ್ಡಿದರದಲ್ಲಿ ವಿನಾಯಿತಿ ನೀಡುವಂತಹ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯ.

ಜೊತೆಗೆ, ನೀರಾವರಿ ಯೋಜನೆಗಳಿಗೆ ಹೆಚ್ಚಿನ ಒತ್ತು ನೀಡಿ, ಗುಣಮಟ್ಟದ ಬೀಜ, ರಸಗೊಬ್ಬರ ಹಾಗೂ ಕೃಷಿ ಉಪಕರಣಗಳನ್ನು ಕೈಗೆಟುಕುವ ದರದಲ್ಲಿ ಒದಗಿಸಬೇಕು. ರೈತರು ಬೆಳೆದ ಬೆಳೆಗೆ ನ್ಯಾಯಯುತ ಬೆಲೆ ದೊರೆಯುವಂತೆ ಮಾರುಕಟ್ಟೆ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಬೇಕು.

ಅನ್ನದಾತನನ್ನು ಉಳಿಸುವುದು ಎಂದರೆ ರಾಜ್ಯದ ಆರ್ಥಿಕತೆ ಮತ್ತು ಆಹಾರ ಭದ್ರತೆಯನ್ನು ಉಳಿಸುವಂತೆಯೇ ಆಗಿದೆ. ಆದ್ದರಿಂದ ಸರ್ಕಾರ ರೈತರ ನೆರವಿಗೆ ತುರ್ತಾಗಿ ಮುಂದಾಗಿ, ಅವರ ಬದುಕಿನಲ್ಲಿ ಹೊಸ ಭರವಸೆ ಮೂಡಿಸುವ ಕೆಲಸ ಮಾಡಬೇಕು. ರೈತರು ನೆಮ್ಮದಿಯಿಂದ ಕೃಷಿ ಮಾಡುವ ವಾತಾವರಣ ನಿರ್ಮಾಣವಾಗುವುದು ಇಂದಿನ ಅವಶ್ಯಕತೆಯಾಗಿದೆ.

# ಕುಡಿಯುವ ನೀರಿನ ಸಮಸ್ಯೆ ಆಗದಂತೆ ಎಚ್ಚರಿಕೆ ವಹಿಸಿ







**ಕಲಬುರಗಿ:** ನಗರದ ದಕ್ಷಿಣ ಮತಕ್ಷೇತ್ರದಲ್ಲಿ ಬರುವ 33 ವಾರ್ಡ್ ಹಾಗೂ ಎಲ್ಲಾ 28 ಗ್ರಾಮಗಲ್ಲಿ ಕುಡಿಯುವ ನೀರಿನ ಸಮಸ್ಯೆ ಕಾಡದಂತೆ ಸೂಕ್ತ ಕ್ರಮ ಕೈಗೊಂಡು ಎಚ್ಚರ ವಹಿಸುವಂತೆ ಶಾಸಕರಾಫಾ ಅಲ್ಲಮ ಪ್ರಭು ಪಾಟೀಲ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಇಲ್ಲಿ ಗುರುವಾರ ಪ್ರಗತಿ ಪರಿಶೀಲನೆ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಗ್ರಾಮೀಣ ಭಾಗದ 28 ಹಳ್ಳಿಗಳ್ಳಿ ನೀರಿನ ತೊಂದರೆ ಇದೆ, ನಗರದ ಹಲವು ವಾರ್ಡ್ ಗಳಲ್ಲೂ ಸಮಸ್ಯೆ ಉಲ್ಬನಿಸಿದೆ, ಜನ ಟ್ಯಾಂಕರ್ ಮೊರೆ ಹೋಗಿದ್ದಾರೆ. ನಗರದಲ್ಲಿ ಶೇ 60 ಕೊಳವೆ ಬಾವಿ ಬತ್ತಿವೆ. ಇವನ್ನೆಲ್ಲ ಗಮನಿಸಿ ಜನ, ಜಾನುವಾರು ಸಮಸ್ಯೆ ಕಾಡದಂತೆ ಕೆಲಸ ಮಾಡಬೇಕು ಎಂದು ಶಾಸಕರು ಖಡಕ್ ಸೂಚನೆ ನೀಡಿದರು.

ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಒಳ್ಳೆ ನೀರಿನ ಮೂಲ ಇರುವ ಕೊಳವೆ ಬಾವಿ ಹುಡುಕಿ ಅದನ್ನು ಬಾಡಿಗೆ ಪಡೆದು ಪೈಪ್ ಲೈನ್ ಮಾಡಿ ನೀರು ಪೂರೈಸಿ. ನೀರಿನ ಕೆಲಸಕ್ಕೆ ಹಣದ ಕೊರತೆ ಇಲ್ಲಾ ಎಂದು ಶಾಸಕರು ಹೇಳಿದರು.

ಗುಳೆ ಹೋಗೋದನ್ನು ತಪ್ಪಿಸಿ, ಬೇಗ ಕಾರ್ಮಿಕರಿಗೆ ಕೆಲಸ ಕೊಡಲು ಖಾತ್ರಿ ರೋಜಗರ್ ಯೋಜನೆ ಅಡಿ ಕೆಲಸ ಆರಂಭಿಸಿ ಎಂದು ಸೂಚಿಸಿದರು.

ದಕ್ಷಿಣ ಕ್ಷೇತ್ರದ ಲ್ಲಿ ಬರುವ ಗ್ರಾಮೀಣ ರಸ್ತೆ, ಕೃಷಿ, ಮಳೆ ಕೊರತೆ ಸೇರಿದಂತೆ ಹಲವು ವಿಷಯಗಳು ಸಭೆಯಲ್ಲಿ ಪ್ರಸ್ತಾಪ ಆದವು.

ರೈತರು ಹವಾಮಾನ ಆಧಾರಿತ ಬೆಳೆ ವಿಮೆ ಹೆಸರು ನೋಂದಣಿಗೆ ಮನವಿ ಮಾಡಿದ ಶಾಸಕರು ಬೆಳೆ ವಿಮೆ ಉಳಿದ 365 ಕೋ ರು ಪೈಕಿ 225 ಕೋಟಿ ರು ಶೀಘ್ರ ಬಿಡುಗಡೆಗೆ ಸಿಎಂ ಆಶ್ವಾಸನೆ ಕೊಟ್ಟಿದ್ದಾರೆ, ರೈತರಿಗೆ ಅನುಲೂಲ್ ಮಾಡಲಾಗುವುದು. ರೈತರು ತಾಳ್ಮೆ ಕಳೆದುಕೊಳ್ಳದೆ ಬದುಕು ನಡೆಸಲಿ ಎಂದರು.

ಇದೇ ಸುದರ್ಭದಲ್ಲಿ ಶಾಸಕರು ಮತದಾರ ಪಟ್ಟಿ ಪರಿಷ್ಕರಣೆ ಯಲ್ಲಿ ಯೋಗ್ಯ ಮತ ದಾರರು ಯಾವ ಕಾರಣಕ್ಕೂ ಹೆಸರು ಕೈ ಬಿಟ್ಟು ಹೋಗದಂತೆ ಸೂಕ್ತ ಕಾಳಜಿ ವಹಿಸಲು, ಜನತೆಗೆ ತಿಳುವಳಿಕೆ ಕೊಟ್ಟು ಎಸ್ ಐ ಆರ್ ನಡೆಸಲು ಸೂಚಿಸಿದರು.

ಕಲಬುರಗಿ ದಕ್ಷಿಣ ಕ್ಷೇತ್ರದ ಉಸ್ತುವಾರಿ ಅಧಿಕಾರಿ, ಕುಡಾ ಆಯುಕ್ತರು ಶೈಲೆಂದ್ರ ಸಿಂಗ, ತಾ ಪಂ ಇ ಒ ಮಾನಪ್ಪ ಕಟ್ಟಿಮನಿ, ಗ್ರಾಮೀಣ ಕುಡಿಯುವ ನೀರು ಎ ಇ ಇ ರಾಮಚಂದ್ರ ಸೇರಿದಂತೆ ಅಧಿಕಾರಿಗಳು ಇದ್ದರು.

# ಆಹಾರ ವಿತರಣೆಯಲ್ಲಿ ಅವ್ಯವಸ್ಥೆ ಕಂಡರೆ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ



• **ಮಲ್ಲಮ್ಮ ನುಡಿ ವಾರ್ತೆ ಬೀದರ್**

ಜಿಲ್ಲೆಯಲ್ಲಿ ಮಕ್ಕಳಿಗೆ, ಮಹಿಳೆಯರಿಗೆ ದುರ್ಬಲರಿಗೆ ಹಿರಿಯರಿಗೆ ಆಹಾರ ವಿತರಣೆಯಲ್ಲಿ ಯಾವುದೇ ರೀತಿಯ ಅವ್ಯವಸ್ಥೆ ಕಂಡು ಬಂದಲ್ಲಿ ಆಯಾ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದೆಂದು ಕರ್ನಾಟಕ ರಾಜ್ಯ ಆಹಾರ ಆಯೋಗದ ಅಧ್ಯಕ್ಷರಾದ ಡಾ.ಹೆಚ್. ಕೃಷ್ಣ ಇಂದಿಲ್ಲಿ ತಿಳಿಸಿದರು.

ಬೀದರ ಜಿಲ್ಲೆಯಲ್ಲಿ 3 ದಿನಗಳ ಕಾಲ ಅನಿರೀಕ್ಷಿತ ಪ್ರವಾಸ ಕೈಗೊಂಡಿರುವ ಅವರು ಜುಲೈ 15 ರಂದು ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲಿಸಿದ ನಂತರ ಜುಲೈ 16 ರಂದು ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಆಯೋಗವು ನಾಲ್ಕು ಜನ ಸದಸ್ಯರ ತಂಡದೊಂದಿಗೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರವಾಸ ಹಮ್ಮಿಕೊಂಡಿದೆ. ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ 2013ರ ಅನ್ವಯ ಆಹಾರ ಪ್ರತಿಯೊಬ್ಬ ಬಡವರಿಗೆ ನಿರ್ಗತಿಕರಿಗೆ ಸರಕಾರವು ದುರ್ಬಲರಿಗೆ, ಮಕ್ಕಳಿಗೆ ಮಹಿಳೆಯರಿಗೆ ಆಹಾರ ಒದಗಿಸುವುದು ಮೂಲಭೂತ ಕರ್ತವ್ಯ, ಪ್ರತಿಯೊಬ್ಬರಿಗೂ ಆಹಾರದ ಹಕ್ಕು ಇದೆ ಎಂಸರು.

ಜಿಲ್ಲೆಯ ವಿವಿಧ ತಾಲೂಕುಗಳ ನ್ಯಾಯಬೆಲೆ ಅಂಗಡಿ, ಆಹಾರಧಾನ್ಯ ಸಗಟು ಮಳಿಗೆ, ಅಂಗನವಾಡಿ ಕೇಂದ್ರಗಳು, ಎಂ.ಎಸ್.ಪಿ.ಟಿ.ಸಿ ಶಾಲೆಗಳಲ್ಲಿ ಮಧ್ಯಾಹ್ನದ ಊಟ, ಆಸ್ಪತ್ರೆಗಳಲ್ಲಿ ಎಸ್.ಆರ್.ಸಿ ಘಟಕ, ವಿವಿಧ ಇಲಾಖೆಗಳ ಹಾಸ್ಟೆಲ್‌ಗಳಲ್ಲಿ ಆಹಾರ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಡಾ.ಕೃಷ್ಣ ಹೇಳಿದರು.

ಆಹಾರ ಸಂಬಂಧ ಎಲ್ಲ ಯೋಜನೆಗಳು ಸರಿಯಾಗಿ ಅನುಷ್ಠಾನ ಆಗುತ್ತಿವೆಯೆ ಎಂಬುದನ್ನು ಪರಿಶೀಲಿಸಲು ಈ ಅನಿರೀಕ್ಷಿತ ಪ್ರವಾಸ ಹಮ್ಮಿಕೊಳ್ಳಲಾಗಿದೆ. ತಾವು ಜುಲೈ 17ರ ವರೆಗೆ ಜಿಲ್ಲೆಯಲ್ಲಿದ್ದು, ಸಾರ್ವಜನಿಕರು ಆಹಾರ ಸಂಬಂಧಿತ ಯಾವುದಾದುರು ಆಹಾವಾಲುಗಳು ಇದ್ದಲ್ಲಿ ಸಾರ್ವಜನಿಕರು ನೇರವಾಗಿ ಮೊಬೈಲ್ ನಂಬರ 9448466099 ಹಾಗೂ 9945037681ಗೆ ಸಂಪರ್ಕಿಸಬಹುದಾಗಿದೆ ಎಂದರು.

ಜಿಲ್ಲೆಯಲ್ಲಿ ಒಟ್ಟು 150 ಪೆಟ್ರೋಲ್ ಬಂಕ್‌ಗಳಿವೆ ಎಲ್ಲ ಕಡೆ ನೀರು, ಗಾಳಿ ಹಾಗೂ ಶೌಚಾಲಯ ಕಡ್ಡಾಯವಾಗಿ ಉಚಿತವಾಗಿ ಲಭ್ಯವಾಗಬೇಕು ಎಂದರು. ಅಳತೆ ಮಾಪನ ಇಲಾಖೆ ಅಧಿಕಾರಿಗಳು ಖುದ್ದಾಗಿ ಭೇಟಿ ನೀಡಿ ಪರಿಶೀಲನೆ ನಡೆಸಬೇಕೆಂದು ಹೇಳಿದರು.

ಒಟ್ಟು 14 ಇಲಾಖೆಗಳು ಆಯೋಗದ ವ್ಯಾಪ್ತಿಗೆ ಒಳಪಡುತ್ತವೆ. ಗೋದಾಮುಗಳಿಂದ ಅಕ್ಕಿ ಕಳ್ಳ ಸಾಗಾಟಣೆ ನ್ಯಾಯಬೆಲೆ ಅಂಗಡಿಗಳಲ್ಲಿ ಅಸಮರ್ಪಕ ಆಹಾರ ವಿತರಣೆ, ಅಂಗನವಾಡಿ ಅಥವಾ ಹಾಸ್ಟೇಲ್ ಗಳಲ್ಲಿ ಅಸಮರ್ಪಕ ಆಹಾರ ವಿತರಣೆಯಂತಹ ದೂರುಗಳು ಇದ್ದಲ್ಲಿ ಸಾರ್ವಜನಿಕರು ನಮ್ಮ ಮೊಬೈಲ್‌ಗೆ ಕರೆ ಮಾಡಬಹುದು. ಗೌಪ್ಯವಾಗಿ ಅಹವಾಲು ಸಲ್ಲಿಸಬಹುದಾಗಿದೆ ಎಂದು ತಿಳಿಸಿದರು.

ಆಯೋಗದ ಸದಸ್ಯರಾದ ಮಾರುತಿ ದೊಡ್ಡಲಿಂಗಣ್ಣವರ ಲಿಂಗರಾಜ ಕೋಟೆ, ಸುಮಂತ ರಾವ್, ಕೆ.ಎಸ್.ವಿಜಯಲಕ್ಷ್ಮೀ ವೇದಿಕೆಯಲ್ಲಿದ್ದರು.

# ಕ್ರಿಶ್ಚಿಯನ್ ಸಮುದಾಯಕ್ಕೆ ಎಂಎಲ್‌ಸಿ ಸ್ಥಾನ ನೀಡುವಂತೆ ಖಂಡ್ರೆಗೆ ಮನವಿ

• **ಮಲ್ಲಮ್ಮ ನುಡಿ ವಾರ್ತೆ ಬೀದರ್**



ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ ಹಾಗೂ ಸಾಮಾಜಿಕ ಹೋರಾಟಗಾರ ಅನಿಲ್ ಕುಮಾರ್ ಜಾದವ್ ಅವರನ್ನು ವಿಧಾನ ಪರಿಷತ್ತಿನ ನಾಮನಿರ್ದೇಶಿತ ಸದಸ್ಯರಾಗಿ ನೇಮಕ ಮಾಡುವಂತೆ ಕರ್ನಾಟಕ ರಾಜ್ಯ ಕ್ರಿಶ್ಚಿಯನ್ ಹಕ್ಕುಗಳ ಸಮಿತಿ ವತಿಯಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ್ ಖಂಡ್ರೆ ಅವರಿಗೆ ಮನವಿ ಸಲ್ಲಿಸಲಾಯಿತು.

ಮನವಿ ಸಲ್ಲಿಸಿದ ಬಳಿಕ ಸಮಿತಿಯ ಮುಖಂಡ ಇಮ್ಮಾನ್ವೆಲ್ ಮಂದಕ್ನಳ್ಳಿ ಮಾತನಾಡಿ, ಅನಿಲ್ ಕುಮಾರ್ ಜಾದವ್ ಅವರು ಕಳೆದ ಎರಡು ದಶಕಗಳಿಂದ ಕಾಂಗ್ರೆಸ್ ಪಕ್ಷದಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದು, ಲೋಕಸಭೆ, ವಿಧಾನಸಭೆ, ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯತ್ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸಿದ್ದಾರೆ. ಅಲ್ಲದೆ, ಕಾಂಗ್ರೆಸ್ ಪಕ್ಷದ ತತ್ವ–ಸಿದ್ಧಾಂತಗಳನ್ನು ಜನರಿಗೆ ತಲುಪಿಸುವ ಕಾರ್ಯದಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದಾರೆ ಎಂದು ಹೇಳಿದರು. ಕಳೆದ 60 ವರ್ಷಗಳಿಂದ ಈ ಭಾಗದ ಕ್ರಿಶ್ಚಿಯನ್ ಸಮುದಾಯ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡುತ್ತಾ ಬಂದಿದ್ದರೂ, ಸಂಸದ, ಶಾಸಕ, ವಿಧಾನ ಪರಿಷತ್ ಸದಸ್ಯ ಅಥವಾ ಜಿಲ್ಲಾ ಪಂಚಾಯತ್ ಸದಸ್ಯ ಸ್ಥಾನಗಳಲ್ಲಿ ಸಮುದಾಯಕ್ಕೆ ಸಮರ್ಪಕ ಪ್ರಾತಿನಿಧ್ಯ ದೊರೆತಿಲ್ಲ. ಆದ್ದರಿಂದ ಈ ಬಾರಿ ನಾಮನಿರ್ದೇಶನಗೊಳ್ಳಲಿರುವ ಐದು ವಿಧಾನ ಪರಿಷತ್ ಸದಸ್ಯರ ಸ್ಥಾನಗಳಲ್ಲಿ ಒಂದನ್ನು ಕ್ರಿಶ್ಚಿಯನ್ ಸಮುದಾಯಕ್ಕೆ ಮೀಸಲಿಟ್ಟು, ಅನಿಲ್ ಕುಮಾರ್ ಜಾದವ್ ಅವರನ್ನು ನಾಮನಿರ್ದೇಶನ ಮಾಡಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

ಈ ಸಂದರ್ಭದಲ್ಲಿ ಕಾಂಗ್ರೆಸ್ ಯುವ ಮುಖಂಡರಾದ ಸುಧಾಕರ್ ಕೋಟೆ, ಗುಂಡಪ್ಪ ಕಮಠಾಣ, ಸಚಿನ್ ಬಾವಿದೊಡ್ಡಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಮೇರಾ ಯುವ ಭಾರತ ಕಾರ್ಯಕ್ರಮ: ಹೆಚ್ಚಿನ ನೋಂದಣಿ ಕಾರ್ಯ ಕೈಗೊಳ್ಳುವಂತೆ ಸೂಚನೆ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**



ಕೇಂದ್ರ ಸರ್ಕಾರವು ಮೇರಾ ಯುವ ಭಾರತ ಯೋಜನೆಯಡಿ ಯುವ ಸಮುದಾಯದಲ್ಲಿ ಯುವ ನಾಯಕತ್ವ, ಸಮುದಾಯ ಬೆಳವಣಿಗೆ, ಕ್ರೀಡೆ ಅಯೋಜನೆ ಸೇರಿದಂತೆ ರಾಷ್ಟ್ರೀಯ ಭಾತೃತ್ವ ಮೂಡಿಸಲು ಪ್ರಸಕ್ತ 2026–27ನೇ ಸಾಲಿನಲ್ಲಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲು ಉದ್ದೇಶಿಸಿದ್ದು, ಇದಕ್ಕಾಗಿ ಜಿಲ್ಲೆಯಲ್ಲಿ ಯುವ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ನೋಂದಣಿಯಾಗುವಂತೆ ಅಧಿಕಾರಿಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸುವಂತೆ ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಸೂಚನೆ ನೀಡಿದರು.

ಬುಧವಾರ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕೇಂದ್ರದ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯದ ಮೇರ ಅಯುವ ಭಾರತ ಕಚೇರಿಯಿಂದ 2026–27ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ ಜಾರಿಗೆ ಸಂಬಂಧಿಸಿದಂತೆ ಜರುಗಿದ "ಮೇರಾ ಭಾರತ್' ಜಿಲ್ಲಾ ಸಲಹಾ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, 15 ರಿಂದ 29 ವರ್ಷ ಯುವ ಯುವತಿಯರು ಹೆಸರು ನೊಂದಣಿ ಮಾಡಿಕೊಳ್ಳಲು ಅರ್ಹರಿದ್ದು, ಜಿಲ್ಲೆಯ ಎಲ್ಲಾ ಪ್ರೌಢ ಶಾಲೆ, ಪದವಿ ಪೂರ್ವ ಕಾಲೇಜು, ಪದವಿ ಕಾಲೇಜು, ಐ.ಟಿ.ಐ–ಡಿಪ್ಲೋಮಾ, ಇಂಜಿನೀಯರಿಂಗ್, ಮೆಡಿಕಲ್ ಕಾಲೇಜುಗಳಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ನೊಂದಣಿ ಮಾಡಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಮುಂದಿನ ದಿನದಲ್ಲಿ ನೊಂದಾಯಿತ ಯುವ ಜನರಿಗೆ ಕೇಂದ್ರ ಸರ್ಕಾರವು ಸ್ಥಳೀಯ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ಪೂರಕ ಕಾರ್ಯಕ್ರಮಗಳು, ಕೌಶಲ್ಯ ತರಬೇತಿ, ನಶಾ ಮುಕ್ತ ಭಾರತ, ಕ್ರೀಡಾಕೂಟಗಳ ಆಯೋಜನೆ ಮತ್ತು ಕ್ರೀಡಾ ಸಲಕರಣೆ ವಿತರಣೆ, ಯುವ ಕ್ಲಬ್ ಅಭಿವೃದ್ಧಿ, ವಿಕ್ಷಿತ್ ಭಾರತ ಯುವ ನಾಯಕತ್ವ ಬಲವರ್ಧನೆ ರಾಷ್ಟ್ರೀಯ ಯುವಜನೋತ್ಸವ ಆಯೋಜನೆದಂತಹ ಅನೇಕ ಕಾರ್ಯಕ್ರಮಗಳು ಹಮ್ಮಿಕೊಳ್ಳಲಿದ್ದು, ಪ್ರದೇಶದ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ. ಈ ನಿಟ್ಟಿನಲ್ಲಿ ಆಗಸ್ಟ್ 15ರ ವರೆಗೆ ನಡೆಯುವ ನೋಂದಣಿ ಅಭಿಯಾನದಲ್ಲಿ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿ ಸಮೂಹ ನೋಂದಣಿ ಮಾಡಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಅಲ್ಲದೆ ನೋಂದಣಿ ಕಾರ್ಯ ಯಶಸ್ವಿಗೆ ಪ್ರತಿ ಶಿಕ್ಷಣ ಸಂಸ್ಥೆಯಲ್ಲಿ 'ಮೇರಾ ಭಾರತ್' ಕ್ಯಾಂಪಸ್ ರಾಯಭಾರಿ ಮತ್ತು ನೋಡಲ್ ಅಧಿಕಾರಿ ನೇಮಿಸಬೇಕೆಂದ ಜಿಲ್ಲಾಧಿಕಾರಿಗಳು, ವಿದ್ಯಾರ್ಥಿಗಳ ಗರಿಷ್ಠ ನೋಂದಣಿಯನ್ನು ಸಂಸ್ಥೆ ಮುಖ್ಯಸ್ಥರು ಖಚಿತಪಡಿಸಿಕೊಳ್ಳಬೇಕೆಂದರು.

ಮೇರಾ ಯುವ ಭಾರತ ಅಧಿಕಾರಿ ಸುಮಿತ್ ಫರ್ಕಿ ಅವರು ಮಾತನಾಡಿ, 2026–27ನೇ ಸಾಲಿನ ಕ್ರಿಯಾ ಯೋಜನೆ, ಕಾರ್ಯಕ್ರಮಗಳ ರೂಪುರೇಷೆ ಕುರಿತು ಮಾಹಿತಿ ನೀಡಿದಲ್ಲದೆ ಜಿಲ್ಲೆಯಲ್ಲಿ ಈಗಾಗಲೆ ಜುಲೈ 1 ರಿಂದಲೆ ನೋಂದಣಿ ಆರಂಭವಾಗಿದ್ದು, ಇದೂವರೆಗೆ ತುಂಬಾ ಕಡಿಮೆ ಸಂಖ್ಯೆಯಲ್ಲಿ ನೋಂಣಿಯಾಗಿದೆ. ಜಿಲ್ಲೆಯ ಯುವ ಸಮೂಹ ಹೆಚ್ಚಿನ ಸಂಖ್ಯೆಯಲ್ಲಿ ನೋಂಣಿಗೆ ಇಲಾಖೆಗಳ ಸಹಕಾರ ಕೋರಿದಲ್ಲದೆ https://mybharat.gov.in/yuva_register ಲಿಂಕ್ ಮೂಲಕ 15 ರಿಂದ 29 ವಯಸ್ಸಿನ ಯುವ–ಯುವತಿಯರು ಆಗಸ್ಟ್ 15 ರೊಳಗೆ ನೋಂದಣಿ ಮಾಡಿಕೊಳ್ಳಬಹುದಾಗಿದೆ ಎಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕ ಜಗದೇವಪ್ಪ, ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರು, ಡಿ.ಡಿ.ಪಿ.ಐ, ಡಿ.ಡಿ.ಪಿ.ಯು, ಎನ್.ಸಿ.ಸಿ., ಕೌಶಲ್ಯಾಭಿವೃದ್ಧಿ ಸೇರಿದಂತೆ ಇನ್ನಿತರ ಅಧಿಕಾರಿಗಳು ಭಾಗವಹಿಸಿದ್ದರು.

# ಸಮವಸ್ತ್ರ ಸಮಾನತೆಯ ಸಂಕೇತ: ನಿಂಗಪ್ಪ ಮಣ್ಣೂರ





• **ಮಲ್ಲಮ್ಮ ನುಡಿ ವಾರ್ತೆ ಬೀದರ್**

ನಗರದ ಸರಸ್ವತಿ ಶಿಕ್ಷಣ ವಿಕಾಸ ಸಮಿತಿ ಸಂಚಾಲಿತ ಶ್ರೀ ವಿದ್ಯಾರಣ್ಯ ಪ್ರೌಢ ಶಾಲೆಯಲ್ಲಿ ಶುಕ್ರವಾರ ಸಮವಸ್ತ್ರ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಮಾರ್ಕೆಟ್ ಪೋಲಿಸ್ ಠಾಣೆಯ ನಿರೀಕ್ಷಕರಾದ ನಿಂಗಪ್ಪಾ ಮಣ್ಣೂರ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಶಿಸ್ತು ಅತ್ಯಂತ ಮುಖ್ಯವಾಗಿದ್ದು, ಸಮವಸ್ತ್ರವು ಸಮಾನತೆಯ ಪ್ರತೀಕವಾಗಿದೆ ಎಂದು ಹೇಳಿದರು. ಸಮವಸ್ತ್ರ ಧರಿಸುವುದರಿಂದ ಶ್ರೀಮಂತ–ಬಡವ, ಮೇಲು–ಕೀಳು ಎಂಬ ಭಾವನೆಗಳು ದೂರವಾಗಿ ಎಲ್ಲರಲ್ಲೂ ಸಮಾನ ಮನೋಭಾವ ಬೆಳೆಯುತ್ತದೆ ಎಂದು ತಿಳಿಸಿದರು.

ಸಮವಸ್ತ್ರವು ಕೇವಲ ಶಿಕ್ಷಣ ಕ್ಷೇತ್ರಕ್ಕೆ ಸೀಮಿತವಾಗಿಲ್ಲ. ಪ್ರತಿಯೊಂದು ಇಲಾಖೆ ಹಾಗೂ ವೃತ್ತಿಯಲ್ಲೂ ಸಮವಸ್ತ್ರಕ್ಕೆ ತನ್ನದೇ ಆದ ಗೌರವವಿದೆ. ದೇಶದ ರಕ್ಷಣೆಯಲ್ಲಿ ತೊಡಗಿರುವ ಸೈನಿಕರು ಕೂಡ ಸಮವಸ್ತ್ರವನ್ನು ಹೆಮ್ಮೆಯಿಂದ ಧರಿಸುತ್ತಾರೆ. ಒಂದೇ ಸಮವಸ್ತ್ರವನ್ನು ಧರಿಸುವವರು ತಪ್ಪು ಮಾಡಿದರೆ ಆ ಸಮವಸ್ತ್ರದ ಗೌರವಕ್ಕೆ ಧಕ್ಕೆಯಾಗುತ್ತದೆ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಈ ವೇಳೆ ಮಕ್ಕಳಲ್ಲಿ ಕಾನೂನು ಅರಿವು ಮೂಡಿಸುವ ಉದ್ದೇಶದಿಂದ ವಿವಿಧ ಸಹಾಯವಾಣಿ ಸಂಖ್ಯೆಗಳ ಕುರಿತು ಮಾಹಿತಿ ನೀಡಿದ ಅವರು, ಮಹಿಳೆಯರ ಸುರಕ್ಷತೆಗಾಗಿ 112, ಮಕ್ಕಳ ಮೇಲಿನ ದೌರ್ಜನ್ಯ ಹಾಗೂ ಶೋಷಣೆ ತಡೆಗಟ್ಟಲು 1098, ಸೈಬರ್ ವಂಚನೆಗಳಿಗೆ 1930 ಸಹಾಯವಾಣಿ ಸಂಖ್ಯೆಗೆ ಕರೆ ಮಾಡಬಹುದೆಂದು ತಿಳಿಸಿದರು. 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ವಾಹನ ನೀಡಬಾರದು. ಒಂದು ವೇಳೆ ವಾಹನ ನೀಡಿದರೆ ಅಪಘಾತ ಸಂಭವಿಸಿದಲ್ಲಿ ಪೋಷಕರೇ ಹೊಣೆಗಾರರಾಗಲಿದ್ದು, ರೂ. 25,000 ದಂಡ ಅಥವಾ ಕಾನೂನು ಕ್ರಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಅಧ್ಯಕ್ಷ ಪ್ರೊ. ಎಸ್.ಬಿ.ಸಜ್ಜನಶೆಟ್ಟಿ ಮಾತನಾಡಿ, ಸಮಾಜದಲ್ಲಿ ಒಂದು ಎಂಬ ಭಾವನೆ ಮೂಡಬೇಕಾದರೆ ಆರ್ಥಿಕ ಹಾಗೂ ಸಾಮಾಜಿಕ ಅಸಮಾನತೆ ನಿವಾರಣೆಯಾಗಬೇಕು. ಸಮವಸ್ತ್ರವು ಎಲ್ಲರಲ್ಲೂ ಏಕತೆ, ಶಿಸ್ತು ಮತ್ತು ಸಮಾನತೆಯ ಭಾವನೆ ಬೆಳೆಸುತ್ತದೆ. ಶಿಕ್ಷಣ, ಸಂಸ್ಕಾರ ಹಾಗೂ ಕೌಶಲ್ಯಗಳಿಂದ ಮಾತ್ರ ಉತ್ತಮ ವ್ಯಕ್ತಿತ್ವ ನಿರ್ಮಾಣ ಸಾಧ್ಯ ಎಂದು ಹೇಳಿದರು. ಸಮವಸ್ತ್ರ ದಿನಾಚರಣೆ ಅಂಗವಾಗಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ವೇದಿಕೆಯಲ್ಲಿ ಸಂಸ್ಥೆಯ ಕಾರ್ಯದರ್ಶಿ ಹನುಮಂತರಾವ ಪಾಟೀಲ, ಶಾಲೆಯ ಮುಖ್ಯಗುರು ಶ್ರೀಮತಿ ಪ್ರತಿಭಾ ಚಾಮಾ, ಪೊಲೀಸ್ ಪೇದೆ ಶ್ರೀಮತಿ ಅಶ್ವಿನಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿ ಸುಪ್ರಿಯಾ ಸಂಜುಕುಮಾರ ಸ್ವಾಗತ ಹಾಗೂ ಅತಿಥಿ ಪರಿಚಯ ಮಾಡಿದರು. ಆದಿತ್ಯ ಅನಿಲಕುಮಾರ ಕಾರ್ಯಕ್ರಮ ನಿರೂಪಿಸಿದರು. ರಿತಿಕಾ ರೇವಣಪ್ಪ ವಂದಿಸಿದರು. ಶಾಂತಿ ಮಂತ್ರದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

# ಶರಣಬಸವ ವಿವಿ ವಿಶೇಷ ಉದ್ಯೋಗ ಮೇಳದಲ್ಲಿ 132 ವಿದ್ಯಾರ್ಥಿಗಳಿಗೆ ಉದ್ಯೋಗ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಶರಣಬಸವ ವಿಶ್ವವಿದ್ಯಾಲಯದ ವತಿಯಿಂದ ಆಯೋಜಿಸಿದ್ದ ವಿಶೇಷ ಉದ್ಯೋಗ ಮೇಳದಲ್ಲಿ, ವಿವಿಧ ವಿಶ್ವವಿದ್ಯಾಲಯಗಳ 132 ವಿದ್ಯಾರ್ಥಿಗಳು ಪ್ರತಿಷ್ಠಿತ ಸಾಫ್ಟ್‌ವೇರ್ ಹಾಗೂ ಹಾರ್ಡ್‌ವೇರ್ ಕಂಪನಿಗಳಲ್ಲಿ ಉದ್ಯೋಗ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಆಯ್ಕೆಯಾದ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ. 3 ಲಕ್ಷದಿಂದ ರೂ. 4 ಲಕ್ಷದವರೆಗೆ ವೇತನ ಪ್ಯಾಕೇಜ್ ಲಭಿಸಿದೆ.

ಈ ಕುರಿತು ಗುರುವಾರ ಪತ್ರಿಕಾ ಪ್ರಕಟಣೆ ನೀಡಿದ ಶರಣಬಸವ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ. ಅನಿಲಕುಮಾರ ಬಿಡವೆ, ಶರಣಬಸವ ವಿಶ್ವವಿದ್ಯಾಲಯದ ಕುಲಾಧಿಪತಿಗಳು ಹಾಗೂ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಮಾತೋಶ್ರೀ ಪೂಜ್ಯ ಡಾ. ದಾಕ್ಷಾಯಿಣಿ ಅವ್ವಾಜಿ ಅವರ ನಿರ್ದೇಶನದಂತೆ ವಿದ್ಯಾರ್ಥಿಗಳಿಗೆ ಹೆಚ್ಚಿನ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಉದ್ದೇಶದಿಂದ ಈ ವಿಶೇಷ ಉದ್ಯೋಗ ಮೇಳವನ್ನು ಹಮ್ಮಿಕೊಳ್ಳಲಾಗಿತ್ತು ಎಂದು ತಿಳಿಸಿದರು.

ಈ ಉದ್ಯೋಗ ಮೇಳದಲ್ಲಿ ದೇಶದ 10ಕ್ಕೂ ಹೆಚ್ಚು ಪ್ರಮುಖ ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್ ಕಂಪನಿಗಳು ಭಾಗವಹಿಸಿದ್ದವು. ಶರಣಬಸವ ವಿಶ್ವವಿದ್ಯಾಲಯ, ರೇವಾ ವಿಶ್ವವಿದ್ಯಾಲಯ ಹಾಗೂ ಕಲ್ಯಾಣ ಕರ್ನಾಟಕ ಭಾಗದ ವಿವಿಧ ಇಂಜಿನಿಯರಿಂಗ್ ಕಾಲೇಜುಗಳ ಸುಮಾರು 1,500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸಂದರ್ಶನದಲ್ಲಿ ಪಾಲ್ಗೊಂಡಿದ್ದರು. ಈ ನೇಮಕಾತಿ ಅಭಿಯಾನವನ್ನು ಶರಣಬಸವ ವಿಶ್ವವಿದ್ಯಾಲಯದ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಇಂಜಿನಿಯರಿಂಗ್ ವಿಭಾಗ (ಮಹಿಳೆಯರಿಗಾಗಿ ಮಾತ್ರ) ಆಯೋಜಿಸಿತ್ತು.



ಒಟ್ಟು ಆಯ್ಕೆಯಾದ 132 ವಿದ್ಯಾರ್ಥಿಗಳ ಪೈಕಿ 127 ವಿದ್ಯಾರ್ಥಿಗಳು ಶರಣಬಸವ ವಿಶ್ವವಿದ್ಯಾಲಯದವರು, ಬೀದರನ ಲಿಂಗರಾಜ ಅಪ್ಪ ಇಂಜಿನಿಯರಿಂಗ್ ಕಾಲೇಜಿನ ಮೂವರು ಹಾಗೂ ರೇವಾ ವಿಶ್ವವಿದ್ಯಾಲಯದ ಇಬ್ಬರು ವಿದ್ಯಾರ್ಥಿಗಳು ಈ ಉದ್ಯೋಗ ಮೇಳದಲ್ಲಿ ಆಯ್ಕೆಯಾಗಿದ್ದಾರೆ.

ಶರಣಬಸವ ವಿಶ್ವವಿದ್ಯಾಲಯದ 127 ವಿದ್ಯಾರ್ಥಿಗಳಲ್ಲಿ 62 ವಿದ್ಯಾರ್ಥಿಗಳು ಮಹಿಳೆಯರಿಗಾಗಿ ವಿಶೇಷವಾಗಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಇಂಜಿನಿಯರಿಂಗ್ ವಿಭಾಗಗಳ ವಿದ್ಯಾರ್ಥಿನಿಯರಾಗಿದ್ದಾರೆ. ಉಳಿದ 65 ವಿದ್ಯಾರ್ಥಿಗಳು ಸಹಶಿಕ್ಷಣ ವಿಭಾಗದ ವಿದ್ಯಾರ್ಥಿಗಳು ಉದ್ಯೋಗ ಪಡೆಯುವಲ್ಲಿ ಯಶಸ್ವಿಯಾಗಿರುವುದು ವಿಶೇಷವಾಗಿದೆ. ಸೀಕ್ ನಿಯೋ–ಎಸ್‌ಡಬ್ಲ್ಯೂ ಸಂಸ್ಥೆ ಇಬ್ಬರು ವಿದ್ಯಾರ್ಥಿಗಳನ್ನು ವಾರ್ಷಿಕ ರೂ. 4 ಲಕ್ಷ ವೇತನದೊಂದಿಗೆ ನೇಮಕ ಮಾಡಿಕೊಂಡಿದೆ. ಟ್ರೇಜೆಂಟ್ ಹಾಗೂ ಟೆಗಾಸಾಫ್ಟ್ ಸಂಸ್ಥೆಗಳು ತಲಾ ಒಬ್ಬ ವಿದ್ಯಾರ್ಥಿಗೆ ರೂ. 4 ಲಕ್ಷ ವಾರ್ಷಿಕ ವೇತನದ ಉದ್ಯೋಗ ನೀಡಿವೆ.

ತೆಲಂಗಾಣದ ಜಹೀರಾಬಾದ್‌ನ ಎಂಆರ್‌ಎಫ್ ಟೈರ್ಸ್ ಸಂಸ್ಥೆ 38 ವಿದ್ಯಾರ್ಥಿಗಳಿಗೆ ವಾರ್ಷಿಕ ರೂ. 3 ಲಕ್ಷ ವೇತನದ ಉದ್ಯೋಗ ನೀಡಿದೆ. ಟಿವಿಎಸ್–ಉಪಾಸನೆ ಸಂಸ್ಥೆ 16 ವಿದ್ಯಾರ್ಥಿಗಳನ್ನು, ಕ್ಯಾಡ್‌ಮ್ಯಾಕ್ಸ್ ಸಂಸ್ಥೆ 13 ವಿದ್ಯಾರ್ಥಿಗಳನ್ನು ತಲಾ ರೂ. 3 ಲಕ್ಷ ವಾರ್ಷಿಕ ವೇತನದೊಂದಿಗೆ ನೇಮಕ ಮಾಡಿಕೊಂಡಿವೆ. ಇದಲ್ಲದೆ, ಪ್ರಮುಖ ಸಾಫ್ಟ್‌ವೇರ್ ಸಂಸ್ಥೆಯಾದ ಜೇನಿತ್ರಾ ಕಂಪನಿ 45 ವಿದ್ಯಾರ್ಥಿಗಳನ್ನು ವಾರ್ಷಿಕ ರೂ. 3 ಲಕ್ಷ ವೇತನದೊಂದಿಗೆ ನೇಮಕಾತಿಗೆ ಶಾರ್ಟ್‌ಲಿಸ್ಟ್ ಮಾಡಿದೆ. ಹ್ಯಾಪಿ ಮೈಂಡ್ ಎಐ ಸಂಸ್ಥೆ 16 ವಿದ್ಯಾರ್ಥಿಗಳಿಗೆ ವಾರ್ಷಿಕ ರೂ. 2 ಲಕ್ಷ ವೇತನದ ಉದ್ಯೋಗ ನೀಡಿದೆ.

ಈ ಸಾಧನೆಗೆ ಕಾರಣರಾದ ವಿಶ್ವವಿದ್ಯಾಲಯದ ಅಧಿಕಾರಿಗಳು ಹಾಗೂ

ವಿವಿಧ ವಿಭಾಗಗಳ ಬೋಧಕ ಸಿಬ್ಬಂದಿಯನ್ನು ಕುಲಾಧಿಪತಿಗಳಾದ ಮಾತೋಶ್ರೀ ಪೂಜ್ಯ ಡಾ. ದಾಕ್ಷಾಯಿಣಿ ಅವ್ವಾಜಿಯವರು ಅಭಿನಂದಿಸಿದ್ದಾರೆ. ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಬಸವರಾಜ ದೇಶಮುಖ, ಉಪಕುಲಪತಿ ಪ್ರೊ. ಅನಿಲಕುಮಾರ ಬಿಡವೆ, ಕುಲಸಚಿವರಾದ ಡಾ. ಲಕ್ಷ್ಮಿ ಪಾಟೀಲ ಮಾಕಾ, ಮೌಲ್ಯಮಾಪನ ಕುಲಸಚಿವ ಡಾ. ಎಸ್. ಎಚ್. ಹೊನ್ನಳ್ಳಿ, ಡೀನ್ ಡಾ. ಶಿವಕುಮಾರ ಜವಳಿಗಿ ಸೇರಿದಂತೆ ಹಲವು ಗಣ್ಯರು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಬೋಧಕ ವೃಂದವನ್ನು ಅಭಿನಂದಿಸಿ, ವಿದ್ಯಾರ್ಥಿಗಳ ಈ ಸಾಧನೆ ಸಂಸ್ಥೆಯ ಶೈಕ್ಷಣಿಕ ಗುಣಮಟ್ಟ ಹಾಗೂ ಉದ್ಯೋಗಮುಖಿ ಶಿಕ್ಷಣಕ್ಕೆ ಸಾಕ್ಷಿಯಾಗಿದೆ ಎಂದು ತಿಳಿಸಿದ್ದಾರೆ.

IN THE COURT OF THE ADDL CIVIL JUDGE AND JMFC AT BASAVAKALYAN
Crl Misc No. 1418/2026
Petitioners …
Nagappa and others
Vs
Respondent …
The Tahasildar Basavakalyan
PETITION U/SEC 13(3) OF BIRTH AND DEATH REGISTRATION ACT 1969
PAPER PUBLICATION
Whereas the above named petitioner has filed petition under section 13(3) of Birth & Death Registration Act 1969 for issue the direction to respondent to give death certificate of petitioners Brother by name "RAVI S/O LAXMAN", who was died on 22/01/2019, in the house at village Mudbiwadi, Tq: Basavakalyan, Dist: Bidar.
Hence this paper publication is issued to all concerned person to file necessary objection if any on 24/8/2026 at 11:00 A.M.
Given under my hand seal of the court on this 16/7/2026
// By order of the court//
Chief Ministerial officer
Addl.Civil Judge & JMFC Court
Basavakalyan.

# ವಿಶ್ವ ಜನಸಂಖ್ಯಾ ದಿನಾಚರಣೆ, ರಾಷ್ಟ್ರೀಯ ಹಾವು ಕಡಿತ ನಿಯಂತ್ರಣ ಜಾಗೃತಿ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಇಲಾಖೆ, ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಘಟಕ, ತಾಲೂಕಾ ಆರೋಗ್ಯಾಧಿಕಾರಿಗಳ ಕಾರ್ಯಾಲಯ ಕೊಪ್ಪಳ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಕೂಕನಪ್ಪಳಿ ಇವರ ಸಂಯುಕ್ತಾಶ್ರಯದಲ್ಲಿ ಅಂಗನವಾಡಿ ಕೇಂದ್ರದಲ್ಲಿ ವಿಶ್ವ ಜನಸಂಖ್ಯಾ ದಿನಾಚರಣೆ ಹಾಗೂ ರಾಷ್ಟ್ರೀಯ ಹಾವು ಕಡಿತ ನಿಯಂತ್ರಣ ಜಾಗೃತಿ ಕಾರ್ಯಕ್ರಮ ಬುಧವಾರ ನಡೆಯಿತು. ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಗಂಗಮ್ಮ ಕೆ. ಅವರು ಮಾತನಾಡಿ, "18 ವರ್ಷ ವಯಸ್ಸಿನ ಮೇಲ್ಪಟ್ಟ ಮದುವೆ ಮತ್ತು ಮಕ್ಕಳ ನಡುವೆ ಕನಿಷ್ಠ 3 ವರ್ಷಗಳ ಅಂತರ ಕಾಪಾಡುವುದರಿಂದ ತಾಯಿ ಮತ್ತು ಮಕ್ಕಳ ಆರೋಗ್ಯ ವೃದ್ಧಿಸುವುದರೊಂದಿಗೆ ಅನಗತ್ಯ ಗರ್ಭಧಾರಣೆಗಳನ್ನು ತಡೆಗಟ್ಟಬಹುದು" ಎಂಬ ಘೋಷವಾಕ್ಯದೊಂದಿಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ಕಾರ್ಯಕ್ರಮದ ಉದ್ದೇಶ ಕುಟುಂಬ ಕಲ್ಯಾಣ ಯೋಜನೆಯ ವಿಧಾನಗಳ ಬಗ್ಗೆ ಅರ್ಹದಂಪತಿಗಳಿಗೆ ಅರಿವು ಮೂಡಿಸುವುದಾಗಿದೆ ಎಂದರು. ಒಂದು ಮಗುವಿನಿಂದ ಇನ್ನೊಂದು ಮಗುವಿಗೆ ಕನಿಷ್ಠ 3 ರಿಂದ 4 ವರ್ಷ ಅಂತರ ಕಾಪಾಡಲು ಕುಟುಂಬ ಕಲ್ಯಾಣ ಯೋಜನೆಯ ತಾತ್ಕಾಲಿಕ ಹೊಸ ವಿಧಾನಗಳಾದ 3 ತಿಂಗಳಿಗೊಂದು ಅಂತರ ಚುಚ್ಚುಮದ್ದು, ವಾರಕ್ಕೆ 2 ಬಾರಿ ಛಾಯಾ ನುಂಗುವ ಮಾತ್ರೆ, ಪ್ರಸವ ನಂತರ 5 ರಿಂದ 10 ವರ್ಷಗಳವರೆಗೆ ಕಾಪರ್–ಟಿ, ಪುರುಷರು ಬಳಸುವ ನಿರೋಧ್ ಬಳಸಿ, ಹೆರಿಗೆಗಳ ನಡುವೆ ಅಂತರ ಕಾಪಾಡಿಬೇಕು. ಅಂತರ ಕಾಪಾಡುವುದುರಿಂದ ತಾಯಿ ಮತ್ತು ಶಿಶುಗಳ ಆರೋಗ್ಯ ಸುರಕ್ಷಿತವಾಗಿಡಬಹುದು. ಮೇಲಿಂದ ಮೇಲೆ ಹೆರಿಗೆ ಆಗುವುದರಿಂದ ತಾಯಿಗೆ ಗರ್ಭಕೋಶದ ತೊಂದರೆ ಉಂಟಾಗುತ್ತದೆ. ಆದ್ದರಿಂದ ಪ್ರತಿಯೊಬ್ಬ ಹೆರಿಗೆಯಾದ ಹೆಣ್ಣುಮಕ್ಕಳು ಯಾವುದಾದರೂ ಒಂದು ಕುಟುಂಬ ಕಲ್ಯಾಣ ಯೋಜನೆಗಳ ವಿಧಾನಗಳನ್ನ ಬಳಸುವುದರಿಂದ ಅಂತರ ಕಾಪಾಡಬಹುದು. ಹೆಣ್ಣಿರಲಿ–ಗಂಡಿರಲಿ ಮಗು ಒಂದು ಅಥವಾ ಎರಡು ಮಕ್ಕಳು ಆದ ಮೇಲೆ ಶಾಶ್ವತ ವಿಧಾನಗಳಾದ ಮಹಿಳೆಯರಿಗೆ ಉದರ ದರ್ಶಕ ಶಸ್ತ್ರಚಿಕಿತ್ಸೆ ಹಾಗೂ ಪುರುಷರಿಗೆ ಎನ್.ಎಸ್.ವಿ ಶಸ್ತ್ರಚಿಕಿತ್ಸೆ ಉಚಿತವಾಗಿ ಮಾಡಲಾಗುತ್ತದೆ. ಶಸ್ತ್ರಚಿಕಿತ್ಸೆ ನಂತರ ಅವರ ಖಾತೆಗೆ ಗೌರವಧನ ಜಮೆ ಮಾಡಲಾಗುತ್ತದೆ. ಇದ–ರಿಂದ ಕುಟುಂಬದ ಆರ್ಥಿಕ ಸ್ಥಿತಿ ಉತ್ತಮವಾಗಿರುತ್ತದೆ. ಚಿಕ್ಕಸಂಸಾರ



ಚೊಕ್ಕಸಂಸಾರ ಎಂಬುನ್ನು ಅರಿತುಕೊಂಡು ಎಲ್ಲರೂ ಉತ್ತಮ ಜೀವನ ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಎಲ್ ವಿ ಸಜ್ಜನ್ ಅವರು ಮಾತನಾಡಿ, ಹಾವು ಕಡಿತದಿಂದ ಉಂಟಾಗುವ ಮರಣವನ್ನು ನಿಯಂತ್ರಿಸುವ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ಭಾರತ ಹಳ್ಳಿಗಳ ದೇಶ ಶೇ. 70 ಕ್ಕಿಂತಲೂ ಹೆಚ್ಚು ಜನರು ಕೃಷಿಯಲ್ಲಿ ಅವಲಂಬಿತರಾಗಿದ್ದಾರೆ. ಭಾರತದಲ್ಲಿ ಪ್ರಮುಖ 4 ವಿಷಕಾರಿ ಹಾವುಗಳಾದ ನಾಗರಹಾವು, ಕಟ್ಟಾವು, ಕೊಳಕುಮಂಡಲ ಹಾವು ಹಾಗೂ ಗರಗಸ ಮಂಡಲ ಹಾವು ಕಡಿತದಿಂದ ಉಂಟಾಗುವ ಸಾವುಗಳಲ್ಲಿ 90% ಅಧಿಕ ಸಾವುಗಳಿಗೆ ಕಾರಣವಾಗುತ್ತವೆ. ಹಾಗಾಗಿ ಈ 4 ಹಾವುಗಳ ಬಗ್ಗೆ ಎಚ್ಚರಿಗೆ ವಹಿಸಬೇಕು ನಾಗರಹಾವು ಬಿಟ್ಟು ಉಳಿತ 3 ವಿಷಕಾರಿ ಹಾವುಗಳು ರಾತ್ರಿವೇಳೆ ಹೆಚ್ಚು ಚಟುವಟಿಕೆಯಿಂದಿರುತ್ತವೆ. ರಾತ್ರಿವೇಳೆ ಹೊರಗಡೆ ಹೋಗುವಾಗ ಟಾರ್ಚ್ ಬಳಸಬೇಕು. ಮನೆ ಅಂಗಳವನ್ನು ಇಲಿ ಹೆಗ್ಗನಗಳಂತಹ ಹಾವುಗಳು ತಿನ್ನುವ ಜೀವಿಗಳಿಂದ ಮುಕ್ತವಾಗಿಸುವುದು. ಹಾವುಗಳು ತಿನ್ನುವ ಜೀವಿಗಳಿಂದ ಮುಕ್ತವಾಗಿಸುವುದು. ಮನೆಯಂಗಳ ಅಥವಾ ಹೊಲಗದ್ದೆಗಳಲ್ಲಿ ಸಾಮಾನ್ಯವಾಗಿ ತಿರುಗಾಡುವ ಸ್ಥಳಗಳಲ್ಲಿ ಗಿಡಗಂಟಿಗಳನ್ನು ಕಡಿದು ಸ್ವಚ್ಛವಾಗಿಟ್ಟುಕೊಳ್ಳುವುದು ಎಂದರು. ಹಾವುಗಳಿರುವ ಸಾಧ್ಯತೆ ಹೆಚ್ಚಿರುವ ಸ್ಥಳಗಳಲ್ಲಿ ಕೆಲಸ ಮಾಡುವಾಗ ಶೂಗಳನ್ನು ಬಳಸುವುದು. ರಾತ್ರಿ ಮನೆಯ ಹೊರಗೆ ಹಾಗೂ ಹೊಲಗದ್ದೆಗಳಲ್ಲಿ ಮಲಗಬೇಕಾದಾಗ ನೆಲದಲ್ಲಿ ಮಲಗದೆ ಎತ್ತರ ಪ್ರದೇಶದ ಮಂಚ ಬಳಸುವುದು, ನೆಲದಲ್ಲಿ ಮಲಗಲೇ ಬೇಕೆಂದರೆ ಕಡ್ಡಾಯವಾಗಿ ಸೊಳ್ಳೆಪರದೆ ಬಳಸುವುದು ಹಾಗೂ ರೈತರು ಹೊಲದಲ್ಲಿ ದನ–ಕರಗಳಿಗೆ ಮೇವು ಹಾಗೂ ಹಸಿಹುಲ್ಲು ಕಿಳುವಾಗ ಕುಡುಗೋಲು ಬಳಸಬೇಕು. ಒಂದು ವೇಳೆ ಹಾವು ಕಚ್ಚಿದರೆ ತಕ್ಷಣ ಸಮೀಪದ ಸರ್ಕಾರಿ ಆಸ್ಪತ್ರೆಗೆ 40 ನಿಮಿಷದೊಳಗಾಗಿ ಹೋಗಿ ಚಿಕಿತ್ಸೆ ಪಡೆದುಕೊಳ್ಳಬೇಕು. ಹಾವು ಕಡೆದ ವ್ಯಕ್ತಿಯನ್ನು ಸಮಾದಾನ ಪಡಿಸಿ, ಗಾಬರಿ ಪಡಿಸಬೇಡಿ. ಹಾವಿನಿಂದ ನಿಧಾನವಾಗಿ ದೂರ ಸರಿಯಿರಿ. ರಕ್ತಬಂಧಕಪಟ್ಟಿ ಕಟ್ಟಬೇಡಿ. ಹಾವು ಕಡಿತಕ್ಕೊಳಗಾದ ವ್ಯಕ್ತಿಯನ್ನು ಎಡಭಾಗಕ್ಕೆ ಮಲಗಿಸಿ ಕಚ್ಚಿದ ಭಾಗವನ್ನು ಅಲುಗಾಡದಂತೆ ನೋಡಿಕೊಳ್ಳಿ. ಗಾಯವನ್ನು ಕತ್ತರಿಸಬೇಡಿ, ಏನನ್ನು ಹಚ್ಚಬೇಡಿ. ಹಾವು ಕಚ್ಚಿದ ವ್ಯಕ್ತಿಗೆ ಆಸ್ಪತ್ರೆಯಲ್ಲಿಯೇ ಚಿಕಿತ್ಸೆ ಕೊಡಿಸಿ. ನಾಟಿ ಔಷಧ ಅಥವಾ ಅಸುರಕ್ಷಿತ ಚಿಕಿತ್ಸಾ ಪದ್ಧತಿಯನ್ನು ಅವಲಂಬಿಸಬೇಡಿ. ಒಟ್ಟಾರೆಯಾಗಿ ಪ್ರತಿಯೊಬ್ಬರೂ ತಮ್ಮ ತಮ್ಮ ಮನೆಯ ಸುತ್ತ–ಮುತ್ತಲಿನ ಪ್ರದೇಶ ಸ್ವಚ್ಛತೆಯಿಂದ ಇಟ್ಟುಕೊಂಡು ಇದರ ಬಗ್ಗೆ ಇತರರಿಗೂ ಮಾಹಿತಿ ನೀಡಿ, ಜಾಗೃತರಾಗಬೇಕೆಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಹಿರಿಯ ಆರೋಗ್ಯ ಸುರಕ್ಷಾಧಿಕಾರರಿಗಳು, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳು, ಆಶಾ ಕಾರ್ಯಕರ್ತೆಯರು, ಗ್ರಾಮದ ನಾಗರಿಕರು, ಗರ್ಭಿಣಿ ಬಾಣಂತಿಯರು ಭಾಗವಹಿಸಿದ್ದರು.

# ಅಕ್ಕಪಡೆಯಿಂದ ಮಹಿಳಾ ಸುರಕ್ಷತೆಗೆ ಮನ್ನಣೆ



• ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ

ಅಕ್ಷರ ಜಗತ್ತಿಗೆ ತೆರೆದುಕೊಳ್ಳುವ ಮೂಲಕ ಸ್ತ್ರೀ ಲೋಕ ಸಬಲೀಕರಣಗೊಳ್ಳುತ್ತದೆ. ಶೈಕ್ಷಣಿಕ ಸಾಧನೆಯಿಂದ ಮಹಿಳೆಯರಿಗೆ ವಿಶೇಷ ಅಸ್ಮಿತೆ ಕಂಡುಕೊಳ್ಳಲು ಸಾಧ್ಯ ಎಂದು ಅಕ್ಕಪಡೆ ರಾಜ್ಯ ಸಂಯೋಜಕಿ ಶೈನಿ ಪ್ರದೀಪ್ ಗುಂಟಿ ಹೇಳಿದರು. ಇಲ್ಲಿನ ಪೊಲೀಸ್ ವೃತ್ತ ನಿರೀಕ್ಷಕರ ಕಚೇರಿ ಹಾಗೂ ಬೀದರ ಹಾಗೂ ಬಸವಕಲ್ಯಾಣ ಅಕ್ಕಪಡೆ ವತಿಯಿಂದ ನಗರದ ಶ್ರೀ ಬಸವೇಶ್ವರ ಪದವಿ ಪೂರ್ವ ಹಾಗೂ ಪದವಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ 'ಅಕ್ಕಪಡೆ ಕ್ಯೂಆರ್ ಕೋಡ್ ತಾಂತ್ರಜ್ಞಾನದ ಪ್ರಾಯೋಗಿಕ ಪರೀಕ್ಷೆ ಮತ್ತು ವಿದ್ಯಾರ್ಥಿಗಳೊಂದಿಗೆ ಸಂವಾದ' ಸಮಾರಂಭದಲ್ಲಿ ಮಾತನಾಡಿದ ಅವರು, ಶಿಕ್ಷಣ ಮತ್ತು ಅರಿವಿನಿಂದ ಜಾಗೃತ ಸಮಾಜ ನಿರ್ಮಾಣವಾಗುತ್ತದೆ ಎಂದರು.

ಹಲವು ಮಹಿಳೆಯರು ಅಕ್ಷರಗಳಿಂದ ವಂಚಿತರಾಗಿದ್ದಾರೆ. ನಿಮಗೆ ದೊರೆತ ಕಾಲೇಜು ಶಿಕ್ಷಣ ಪಡೆಯುವ ಅವಕಾಶ ಪೂರ್ಣಗೊಳಿಸಿ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧರಾಗಿ. ಯಾವುದೇ ಆಕರ್ಷಣೆಗಳಿಗೆ ಒಳಗಾಗದೆ ಓದು ಅಧ್ಯಯನದಿಂದ ಬದುಕು ಕಟ್ಟಿಕೊಳ್ಳಿ ಎಂದರು.

ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ , ಅತ್ಯಾಚಾರ, ಬಾಲ್ಯ ವಿವಾಹ ತಡೆಯುವ ಹಾಗೂ ಮಹಿಳೆಯರಿಗೆ ರಕ್ಷಣೆ ಮತ್ತು ಸುರಕ್ಷತೆ ಒದಗಿಸುವ ಉದ್ದೇಶದಿಂದ ಅಕ್ಕಪಡೆ ಸಕ್ರಿಯವಾಗಿದೆ. ಸಾರ್ವಜನಿಕ ಮತ್ತು ವೈಯಕ್ತಿಕ ವಲಯದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ತಡೆಯಲು ಮತ್ತು ದೌರ್ಜನ್ಯದಿಂದ ಪಾರಾಗಲು ಪೊಲೀಸ್ ಇಲಾಖೆಗೆ ತಿಳಿಸುವ ದಾರಿಯಾಗಿ ಕ್ಯೂಆರ್ ಕೋಡ್ ನ ಹೊಸ ತಂತ್ರಜ್ಞಾನ ಪರಿಚಯಿಸಲಾಗುತ್ತಿದೆ ಎಂದರು.

ಸಿಪಿಐ ಅಲಿಸಾಬ್ ಮಾತನಾಡಿ ಮಹಿಳೆಯರ ಮೇಲಿನ ಯಾವುದೇ ಬಗೆಯ ಹಿಂಸೆಯನ್ನು ಅತ್ಯಂತ ಗೌಪ್ಯವಾಗಿ ಪೊಲೀಸ್ ಇಲಾಖೆಗೆ ಸಲ್ಲಿಸಲು ಅಕ್ಕಪಡೆಯಿಂದ ಕ್ಯೂಆರ್ ತಾಂತ್ರಿಕವಾಗಿ ನಿರ್ಮಿಸಲಾಗಿದೆ. ಇದರ ಪರೀಕ್ಷಾರ್ಥ ಪ್ರಯೋಗಿಕವಾಗಿ ಉಪಯೋಗಿಸಲಾಗಿದೆ. ಅದರ ಉಪಯುಕ್ತತೆ ಎಲ್ಲರೂ ಪಡೆಯಲಿ. ಅದಕ್ಕೂ ಮೊದಲು ತಾಂತ್ರಿಕ ಅನುಕೂಲತೆ ಮತ್ತು ಅನಾನುಕೂಲ ಕುರಿತು ಮಾಹಿತಿ ನೀಡಿ ಎಂದರು. ಶ್ರೀ ಬಸವೇಶ್ವರ ಪದವಿ ಕಾಲೇಜು ಪ್ರಾಚಾರ್ಯರಾದ ಡಾ. ಭೀಮಾಶಂಕರ ಬಿರಾದಾರ ಮಾತನಾಡಿಬೀದರ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಅವರ ಮಾರ್ಗದರ್ಶನ ಮತ್ತು ಸತತ ಪ್ರಯತ್ನದ ಫಲವಾಗಿ ಅಕ್ಕಪಡೆಯವರ ಶ್ರಮ, ಕೆಲಸ ಮತ್ತು ಚಾಕಚಕ್ಯತೆ ಇಡೀ ರಾಜ್ಯದ ಗಮನ ಸೆಳೆದಿದೆ. ಶಾಲಾ ಕಾಲೇಜು ವಿದ್ಯಾರ್ಥಿನಿಯರಿಗೆ, ಮಹಿಳೆಯರಿಗೆ ಅಪರಾಧದ ಸ್ವರೂಪದ ಬಗ್ಗೆ ಅರಿವು ಮೂಡಿಸುವ ಅಕ್ಕಪಡೆ ಮತ್ತು ಪೊಲೀಸ್ ಇಲಾಖೆಯವರ ಕೆಲಸ ಶ್ಲಾಘನೀಯ. ಅತ್ಯಂತ ಸೂಕ್ಷ್ಮವಾಗಿ ನಡೆಯುವ ಮಹಿಳೆಯರ ಮೇಲಿನ ದೌರ್ಜನ್ಯದ ಬಗೆಗಳು ಮತ್ತು ಪೊಕ್ಸೋ ಕಾಯ್ದೆಯ ಪ್ರಾಮುಖ್ಯತೆ ಕುರಿತು ಪ್ರಜ್ಞೆ ಮೂಡಿಸುವ ಕೆಲಸ ಅಗತ್ಯ. ಎಂದರು. ಬಸವೇಶ್ವರ ಪಿಯು ಕಾಲೇಜಿನ ಪ್ರಾಚಾರ್ಯರಾದ ಡಾ. ರುದ್ರಮಣಿ ಮಠಪತಿ ಮಾತನಾಡಿದರು. ಎಎ ಕನ್ಯಾಕುಮಾರಿ, ಬೀದರ ಅಕ್ಕಪಡೆಯ ಎಎ ಸಂಗೀತಾ, ತಾಂತ್ರಿಕ ವಿಭಾಗದ ವೈಭವ, ಮಂಜುಳಾ, ಅಕ್ಕಮಹಾದೇವಿ ಕಾಲೇಜು ಪ್ರಾಚಾರ್ಯೆ ಮಾಯಾ ಮುರಾಳೆ, ಬಸವೇಶ್ವರ ಪಿಜಿ ಕಾಲೇಜು ಪ್ರಾಚಾರ್ಯೆ ಡಾ. ಶಾಂತಲಾ ಪಾಟೀಲ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಮನಸಿನ ಶಾಂತಿಗೆ ಶರಣರ ವಚನಗಳು ಪೂರಕ : ಯೋಗಿನಿ ಅಕ್ಕಾ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಪರೋಪಕಾರಿ ಕೆಲಸ ದಲ್ಲಿ ತೊಡಗಿಸಿ ಕೊಂಡು ಒಳ್ಳೆ ಜೀವನವನ್ನು ಪ್ರತಿಯೊಬ್ಬರು ರೂಡಿಸಿಕೊಳ್ಳ ಬೇಕು. ಮುಖವೆ ಮನಸ್ಸಿನ ಕನ್ನಡಿಆಗಿರುವವದರಿಂದ ನಾವು ಯಾವಾಗಲೂ ಪ್ರಸನ್ನ ಚಿತ್ತ ರಾದಾಗ ಮನ ನಿರಾಳ ವಾಗುತ್ತದೆ ಮನಸಿಗೆ ಶಾಂತಿ ದೊರಕಲು ಶರಣರು ವಚನಗಳು ಪೂರಕ ವಾಗಿವೆ ಎಂದುಕೊಪ್ಪಳದ ಈಶ್ವರಿ ವಿಶ್ವ ವಿದ್ಯಾಲಯದ ಮುಖ್ಯ ಸಂಚಲಾಕಿಯಾರಾದ ಬ್ರ. ಕು ಯೋಗಿನಿ ಅಕ್ಕಾ ರವರು ಹೇಳಿದರು. ಪಟ್ಟಣದ ಸಾಯಿಪ್ಯಾಲೇಸ್ ನಲ್ಲಿ ಆಯೋಜಿಸಿದ ಪಂ. ಪುಟ್ಟರಾಜ ಗವಾಯಿ ಹಾಗೂ ಶರಣರಾದ ಗುಂಡಯ್ಯ ಕುಂಬಾರ ರವರ ಶರೋಣತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡತ್ತು ದುಃಖ, ಅಶಾಂತಿ ಹೋಗಲಾಡಿಸಲು ಆದ್ಯಾತ್ಮ ಚಿಂತನೆ ಅವಶ್ಯಕತೆ ಇವೆ. ಸತ್ತ ಮೊಲಕ್ಕೆ ಬೆಲೆ ಇದೆ ಆದರೆ ಮನುಷ್ಯ ಸತ್ತರೆ ಯಾವ ಬೆಲೆ ಇಲ್ಲ. ಶರೀರ ಹಾಗೂ ಆತ್ಮದ ವ್ಯತ್ಯಾಸ ವನ್ನು ಭಗವಂತ ನಿಂದ ತಿಳಿಯಲು ಸಾಧ್ಯ. ಅನೇಕ ಶರಣರ ವಚನಗಳನ್ನು ಉಲ್ಲೇಖಿಸಿ ಮಾನವ ನಿಗೆ ಹುಟ್ಟಿದ ಮೇಲೆ ಜನ್ಮ ಸಾರ್ಥಕ ಮಾಡಿ ಕೊಳ್ಳಲು ಸ್ಥಳೀಯ ಬಸವ ಶಿವ ಯೋಗ ಸಮಿತಿ ಯವರು ಒಳ್ಳೆ ಕೆಲಸ ಗಳನ್ನು ಮಾಡುವದರ



ಜೊತೆಗೆ ಸತ್ಸಂಗದ ಪರಿಕಲ್ಪನೆ ಯನ್ನು ಜನರಿಗೆ ಮುಟ್ಟಿಸುವುದು ಪುಣ್ಯದ ಕಾರ್ಯವಾಗಿದೆ ಎಂದು ಶ್ಲಾಘಸಿದರು. ಪರಮ –ಆತ್ಮ ನೇ ಪರಮಾತ್ಮ..

ಶಿವ ಶರಣರ ನಡೆ ನುಡಿ ಯನ್ನು ಅನುಸರಿಸುವ ಕೆಲಸ ನಾವೆಲ್ಲರೂ ಮಾಡಬೇಕಾಗಿದೆ, ಸಂಸ್ಕಾರ ಮುಖ್ಯವಾಗಿರುವದರಿಂದ ಮಕ್ಕಳು ಇದ್ದಾಗಲೇ ಪಾಲಕರು ಅವರಿಗೆ ನೀತಿ, ಮೌಲ್ಯದ ಬಗ್ಗೆ ತಿಳಿಸಿಕೊಡಬೇಕು ಎಂದು ಕರೆ ನೀಡಿದರು. ಶರಣರಾದ ಗುಂಡಯ್ಯ ಕುಂಬಾರ ರವರ ಬಗ್ಗೆ ತಾವರಗೇರ ತಾ. ಪ ಂ. ಮಾಜಿ ಸದಸ್ಯೆ ಸುವರ್ಣ ಕುಂಬಾರ ರವರು ಉಪನ್ಯಾಸ ನೀಡಿದರು ಹಾಗೂ ಪಂ. ಪುಟ್ಟರಾಜ ಗವಾಯಿಗಳ ಬಗ್ಗೆ ನ್ಯಾಯವಾದಿ ಹಾಗೂ ತಾ ಪ ಮಾಜಿ ಸದಸ್ಯೆ ಸಾವಿತ್ರಿ ಗುರಿಕಾರ ರವರು ಉಪನ್ಯಾಸ ನೀಡಿದರು. ಮಹಿಳಾ ಒಕ್ಕೂಟದ ಅಧ್ಯಕ್ಷೆ ಜ್ಯೋತಿ ಪಲ್ಲೇದ ಅಧ್ಯಕ್ಷತೆ ವಹಿಸಿಮಾತನಾಡಿದರು. ಲಕ್ಷ್ಮಿ ಶ್ರೀಗಿರಿ, ನೀಲಮ್ಮ ಯರಾಸಿ ಪ್ರಾರ್ಥಿಸಿದರು ಕಳಕೇಶ ಅರಕೇರಿ ಭಕ್ತಿ ಗೀತೆ ಹಾಡಿದರು


ಸಾಹಿತಿ ಸುನೀತಾ ಪತಂಗರಾಯ ರವರು ನಿರೂಪಿಸಿದರು ಸ್ವಾಗತ ಆಶಾ ರಾಣಿ ಮಾಡಿದರು ಅನಸೂಯಾ ತೆಂಗಿನಕಾಯಿ, ವೀಣಾ ಹೊಸಮನಿ ಡಾ. ನಂದಿತಾ ದಾನರಡ್ಡಿ ಬ್ರ ಕು. ಗೀತಕ್ಕ, ನಿರ್ಮಲ ಗಾಂಜಿ, ಶೋಭಾ ಕಂದಕೂರ್, ಅಂಭುಜ ಧಾರವಾಡ ,ಗೌರಮ್ಮ ಕುಂಬಾರ, ಶಾರದಾ, ಕಳಕಮ್ಮ ಮೇಟಿ ಇನ್ನಿತರರು ಉಪಸ್ಥಿತರಿದ್ದರು. ಸಭೆ ಪ್ರಾರಂಭದಲ್ಲಿ ಇತ್ತೀಚಿಗೆ ನಿಧನ ರಾದ ನಾಡಿನ ಹೆಸರಾಂತ ಗಾಯಕಿ ಯಾದ ಎಸ್. ಜಾನಕಿ ರವರ ಆತ್ಮಕ್ಕೆ ಚಿರಶಾಂತಿ ಕೋರಲಾಯಿತು. ನಿ. ಶಿಕ್ಷಕರಾದ ಎಚ್.ಗಾಳೆಪ್ಪ, ಹಾಗೂ ನಿ. ಎ. ಎಸ್. ಆಯ್. ಮೆಹಬೂಬಸಾಬ ಇಟಗಿ ರವರನ್ನು ಸನ್ಮಾನಿಸಲಾಯಿತು. ಬಸವ ಶಿವಯೋಗಿ ಸಮಿತಿ ಅಧ್ಯಕ್ಷ ಸಂಗಣ್ಣ ತೆಂಗಿನಕಾಯಿ ಪ್ರಾಸ್ತಾವಿಕವಾಗಿ ಮಾತನಾಡಿ ದರು.

# ಕಲಬುರಗಿ ಗ್ರಾಮೀಣ ಕ್ಷೇತ್ರ: ಶೇ.100 ರಷ್ಟು ಗಣತಿ ನಮೂನೆ ವಿತರಣೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಜು.16: ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ 43–ಗುಲಬರ್ಗಾ ಗ್ರಾಮೀಣ ವಿಧಾನಸಭಾ ಕ್ಷೇತ್ರದಲ್ಲಿ ಭರದಿಂದ ಸಾಗಿದ್ದು, ಕ್ಷೇತ್ರದಾದ್ಯಂತ ಗುರುವಾರದ ಅಂತ್ಯಕ್ಕೆ ಒಟ್ಟು 2,74,878 ಮತದಾರರಿಗೆ (ಶೇ.100)ರಷ್ಟು ಗಣತಿ ನಮೂನೆ ವಿತರಣೆ ಮಾಡಲಾಗಿದೆ ಎಂದು ಕಲಬುರಗಿ ಉಪ ವಿಭಾಗದ ಸಹಾಯಕ ಆಯುಕ್ತರು ಮತ್ತು ಕ್ಷೇತ್ರದ ಮತದಾರರ ನೋಂದಣಾಧಿಕಾರಿ ಸಾಹಿತ್ಯ ಆಲದಕಟ್ಟಿ ತಿಳಿಸಿದ್ದಾರೆ. ಇದೂವರೆಗೆ ಬಿ.ಎಲ್.ಓ.ಗಳು 1,24,197 (ಶೇ.45.18) ಮತದಾರರಿಂದ ಭರ್ತಿ ಮಾಡಿದ ಗಣತಿ ನಮೂನೆ ಪಡೆದು ಮೊಬೈಲ್ ತಂತ್ರಾಂಶದಲ್ಲಿ ಡಿಜಿಟೈಸ್ ಮಾಡಿದ್ದಾರೆ. ಇನ್ನು 427 ಮತದಾರರು ಸ್ವಯಂ ಪ್ರೇರಿತವಾಗಿ ಆನ್ ಲೈನ್ ಮೂಲಕ ಗಣತಿ ನಮೂನೆ ಸಲ್ಲಿಸಿದ್ದಾರೆ.

# ಪ್ರಭು ಚವಾಣ್ ಜನ್ಮದಿನ; ಉಚಿತ ನೋಟ್‌ಬುಕ್ ವಿತರಣೆ



• ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ಶಾಸಕ ಪ್ರಭು ಚವಾಣ್ ಅವರ 57ನೇ ಜನ್ಮ ದಿನದ ಪ್ರಯುಕ್ತ ಬುಧವಾರ ಪಟ್ಟಣದ ಶಾಂತವರ್ಧಕ ಶಿಕ್ಷಣ ಸಂಸ್ಥೆ ಅಡಿಯಲ್ಲಿ ನಡೆಯುತ್ತಿರುವ ಚನ್ನಬಸವ ಹಿರಿಯ ಪ್ರಾಥಮಿಕ ಶಾಲೆ, ಶಾಂತಿವರ್ಧಕ ಪ್ರೌಢ ಶಾಲೆ ಮತ್ತು ಶಾಂತಿವರ್ಧಕ ಪಿಯು ಕಲಾ, ವಾಣಿಜ್ಯ ಹಾಗೂ ವಿಜ್ಞಾನ, ಶಾಂತಿವರ್ಧಕ ಐಟಿಐ ಕಾಲೇಜು, ಸಿದ್ಧರಾಮೇಶ್ವರ ಮಹಾವಿದ್ಯಾಲಯ ಕಾಲೇಜಿನಲ್ಲಿ ಉಚಿತ ನೋಟ್‌ಬುಕ್ ವಿತರಿಸಲಾಯಿತು.

ವಿದ್ಯಾರ್ಥಿಗಳ ಜೀವನದಲ್ಲಿ ಅಂಕಗಳೇ ಮಾನದಂಡವಾಗಬಾರದು. ಬದಲಾಗಿ ಸಂಸ್ಕಾರ ಹಾಗೂ ಶುದ್ಧ ಚಾರಿತ್ರ್ಯ ಮೈಗೂಡಿಸಿಕೊಳ್ಳಬೇಕು. ನಿರ್ದಿಷ್ಟ ಗುರಿಯೊಂದಿಗೆ ಮೌಲ್ಯಯುತ ಜೀವನ ಸಾಗಿಸಬೇಕು ಎಂದು ಯುವ ಮುಖಂಡ ಪ್ರತೀಕ ಪ್ರಭು ಚವಾಣ್ ಹೇಳಿದರು.

ವಯಸ್ಸಾದ ಮೇಲೆ ಪೋಷಕರನ್ನು ಚೆನ್ನಾಗಿ ನೋಡಿಕೊಳ್ಳುವ ಜವಾಬ್ದಾರಿ ನಿಮ್ಮ ಮೇಲಿದೆ. ದೊಡ್ಡವರಾದ ಮೇಲೆ ಇತರರಿಗೆ ಪ್ರೇರಣೆಯಾಗುವಂತೆ ಬದುಕಬೇಕು ಹಾಗೂ ಬಡವರು, ನಿರ್ಗತಿಕರಿಗೆ ದಾನ ಮಾಡುವ ಮೂಲಕ ಸಮಾಜಕ್ಕೆ ಒಳಿತು ಮಾಡಿದಾಗ ಮಾತ್ರ ಜನ್ಮ ಸಾರ್ಥಕವಾಗುತ್ತದೆ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಪ್ರಮುಖರಾದ ಪ್ರಾಂಶುಪಾಲ ಡಾ। ವಿಶ್ವನಾಥ ಕಿವಡೆ, ಮುಖ್ಯಶಿಕ್ಷಕ ಜ್ಞಾನೇಶ್ವರ ಚ್ಯಾಂಡೇಶ್ವರೆ, ಪಿಂಟು ಜಾಧವ, ಬಂಟಿ ರಾಂಪುರೆ, ಪ್ರಾಂಶುಪಾಲ ಯುವರಾಜ ಬಿರಾದರ, ಬಸವರಾಜ ಪಾಟೀಲ, ಶಿವಾನಂದ ವಡ್ಡೆ, ಶಿವಕುಮಾರ ಜುಲ್ಫೆ, ಮಹೇಶ ಸಜ್ಜನಶೇಟ್ಟಿ, ಸಂತೋಷ ಸೋಲ್ಲಾಪುರೆ, ಶಶಿಕಾಂತ ಮಹಾಜನ, ಸಂಸ್ಥೆಯ ಸಿಬ್ಬಂದಿ ಸೇರಿದಂತೆ ಮಕ್ಕಳು ಇದ್ದರು.

# ಅಂಕೋಲಾದಲ್ಲಿ ಸಂಪನ್ನಗೊಂಡ ಧ್ಯಾನ ತರಬೇತಿ ಶಿಬಿರ



• ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ

ಕಲಾಭಾರತಿ ಟ್ರಸ್ಟ್ ಅಂಕೋಲಾ ಇದರ ಆಶ್ರಯದಲ್ಲಿ ಎರಡನೆಯ ಬಾರಿ ಹಮ್ಮಿಕೊಂಡ 21 ದಿನಗಳ ಧ್ಯಾನ ಶಿಬಿರ ಸಂಪನ್ನಗೊಂಡಿತು. ಕೆ.ಎಲ್.ಇ ಬಿ.ಎಡ್. ಕಾಲೇಜಿನ ಪ್ರಾಚಾರ್ಯ ವಿನಾಯಕ ಹೆಗಡೆ ಮಾತನಾಡಿ, ಒತ್ತಡದ ಈ ದಿನಗಳಲ್ಲಿ ಪ್ರತಿಯೊಬ್ಬರು ಧ್ಯಾನ ಮಾಡಬೇಕು. ಅದನ್ನು ಗುರುವಿನ ಮುಖಾಂತರವಾಗಿ ಕಲಿಯುವುದರಿಂದ ಸರಿಯಾದ ಮಾರ್ಗದರ್ಶನ ಸಿಗುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ ಸರಕಾರಿ ಪದವಿಪೂರ್ವ ಕಾಲೇಜಿನ ಅಧ್ಯಾಪಕ ಮಹೇಶ ನಾಯಕ ಹಿಚ್ಕಡ ಮಾತನಾಡಿ, ಕಲಾಭಾರತಿ ಟ್ರಸ್ಟ್ ಮಾಡುತ್ತಿರುವ ಕಾರ್ಯ ಶ್ಲಾಘನೀಯ. ಈ ಧ್ಯಾನ ತರಬೇತಿಯ ಮುಂದಿನ ಶಿಬಿರಗಳಲ್ಲಿ ಇನ್ನೂ ಹೆಚ್ಚು ಜನಗಳು ಭಾಗವಹಿಸಿ ಇದರ ಪ್ರಯೋಜನ ಪಡೆಯುವಂತಾಗಬೇಕು ಎಂದರು.

ಇದೇ ಸಂದರ್ಭದಲ್ಲಿ ಹಲವು ಶಿಬಿರಾರ್ಥಿಗಳು ತಮ್ಮ ಧ್ಯಾನದ ಅನುಭವ ಹಂಚಿಕೊಂಡರು. ವರ್ಷಿಣಿ ಶೆಟ್ಟಿ ಪ್ರಾರ್ಥಿಸಿದರು.

ಧ್ಯಾನ ತರಬೇತಿದಾರರಾದ ಸುಧಾ ಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಟ್ರಸ್ಟ್‌ನ ಅಧ್ಯಕ್ಷ ಪ್ರಶಾಂತ ಶೆಟ್ಟಿ ನಿರೂಪಿಸಿದರು.

# ನೇಮಕಾತಿ ಅಧಿಸೂಚನೆಗಳನ್ನು ಹಿಂಪಡೆದು ನ್ಯಾಯಸಮ್ಮತ ಮೀಸಲಾತಿ ಜಾರಿಗೆ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಜು.16: ಒಳ ಮೀಸಲಾತಿ ಜಾರಿಯಲ್ಲಿ ಪ್ರವರ್ಗ 'ಸಿ'ಗೆ ಸಂಬಂಧಿಸಿದಂತೆ ಬಂಜಾರ (ಲಂಬಾಣಿ), ಭೋವಿ, ಕೊರಮ ಹಾಗೂ ಕೊರಚ ಸಮುದಾಯಗಳಿಗೆ ಅನ್ಯಾಯವಾಗಿದೆ ಎಂದು ಆರೋಪಿಸಿ, 19–08–2025ರ ಸಚಿವ ಸಂಪುಟದ ನಿರ್ಧಾರ ಹಾಗೂ 08–05–2026ರ ರೋಸ್ಟರ್ ಪಾಯಿಂಟ್ ಅಧಿಸೂಚನೆಯನ್ನು ಮರುಪರಿಶೀಲಿಸಬೇಕೆಂದು ಕರ್ನಾಟಕ ಪ್ರದೇಶ ಬಂಜಾರ (ಲಂಬಾಣಿ) ಸೇವಾ ಸಂಘ ಮತ್ತು ಆಲ್ ಇಂಡಿಯಾ ಬಂಜಾರ ಸೇವಾ ಸಂಘ ಯಾದಗಿರಿ ವತಿಯಿಂದ ಮುಖ್ಯಮಂತ್ರಿ ಶ್ರೀ ಡಿ.ಕೆ. ಶಿವಕುಮಾರ ಅವರಿಗೆ ಜಿಲ್ಲಾಧಿಕಾರಿಗಳ ಮೂಲಕ ಮನವಿ ಸಲ್ಲಿಸಲಾಯಿತು. ಮನವಿಯಲ್ಲಿ, ಪರಿಶಿಷ್ಟ ಜಾತಿಗಳ ಉಪವರ್ಗೀಕರಣವನ್ನು ಪ್ರಾಯೋಗಿಕ ದತ್ತಾಂಶದ ಆಧಾರದ ಮೇಲೆ ರಾಜ್ಯ ಸರ್ಕಾರ ಕೈಗೊಳ್ಳಬಹುದೆಂದು ಸುಪ್ರೀಂ ಕೋರ್ಟ್ ದೇವಿಂದರ್ ಸಿಂಗ್ ಮತ್ತು ಇತರರು ವಿರುದ್ಧ ಪಂಜಾಬ್ ರಾಜ್ಯ ಪ್ರಕರಣದಲ್ಲಿ ಅಭಿಪ್ರಾಯಪಟ್ಟಿರುವುದನ್ನು ಉಲ್ಲೇಖಿಸಲಾಗಿದೆ. ಅದರಂತೆ ಸರ್ಕಾರವು ನಿವೃತ್ತ ನ್ಯಾಯಮೂರ್ತಿ ಊ.ಓ.ನಾಗಮೋಹನ ದಾಸ್ ಅವರ ಅಧ್ಯಕ್ಷತೆಯಲ್ಲಿ ಏಕಸದಸ್ಯ ಆಯೋಗವನ್ನು ರಚಿಸಿತ್ತು. ಆಯೋಗವು 01–08–2025ರಂದು ಸರ್ಕಾರಕ್ಕೆ ವರದಿ ಸಲ್ಲಿಸಿ, 101 ಪರಿಶಿಷ್ಟ ಜಾತಿಗಳನ್ನು ಐದು ಗುಂಪುಗಳಾಗಿ ವಿಂಗಡಿಸಿ 17 ಶೇಕಡಾ ಮೀಸಲಾತಿಯನ್ನು ಕ್ರಮವಾಗಿ 1%, 6%, 5%, 4% ಮತ್ತು 1%ರಂತೆ ಹಂಚಿಕೆ ಮಾಡುವಂತೆ ಶಿಫಾರಸು ಮಾಡಿತ್ತು ಎಂದು ಮನವಿಯಲ್ಲಿ ವಿವರಿಸಲಾಗಿದೆ.

ಆದರೆ, ಸರ್ಕಾರವು 19–08–2025ರಂದು ಸಚಿವ ಸಂಪುಟದಲ್ಲಿ ವರದಿಯನ್ನು ಪರಿಷ್ಕರಿಸಿ, 101 ಜಾತಿಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಿ 17 ಶೇಕಡಾ ಮೀಸಲಾತಿಯನ್ನು 6%, 6% ಹಾಗೂ 5%ರಂತೆ ಹಂಚಿಕೆ ಮಾಡುವ ನಿರ್ಧಾರ ಕೈಗೊಂಡಿದ್ದು, ನಂತರ 25–08–2025ರಂದು ಅಧಿಸೂಚನೆ ಹೊರಡಿಸಿತು ಎಂದು ತಿಳಿಸಲಾಗಿದೆ.

ಮುಂದೆ ಸರ್ಕಾರ ಹೊರಡಿಸಿದ ರೋಸ್ಟರ್ ಪಾಯಿಂಟ್ ಅಧಿಸೂಚನೆಯಿಂದ ವಿಶೇಷವಾಗಿ ಪ್ರವರ್ಗ 'ಬಿ' ಮತ್ತು 'ಸಿ'ಯಲ್ಲಿರುವ ಸಮುದಾಯಗಳಿಗೆ ಅನ್ಯಾಯ ಉಂಟಾಗಿದ್ದು, ಕಡಿಮೆ ಸಂಖ್ಯೆಯ ಹುದ್ದೆಗಳ ನೇಮಕಾತಿಗಳಲ್ಲಿ ಈ ಸಮುದಾಯಗಳಿಗೆ ಅವಕಾಶಗಳು ಸಿಗದಂತಾಗಿದೆ ಎಂದು ಮನವಿಯಲ್ಲಿ ಆರೋಪಿಸಲಾಗಿದೆ.

ಈ ಸಂಬಂಧ ಸಲ್ಲಿಕೆಯಾಗಿದ್ದ ವಿವಿಧ ನ್ಯಾಯಾಂಗ ಪ್ರಕರಣಗಳ ಹಿನ್ನೆಲೆಯಲ್ಲಿ, 27–11–2025ರಂದು ಗೌರವಾನ್ವಿತ ನ್ಯಾಯಾಲಯದ ಆದೇಶದ ಮೇರೆಗೆ



ಸರ್ಕಾರವು ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ತಾಂತ್ರಿಕ ಸಮಿತಿಯನ್ನು ರಚಿಸಿ ಉಪವರ್ಗ ಮೀಸಲಾತಿ ಹಂಚಿಕೆಯನ್ನು ಮರುಪರಿಶೀಲಿಸುವಂತೆ ಕ್ರಮ ಕೈಗೊಂಡಿತು. ನಂತರ ವಿದ್ಯಾರ್ಥಿಗಳು ಹಾಗೂ ಅಭ್ಯರ್ಥಿಗಳ ಪ್ರತಿಭಟನೆಗಳ ಹಿನ್ನೆಲೆಯಲ್ಲಿ, ಒಳ ಮೀಸಲಾತಿ ಜಾರಿಗೊಳಿಸದೆ ಹಿಂದಿನ ಮಾನದಂಡಗಳ ಪ್ರಕಾರ ನೇಮಕಾತಿ ಅಧಿಸೂಚನೆಗಳನ್ನು ಹೊರಡಿಸಲು ಸರ್ಕಾರ ಇಲಾಖೆಗಳಿಗೆ ನಿರ್ದೇಶನ ನೀಡಿದೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ತಾಂತ್ರಿಕ ಸಮಿತಿಯ ವರದಿ ಆಧರಿಸಿ ಸರ್ಕಾರವು ಹೊಸ ಹಂಚಿಕೆಯನ್ನು ಪ್ರಕಟಿಸಿದ್ದು, ಪ್ರವರ್ಗ 'ಎ'ಗೆ 5.25%, ಪ್ರವರ್ಗ 'ಬಿ'ಗೆ 5.25% ಹಾಗೂ ಬಂಜಾರ, ಭೋವಿ, ಕೊರಮ ಮತ್ತು ಕೊರಚ ಸೇರಿದಂತೆ ಇತರ ಜಾತಿಗಳಿಗೆ ಪ್ರವರ್ಗ 'ಸಿ'ಯಲ್ಲಿ 4.5% ಮೀಸಲಾತಿ ನಿಗದಿಪಡಿಸಿದೆ. ಆದರೆ ಪ್ರವರ್ಗ 'ಸಿ'ಯಲ್ಲಿರುವ 59 ಅಲೆಮಾರಿ ಜಾತಿಗಳಿಗೆ ಆದ್ಯತೆ ಆಧಾರದ ಮೇಲೆ ಶೇ.20ರಷ್ಟು ಹುದ್ದೆಗಳನ್ನು ಮೀಸಲಿಡುವ ವ್ಯವಸ್ಥೆಯಿಂದ ಉಳಿದ ಸಮುದಾಯಗಳಿಗೆ ತೀವ್ರ ಅನ್ಯಾಯ ಉಂಟಾಗಿದ್ದು, ಸಾಮಾಜಿಕ ನ್ಯಾಯದ ಆಶಯಕ್ಕೆ ಧಕ್ಕೆ ಉಂಟಾಗಿದೆ ಎಂದು ಮನವಿಯಲ್ಲಿ ಆರೋಪಿಸಲಾಗಿದೆ.

ಹೀಗಾಗಿ, 19–08–2025ರ ನಂತರ ಹೊರಡಿಸಲಾದ ನೇಮಕಾತಿ ಅಧಿಸೂಚನೆಗಳನ್ನು ಮರುಪರಿಶೀಲಿಸಿ ಅಗತ್ಯವಿದ್ದಲ್ಲಿ ಹಿಂಪಡೆಯಬೇಕು. ಪ್ರವರ್ಗ 'ಸಿ'ಯೊಳಗಿನ ಆದ್ಯತಾ ಆಧಾರಿತ ಒಳ ಹಂಚಿಕೆಯನ್ನು ರದ್ದುಪಡಿಸಿ, ಆ ಪ್ರವರ್ಗದಲ್ಲಿರುವ ಎಲ್ಲಾ 63 ಜಾತಿಗಳಿಗೆ ಸಮಾನ ಅವಕಾಶ ದೊರೆಯುವಂತೆ ರೋಸ್ಟರ್ ಬಿಂದುಗಳನ್ನು ಮರುನಿಗದಿಪಡಿಸಬೇಕು. ಅಲ್ಲದೆ, ಬಂಜಾರ, ಭೋವಿ, ಕೊರಮ ಹಾಗೂ ಕೊರಚ ಸಮುದಾಯಗಳಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಿ ಸಾಮಾಜಿಕ ನ್ಯಾಯವನ್ನು ಕಾಪಾಡುವಂತೆ ಮುಖ್ಯಮಂತ್ರಿ ಅವರನ್ನು ಮನವಿಯಲ್ಲಿ ಆಗ್ರಹಿಸಲಾಗಿದೆ.

ಮನವಿ ಸಲ್ಲಿಸುವ ಸಂದರ್ಭದಲ್ಲಿ ದೇವರಾಜ್ ನಾಯಕ್ ಉಳ್ಳೆಸುಗೂರು (ಂಖಃಖಖ ರಾಜ್ಯಾಧ್ಯಕ್ಷರು), ವಿನೋದ್ ಬಿ. ನಾಯಕ್ (ಂಖಃಖಖ ಜಿಲ್ಲಾಧ್ಯಕ್ಷರು), ಬಂಗಾರು ಜೆ.ಬಿ. ರಾಥೋಡ್ (ಕರ್ನಾಟಕ ಪ್ರದೇಶ ಬಂಜಾರ ಸೇವಾ ಸಂಘ ಜಿಲ್ಲಾಧ್ಯಕ್ಷರು), ಮನೋಹರ್ ಠಾಣಗುಂದಿ, ಆನಂದ್ ಚವ್ಹಾಣ, ಬಾಲದೇವ್ ನಾಯಕ್, ಜನಾರ್ಧನ್ ರಾಥೋಡ್, ಈಶ್ವರ್ ರಾಥೋಡ್, ಜಯೇಂದ್ರ ರಾಥೋಡ್, ಸುರೇಶ್ ರಾಥೋಡ್, ಯಂಕಪ್ಪ ರಾಥೋಡ್, ತೇಜರಾಜ್ ರಾಥೋಡ್ ಜಯ ಕರ್ನಾಟಕ ಜನಪರ ವೇದಿಕೆ ಜಿಲ್ಲಾಧ್ಯಕ್ಷರು ಯಾದಗಿರಿ ಜಿಲ್ಲೆ, ಮೇಘನಾಥ ಚವ್ಹಾಣ, ವಿಜಯ್ ಜಾದವ್, ರಮೇಶ ಜೆ. ಚವ್ಹಾಣ (ರಾಜ್ಯ ಕಾರ್ಯದರ್ಶಿ, ಎಸ್.ಸಿ./ಎಸ್.ಟಿ. ಘಟಕ, ಏಖಖ ಪಕ್ಷ), ಗೋಪಾಲ್ ಗೌಡಗೇರಾ, ಗೊಬ್ರಯ ನಾಯಕ್ ಚವ್ಹಾಣ, ರವಿ ಹತ್ತಿಕುಣಿ, ವಿಕ್ರಮ್ ಚವ್ಹಾಣ, ಗೋವಿಂದ ವಡ್ನಳ್ಳಿ, ಗೋವಿಂದ್ ನಾಲ್ವಡಗಿ ಹಾಗೂ ವಾಚು ನಾಯಕ್ ಉಪಸ್ಥಿತರಿದ್ದರು.

## ವಿಕಲಚೇತನರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಸಂಘ-ಸಂಸ್ಥೆಗಳ ಪಾತ್ರ ಹಿರಿದು

• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಎಪಿಡಿ (ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ) ವತಿಯಿಂದ ತಾಲೂಕಿನ ವಿಕಲಚೇತನರ ಸ್ವಸಹಾಯ ಸಂಘದ ಸದಸ್ಯರಿಗೆ ಒಂದು ದಿನದ ಸಾಮರ್ಥ್ಯವರ್ಧನೆ ಕಾರ್ಯಕ್ರಮ ಬುಧವಾರ ಹಮ್ಮಿಕೊಳ್ಳಲಾಗಿತ್ತು.



ಕಾರ್ಯಕ್ರಮದಲ್ಲಿ ವಿಕಲಚೇತನರಿಗೆ ಆರೋಗ್ಯ, ಶಿಕ್ಷಣ, ಜೀವನೋಪಾಯ, ಸುಸ್ಥಿರ ಅಭಿವೃದ್ಧಿ, ನೀತಿ ಹಾಗೂ ವಕಾಲತ್ತು ಸೇರಿದಂತೆ ವಿವಿಧ ವಿಷಯಗಳ ಕುರಿತು ಸಮಗ್ರ ಮಾಹಿತಿ ನೀಡಲಾಯಿತು. ವಿಕಲಚೇತನರು ಸಮಾಜದ ಮುಖ್ಯವಾಹಿನಿಗೆ ಬರಲು ಸರ್ಕಾರಿ ಯೋಜನೆಗಳ ಜೊತೆಗೆ ಸಂಘ–ಸಂಸ್ಥೆಗಳ ಸಹಕಾರವೂ ಅತ್ಯಂತ ಅಗತ್ಯವಾಗಿದೆ ಎಂದು ಸಂಪನ್ಮೂಲ ವ್ಯಕ್ತಿಗಳು ಅಭಿಪ್ರಾಯಪಟ್ಟರು. ಆರಂಭದಲ್ಲಿ ಎಪಿಡಿ ಸಂಸ್ಥೆಯ ತಾಲೂಕು ಸಂಯೋಜಕರಾದ ವಿರೂಪಾಕ್ಷಿ ಮಾಲಿ ಪಾಟೀಲ್ ಅವರು ಸಂಸ್ಥೆಯ ನಡೆದು ಬಂದ ಹಾದಿ, ಉದ್ದೇಶಗಳು ಹಾಗೂ ತಾಲೂಕಿನ 21 ವಿಧದ ವಿಕಲಚೇತನರಿಗೆ ಸಂಸ್ಥೆಯ ಮೂಲಕ ಒದಗಿಸಲಾಗುತ್ತಿರುವ ವಿವಿಧ ಸೌಲಭ್ಯಗಳು, ತರಬೇತಿಗಳು ಹಾಗೂ ಸೇವೆಗಳ ಕುರಿತು ವಿವರವಾಗಿ ಮಾಹಿತಿ ನೀಡಿದರು. ಜಿಲ್ಲಾ ಸಮನ್ವಯ ಶಿಕ್ಷಣ ಸಂಯೋಜಕರಾದ ರಮೇಶ್ ಮಾನೆ ಅವರು ವಿಕಲಚೇತನ ವಿದ್ಯಾರ್ಥಿಗಳಿಗೆ ಲಭ್ಯವಿರುವ ಶೈಕ್ಷಣಿಕ ಯೋಜನೆಗಳು, ವಿದ್ಯಾರ್ಥಿವೇತನ, ಉನ್ನತ ಶಿಕ್ಷಣದ ಅವಕಾಶಗಳು ಹಾಗೂ ಎಪಿಡಿ ಸಂಸ್ಥೆಯ ವತಿಯಿಂದ ದೊರೆಯುವ ಶೈಕ್ಷಣಿಕ ನೆರವುಗಳ ಬಗ್ಗೆ ಮಾಹಿತಿ ನೀಡಿದರು. ಫಿಜಿಯೋಥೆರಪಿಸ್ಟ್ ವೆಂಕಟೇಶ್ ಅವರು 21 ವಿಧದ ವಿಕಲತೆಗಳಿಗೆ ಕಾರಣವಾಗುವ ಅಂಶಗಳು, ಅವುಗಳನ್ನು ಆರಂಭಿಕ ಹಂತದಲ್ಲಿಯೇ ಗುರುತಿಸಿ ತಡೆಗಟ್ಟುವ ಕ್ರಮಗಳು, ಫಿಜಿಯೋಥೆರಪಿಯ ಮಹತ್ವ ಹಾಗೂ ವಿಕಲಚೇತನರಿಗೆ ವಿತರಿಸುವ ಸಹಾಯಕ ಸಾಧನ–ಸಲಕರಣೆಗಳನ್ನು ಸರಿಯಾದ ರೀತಿಯಲ್ಲಿ ಬಳಸುವ ಕುರಿತು ಮಾರ್ಗದರ್ಶನ ನೀಡಿದರು.

ಜೀವನೋಪಾಯ ವಿಭಾಗದ ಜಿಲ್ಲಾ ಸಂಯೋಜ–ಕರಾದ ಶಿವಯೋಗಪ್ಪ ಮಾತನಾಡಿ, ವಿಕಲಚೇತನರು ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಜೀವನೋಪಾಯದ ಮಹತ್ವವನ್ನು ವಿವರಿಸಿದರು. ಎಪಿಡಿ ಸಂಸ್ಥೆ ಹಾಗೂ ಆರ್‌ಸೆಟ್ಟಿ (ಖಖಇಖಿಖ) ಸಹಯೋಗದಲ್ಲಿ ಊದಿನ ಕಡ್ಡಿ ತಯಾರಿಕೆ, ಫೈಲ್ ತಯಾರಿಕೆ, ಟೈಲರಿಂಗ್ ಸೇರಿದಂತೆ ವಿವಿಧ ಕೌಶಲಾಭಿವೃದ್ಧಿ ತರಬೇತಿಗಳನ್ನು ನೀಡಲಾಗುತ್ತಿದ್ದು, ಅನೇಕ ಫಲಾನುಭವಿಗಳು ಯಶಸ್ವಿಯಾಗಿ ಸ್ವಉದ್ಯೋಗ ಆರಂಭಿಸಿರುವ ಉದಾಹರಣೆಗಳನ್ನು ಹಂಚಿಕೊಂಡರು.

ತಾಲೂಕು ಆರ್‌ಪಿಡಿ ಟಾಸ್ಕ್ ಫೋರ್ಸ್ ಅಧ್ಯಕ್ಷ ಸಿದ್ದನಗೌಡ ನಜರಾಪೂರ ಮಾತನಾಡಿ, ತಾಲೂಕು ಮಟ್ಟದಲ್ಲಿ ವಿಕಲಚೇತನರ ಸಮಸ್ಯೆಗಳ ಪರಿಹಾರಕ್ಕಾಗಿ ರಚಿಸಲಾದ ಟಾಸ್ಕ್ ಫೋರ್ಸ್ ಮೂಲಕ ಹಲವು ಸಮಸ್ಯೆಗಳನ್ನು ಪರಿಹರಿಸಲಾಗಿದೆ. ವಿಕಲಚೇತನರ ಸಮಸ್ಯೆಗಳನ್ನು ಚರ್ಚಿಸಿ ಅಧಿಕಾರಿಗಳ ಗಮನಕ್ಕೆ ತರುವಲ್ಲಿ ಈ ವೇದಿಕೆ ಪರಿಣಾಮಕಾರಿಯಾಗಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಬಲಪಡಿಸುವ ಅಗತ್ಯವಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಚೆಪ್ಪೆಟ್ಲ್ ದ ಮಾತಾ ಮಾಣಿಶ್ವರಿ ವಿಕಲಚೇತನರ ಸ್ವಸಹಾಯ ಸಂಘಕ್ಕೆ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಎನ್‌ಆರ್‌ಎಲ್‌ಎಂ) ವತಿಯಿಂದ ?1.50 ಲಕ್ಷ ಮೊತ್ತದ ಸಿಐಎಫ್ (ಅಖಈ) ಸಹಾಯಧನ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ವಿವಿಧ ಗ್ರಾಮಗಳಿಂದ ಆಗಮಿಸಿದ್ದ 51 ಮಂದಿ ವಿಕಲಚೇತನರ ಸ್ವಸಹಾಯ ಸಂಘದ ಸದಸ್ಯರು ಭಾಗವಹಿಸಿದ್ದರು. ಎಪಿಡಿ ಸಿಬ್ಬಂದಿಗಳಾದ ಅಂಬಿಕಾ, ಶಿಲ್ಪಾ ಎಸ್., ಲಕ್ಷ್ಮೀ, ಕಾಶಪ್ಪ ಸೇರಿದಂತೆ ಇತರ ಸಿಬ್ಬಂದಿ ಉಪಸ್ಥಿತರಿದ್ದರು.

## ಕುರಕುಂದಿಯಲ್ಲಿ ಚರಂಡಿ ತುಂಬಿ ರಸ್ತೆ ಮೇಲೆ ನೀರು ಹರಿದು ಗಬ್ಬು ನಾರುತ್ತಿದ್ದರು ಕ್ಯಾರೆ ಎನ್ನದ ಪಿಡಿಓ

• ಮಲ್ಲಮ್ಮ ನುಡಿ ವಾರ್ತೆ ವಡಗೇರಾ



ತಾಲೂಕಿನ ಕುರಕುಂದ ಗ್ರಾಮ ಪಂಚಾಯತ್ ವ್ಯಾಪ್ತಿಯ ಕುರುಕುಂದ ಗ್ರಾಮದ ವಾರ್ಡ್ ನಂಬರ್ ಮೂರರಲ್ಲಿ ಸುಮಾರು ಮೂರು ತಿಂಗಳಿಂದ ಚರಂಡಿ ತುಂಬಿ ರಸ್ತೆ ಮೇಲೆ ನೀರು ಹರಿದು ಗಬ್ಬು ನಾರುತಿದ್ದು ಇದೆ ಗಬ್ಬು ನಾರುವ ನೀರಲ್ಲಿ ಸಾರ್ವಜನಿಕರು ತಿರುಗಾಡುತ್ತಿದ್ದಾರೆ ಈ ಸಂಬಂಧ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೂ ಗಮನಕ್ಕೆ ತಂದರು ಪ್ರಯೋಜನವಾಗಿಲ್ಲ ಎಸಿ ಡಿಸಿ ಹತ್ತಿರ ಹೋಗಿ ಕಂಪ್ಲೇಟ್ ಮಾಡಿ ನನಗೆ ಯಾರು ಏನು ಮಾಡಕ್ಕಾಗಲ್ಲ ಎಂದು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹೇಳುತ್ತಾರೆ ಪಂಚಾಯಿತಿಗೆ ಬರದು ಅಪರೂಪ ಇಲ್ಲಿ ಹೇಳೋರು ಕೇಳೋರು ಯಾರು ಇಲ್ಲ ಈ ಸಂಬಂಧ ಮೇಲಾಧಿಕಾರಿಗಳು ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಸಾಮಾಜಿಕ ಹೋರಾಟಗಾರ ಸಾಬಣ್ಣ ವಗ್ಗರ್ ಅವರು ಆಗ್ರಹಿಸಿದ್ದಾರೆ

## ಪ್ರವೀಣಬಾಬು ಮಹಾಲೆ ಅವರಿಗೆ ರಾಷ್ಟ್ರೀಯ ಸಮಾಜ ಸೇವಾ ರತ್ನ ಪ್ರಶಸ್ತಿಗೆ ಆಯ್ಕೆ

• ಮಲ್ಲಮ್ಮ ನುಡಿ ವಾರ್ತೆ ಗೋಕರ್ಣ



ಚಿರಾಯು ಕನ್ನಡ ವಾಹಿನಿ ಹಾಗೂ ಪ್ರತಿಫಲ ಫೌಂಡೇಶನ್ ಧಾರವಾಡ ಇವರ ಸಂಯೋಗದಲ್ಲಿ ಧಾರವಾಡದ ಆಲೂರು ವೆಂಕಟರಾವ್ ಸಭಾಭವನದಲ್ಲಿ ಪ್ರಥಮ ರಾಷ್ಟ್ರೀಯ ಚಿತ್ರಕಲಾ ಸಮ್ಮೇಳನದದಲ್ಲಿ ಸಿದ್ಧೇಶ್ವರದ ಪ್ರವೀಣ ಬಾಬು ಮಹಾಲೆ ಇವರಿಗೆ ರಾಷ್ಟ್ರೀಯ ಸಮಾಜ ಸೇವಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಿದ್ದಾರೆ.

ಕೇಂದ್ರ ಜಲ ಆಯೋಗದಲ್ಲಿ ವಿಕ್ಷರರಾಗಿ ಸೇವೇ ಮಾಡುವಾಗ ಪ್ರಾರಂಭದಿಂದ ಪ್ರವೀಣಬಾಬು ಮಹಾಲೆಯವರ ಐದು ದಶಕಗಳ ಕಾಲ ರಾಜ್ಯದುದ್ದೂಕ್ಕೂ ಹಲವು ಸ್ಥಳಗಳಲ್ಲಿ ಸಾರ್ವಜನಿಕ ಸಂಘ ಸಂಸ್ಥೆಗಳಲ್ಲಿ ಸಕ್ರೀಯರಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಜನರ ತುಡಿತಕ್ಕೆ ಸ್ಪಂದಿಸಿದಲ್ಲದೇ ಕೇಂದ್ರ ಜಲ ಆಯೋಗದ ಅಖಿಲ ಭಾರತ ಮಟ್ಟದ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಸಾವಿರಾರು ನೌಕರರ ಬೇಡಿಕೆಗಳನ್ನು ಹೋರಾಟ ಮಾಡಿ ಯಶಸ್ವಿಯಾಗಿದ್ದರು. ಹಾಗೇ ಸಾಹಿತ್ಯದ ಬಗ್ಗೆ ಆಸಕ್ತಿಯನ್ನು ಹೊಂದಿ ಲೇಖಕರಾಗಿ ಗುರುತಿಸಿಕೊಂಡಿದ್ದಾರೆ. ಈ ಸಮ್ಮೇಳನದಲ್ಲಿ ಇವರು ಬರೆದ ಶ್ರೀನಿಧಿ ಪಬ್ಲಿಕೇಶನ್ಸ ಬೆಂಗಳೂರು ಪ್ರಕಟಿಸಿದ ಮೂರನೇ ಸಾಹಿತ್ಯ ಕೃತಿ 'ನೆನಪುಗಳ ಮೆರವಣಿಗೆ' ಎಂಬ ಕಥಾ ಸಂಕಲನ ಬಿಡುಗಡೆಗೊಳ್ಳಲಿದೆ.

## ಅಬಕಾರಿ ಸನ್ನದುಗಳ ಇ-ಹರಾಜು ಪ್ರಕ್ರಿಯೆ ಕುರಿತು ಮಾಹಿತಿ ಕಾರ್ಯಾಗಾರ


ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ



ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಸ್ತುತ ಖಾಲಿ ಇರುವ 14 ಅಬಕಾರಿ ಸನ್ನದ್ದುಗಳ ಹರಾಜು ಪ್ರಕ್ರಿಯೆಯ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡುವ ವಿಶೇಷ ಕಾರ್ಯಾಗಾರವು ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಗುರುವಾರ ನಡೆಯಿತು. ರಾಜ್ಯ ಅಬಕಾರಿ ಇಲಾಖೆಯು 2025–26ನೇ ಸಾಲಿನ ಅಬಕಾರಿ ಸನ್ನದ್ದುಗಳನ್ನು ಇ–ಹರಾಜು ಮೂಲಕ ಹಂಚಿಕೆ ಮಾಡಲು ಮುಂದಾಗಿದ್ದು, ಈ ಸಂಬಂಧ ಸಾರ್ವಜನಿಕರಿಗೆ ಸೂಕ್ತ ತರಬೇತಿ ಹಾಗೂ ಜಾಗೃತಿ ಮೂಡಿಸಲು ಈ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಅಬಕಾರಿ ಇಲಾಖೆಯ ಉಪ ಆಯುಕ್ತ ಅಮಾನುಲ್ಲಾ ಖಾನ್ ಅವರು ಇ–ಹರಾಜು ಪ್ರಕ್ರಿಯೆಯ ಪ್ರಾಮುಖ್ಯತೆ ಹಾಗೂ ಇಲಾಖೆಯ ಪಾರದರ್ಶಕ ನೀತಿಗಳ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡಿದರು. ಸಾರ್ವಜನಿಕರು ಇ–ಆಕ್ಷನ್ ವೇದಿಕೆಯ ಮೂಲಕ ನಿಯಮಾನುಸಾರ ಪಾರದರ್ಶಕವಾಗಿ ಅಬಕಾರಿ ಸನ್ನದ್ದುಗಳನ್ನು ಪಡೆಯಬಹುದಾಗಿದೆ. ಈ ಹರಾಜು ಪ್ರಕ್ರಿಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ವಿಶೇಷ ಮೀಸಲಾತಿಯನ್ನು ಕಲ್ಪಿಸಲಾಗಿದ್ದು, ಅರ್ಹರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ವಿವರಿಸಿದರು. ಉತ್ತರ ಕನ್ನಡ ಜಿಲ್ಲಾ ಅಬಕಾರಿ ಅಧೀಕ್ಷಕರಾದ ಆರ್. ವಿ. ತಳೇಕರ್ ತರಬೇತಿಯ ಪ್ರಮುಖ ಮಾರ್ಗಸೂಚಿಗಳನ್ನು ವಿವರಿಸಿದರು. ಕೇಂದ್ರ ಸರಕಾರದ ಸ್ವಾಮ್ಯದ ಎಂ.ಎಸ್.ಟಿ.ಸಿ ಸಂಸ್ಥೆಯ ಪ್ರಮುಖರಾದ ತೇಜಸ್ ನಾಯ್ಕ ಇ–ಹರಾಜು ಪ್ರಕ್ರಿಯೆ ಹೇಗೆ ನಡೆಯುತ್ತದೆ ಮತ್ತು ಆನ್‌ಲೈನ್ ವೇದಿಕೆಯನ್ನು ಬಳಸುವ ವಿಧಾನದ ಕುರಿತು ವಿವರಿಸಿದರು. ಅಬಕಾರಿ ನಿರೀಕ್ಷಕ ಮಹೇಂದ್ರ ನಾಯ್ಕ ಈ ಕಾರ್ಯಾಗಾರದಲ್ಲಿ ಉತ್ತರ ಕನ್ನಡ ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ್ದ ಅಬಕಾರಿ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ನೂರಾರು ಆಸಕ್ತ ಸಾರ್ವಜನಿಕರು ಉಪಸ್ಥಿತರಿದ್ದರು.

## ಪತ್ರಕರ್ತ ಎಂ.ವಿ. ನಾಯ್ಕ ನಿಧನ

• ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ



ಹಿರಿಯ ಪತ್ರಕರ್ತ, ನಿವೃತ್ತ ಶಿಕ್ಷಕ ಎಂ. ವಿ. ನಾಯ್ಕ (86) ಗುರುವಾರ ಮಣಿಪಾಲ ಆಸ್ಪತ್ರೆಯಲ್ಲಿ ವಯೋ ಸಹಜ ಕಾಯಿಲೆಯಿಂದ ನಿಧನರಾಗಿದ್ದಾರೆ. ಸಂಯುಕ್ತ ಕರ್ನಾಟಕ, ಉಷಾಕಿರಣ ಪತ್ರಿಕೆಯ ವರದಿಗಾರರಾಗಿ ಕಾರ್ಯನಿರ್ವಹಿಸಿದ ಇವರು ತಾಲೂಕಿನ ಅವರ್ಸಾದ ಶ್ರೀ ಕಾತ್ಯಾಯಿನಿ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದರು.

ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ನಿಧನಕ್ಕೆ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಮಾಜಿ ಶಾಸಕಿ ರೂಪಾಲಿ ನಾಯ್ಕ, ತಾಲೂಕು ಕಾರ್ಯನಿರತ ಪತ್ರಕರ್ತ ಸಂಘದವರು ಸಂತಾಪ ಸೂಚಿಸಿದ್ದಾರೆ.

## ತದಡಿಯ ಶಾಲೆಯ ಪಕ್ಕದಲ್ಲಿರುವ ಗಟಾರಕ್ಕೆ ಮುಚ್ಚಳಿಕೆ ಅಗತ್ಯ

• ಮಲ್ಲಮ್ಮ ನುಡಿ ವಾರ್ತೆ ಗೋಕರ್ಣ



ಇಲ್ಲಿಯ ಸಮೀಪದ ತದಡಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಎದುರಿನ ರಸ್ತೆಯ ಗಟಾರವು ಮುಚ್ಚಳಿಕೆ ಮಾಡದಿರುವುದರಿಂದ ಇಲ್ಲಿ ವಿದ್ಯಾರ್ಥಿಗಳು ಹಾಗೂ ವಾಹನಗಳು ಕೂಡ ಬೀಳುವ ಸಾಧ್ಯತೆಗಳಿವೆ. ರಸ್ತೆಯು ಕೂಡ ಕಿರಿದಾಗಿರುವುದರಿಂದ ಅಪಾಯ ಸಂಭವಿಸುವ ಸಾಧ್ಯತೆಯಿದೆ. ಈ ಹಿನ್ನೆಲೆಯಲ್ಲಿ ಶಾಸಕ ದಿನಕರ ಶೆಟ್ಟಿ ಹಾಗೂ ಸ್ಥಳೀಯ ಗ್ರಾಮ ಪಂಚಾಯತದವರು ಸೂಕ್ತ ಕ್ರಮ ಕೈಗೊಳ್ಳುವಂತೆ ಮಾಡಬೇಕಿದೆ.

ತದಡಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಾಕಷ್ಟು ವಿದ್ಯಾರ್ಥಿಗಳಿದ್ದಾರೆ. ಶಾಲೆಯೂ ಕೂಡ ರಸ್ತೆ ಪಕ್ಕದಲ್ಲಿಯೇ ಇರುವುದರಿಂದ ವಿದ್ಯಾರ್ಥಿಗಳು ರಸ್ತೆಯ ಅಕ್ಕಪಕ್ಕದಲ್ಲಿ ಆಟ ಆಡುವುದು, ಸಂಚರಿಸುವುದು ಮಾಡುತ್ತಾರೆ. ಹಾಗೇ ಎದುರಿಗೆ ವಾಹನ ಬಂದರೆ ಆತಂಕಗೊಳ್ಳುವಂತಾಗಿದೆ ಹೀಗಾಗಿ ಈ ತೆರೆದ ಗಟಾರಕ್ಕೆ ಮುಚ್ಚಳಿಕೆಯನ್ನು ಮಾಡಿದರೆ ವಾಹನ ಸಂಚಾರಕ್ಕೂ ಅನುಕೂಲವಾಗಲಿದೆ.

1912 ರಲ್ಲಿ ಆರಂಭಗೊಂಡ ಈ ಶಾಲೆಯು ಅಸಂಖ್ಯಾತ ವಿದ್ಯಾರ್ಥಿಗಳಿಗೆ ಜೀವನ ರೂಪಿಸಿದೆ. ಶತಮಾನ ಕಂಡ ಈ ಶಾಲೆಯಲ್ಲಿ ಇಂದಿಗೂ ಮಕ್ಕಳಿಗೆ ಕೊರತೆಯಿಲ್ಲ. ಇಲ್ಲಿ ಉತ್ತಮ ಶಿಕ್ಷಣವನ್ನು ನೀಡುತ್ತಿದ್ದಾರೆ. ಆದರೆ ಇಲ್ಲಿಯ ಗಟಾರಕ್ಕೆ ಮುಚ್ಚಳಿಕೆ ಹಾಕಿದರೆ ರಸ್ತೆಯು ಕೂಡ ಅಗಲೀಕರಣವಾದಂತಾಗುತ್ತದೆ. ಅಲ್ಲಿ ಯಾವುದೇ ತ್ಯಾಜ್ಯ ಎಸೆಯುವ ಅಗತ್ಯವಿರುವುದಿಲ್ಲ. ಹಾಗೇ ಇಲ್ಲಿ ಸ್ವಚ್ಛವಾಗಿಯೂ ಇರಲಿದೆ. ಈ ಕುರಿತು ಗ್ರಾ.ಪಂ. ಹಾಗೂ ಶಾಸಕರು ಗಮನಹರಿಸಬೇಕಿದೆ.

## ಜೇವರ್ಗಿ ಕ್ಷೇತ್ರ ಶೇ.100ರಷ್ಟು ಗಣತಿ ನಮೂನೆ ವಿತರಣೆ

ಕಲಬುರಗಿ,ಜು.16ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ 35–ಜೇವರ್ಗಿ ವಿಧಾನಸಭಾ ಕ್ಷೇತ್ರದಲ್ಲಿ ಭರದಿಂದ ಸಾಗಿದ್ದು, ಕ್ಷೇತ್ರದಾದ್ಯಂತ ಗುರುವಾರದ ಅಂತ್ಯಕ್ಕೆ ಒಟ್ಟು 2,59,061 ಮತದಾರರಿಗೆ (ಶೇ.100)ರಷ್ಟು ಗಣತಿ ನಮೂನೆ ವಿತರಣೆ ಮಾಡಲಾಗಿದೆ ಎಂದು ಕ್ಷೇತ್ರದ ಮತದಾರರ ನೋಂದಣಾಧಿಕಾರಿಯಾಗಿರುವ ಜೇವರ್ಗಿ ತಹಶೀಲ್ದಾರ್ ಅಂಜುಮ್ ತಬಾಸ್ಸುಮ್ ತಿಳಿಸಿದ್ದಾರೆ.

ಇದೂವರೆಗೆ ಬಿ.ಎಲ್.ಓ. ಗಳು 1,21,798 ಮತದಾರರಿಂದ ಭರ್ತಿ ಮಾಡಿದ ಗಣತಿ ನಮೂನೆ ಪಡೆದು ಮೊಬೈಲ್ ತಂತ್ರಾಂಶದಲ್ಲಿ ಡಿಜಿಟೈಸ್ ಮಾಡಿದ್ದಾರೆ. ಇನ್ನು ಬಿ.ಎಲ್.ಓ. ಗಳು ಮನೆ–ಮನೆ ಭೇಟಿ ಕೊಟ್ಟಾಗ ಇಲ್ಲಿಯವರೆಗೆ 40 ಜನ ಮತದಾರರು ಮನೆಯಲ್ಲಿ ಇಲ್ಲದಿರುವುದು(ಗೈರು), 1,015 ಮತದಾರರು ಶಾಶ್ವತವಾಗಿ ಸ್ಥಳಾಂತರಗೊಂಡಿರುವುದು, 1,991 ಜನ ಮತದಾರರು ನಿಧನ ಹೊಂದಿರುವುದು ಹಾಗೂ 264 ಜನ ಮತದಾರರು ಈಗಾಗಲೆ ನೋಂದಣಿಯಾಗಿರುವ ಬಗ್ಗೆ ವರದಿಯಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹಾಲಕ್ಕಿಗಳ ಪ್ರಾರ್ಥನೆಗೆ ಫಲಿಸಿದ ಫಲ : ಸುರಿದ ಮಳೆ

ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ



: ಈ ಬಾರಿ ಭತ್ತದ ನಾಟಿ ಸಂದರ್ಭದಲ್ಲಿ ಮಳೆ ಸುರಿಯದೇ ರೈತರು ಸಂಕಷ್ಟಕ್ಕೆ ಸಿಲುಕಿದ್ದರಿಂದಾಗಿ ಹೊನ್ನೆಬೈಲ್ ಟೆಂಪಲ್ ಟ್ರಸ್ಟ್ ಅಧ್ಯಕ್ಷ ಹನುಮಂತ ಗೌಡ ನೇತೃತ್ವದಲ್ಲಿ ಹೊನ್ನೆಬೈಲ್‌ನ ಕುಸ್ಲೆದೇವರಿಗೆ ಬುಧವಾರ ವಿಶೇಷ ಪೂಜೆ ಸಲ್ಲಿಸಿದ್ದರು. ಆ ಸಂದರ್ಭದಲ್ಲಿ ಮೈ ಭಾರದಿಂದ ಗುನಗರು ಇನ್ನು ಮೂರು ದಿನದ ಒಳಗಾಗಿ ಮಳೆಯಾಗುತ್ತದೆ ಎಂದು ಹೇಳಿದ್ದರು. ಅದರಂತೆ ಗುರುವಾರ ಮಧ್ಯಾಹ್ನ ಸುಮಾರು ಒಂದು ತಾಸು ಮಳೆ ಜೋರಾಗಿ ಸುರಿದಿದ್ದು, ಮೋಡ ಕವಿದ ವಾತಾವರಣವಿದೆ. ಇದರಿಂದಾಗಿ ದೇವರು ನೋಡಿದಂತೆ ಮಳೆಯಾಗಿರುವುದಕ್ಕೆ ಗ್ರಾಮಸ್ಥರು ಹರ್ಷ ವ್ಯಕ್ತಪಡಿಸಿದ್ದಾರೆ.

ಪೂಜೆಯ ನಂತರ ಮಳೆಗಾಗಿ ಹಾಲಕ್ಕಿ ಸಮಾಜದವರು ಗುಮಟೆ ಸದ್ದಿನೊಂದಿಗೆ ಜಾನಪದ ಹಾಡನ್ನು ಹಾಡಿದರೆ ಇನ್ನು, ಮಹಿಳೆಯರು ಕೂಡ ತಾರ್ಲೆಕುಣಿತ, ಪುಗಡಿ ನೃತ್ಯ ಮಾಡುತ್ತ ಮಳೆಗಾಗಿ ತಮ್ಮ ಜಾನಪದ ಹಾಡುಗಳ ಮೂಲಕ ಮಳೆಯಾಗುವಂತೆ ದೇವರನ್ನು ಪ್ರಾರ್ಥಿಸಿದ್ದರು. ಒಮ್ಮೆ ದೇವರಲ್ಲಿ ಅಪ್ಪಣೆಯಾದರೆ ಮಳೆ ಬಂದೇ ಬರುತ್ತದೆ ಎಂಬ ನಂಬಿಕೆ ಇಲ್ಲಿಯ ಹಾಲಕ್ಕಿ ಸಮಾಜದವರಲ್ಲಿದೆ.

ಹಾಲಕ್ಕಿ ಒಕ್ಕಲಿಗರು ಬುಡಕಟ್ಟು ಜನಾಂಗಕ್ಕೆ ಸೇರಿದವರಾಗಿದ್ದು, ಇವರು ಕೃಷಿಯನ್ನೇ ತಮ್ಮ ಮುಖ್ಯ ಉದ್ಯೋಗವನ್ನಾಗಿ ಮಾಡಿಕೊಂಡಿದ್ದಾರೆ. ಇವರ ಉಡುಗೆ–ತೊಡುಗೆಗಳು ಕೂಡ ವಿಶೇಷವಾದದ್ದು. ಹೀಗೆ ವ್ಯವಸಾಯದ ಸಮಯದಲ್ಲಿ ಮಳೆ ಬಾರದಿದ್ದಾಗ ಕುಸ್ಲೆ ದೇವರಿಗೆ ವಿಶೇಷ ಪೂಜೆ ಪ್ರಾರ್ಥನೆ ಮಾಡಿ ಜಾನಪದ ಹಾಡಿನ ಮೂಲಕ ಮಳೆಗಾಗಿ ಪ್ರಾರ್ಥಿಸುವುದು ವಾಡಿಕೆಯಾಗಿದೆ. ಪೂಜೆ ಮಾಡಿದಾಗಲೆಲ್ಲ ವರುಣನ ಕೃಪೆ ಉಂಟಾತ್ತಿದೆ. ಹೀಗಾಗಿ ಇವರು ಹೆಚ್ಚು ದೈವವನ್ನು ನಂಬುತ್ತಾರೆ.

# ಶಿಕ್ಷಣದಿಂದ ರಾಜಕೀಯಕ್ಕೆ ಸೋಮಶೇಖರ ಹರ್ತಿ



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಯಲಬುರ್ಗಾ ಕ್ಷೇತ್ರದ ಹೆಸರಾಂತ ನಿವೃತ್ತ ಶಿಕ್ಷಕ ಹಾಗೂ ಸಂಘಟನಾ ಚತುರ ಸೋಮಶೇಖರ ಹರ್ತಿ ಅವರು ಭಾರತೀಯ ಜನತಾ ಪಕ್ಷ (ಬಿಜೆಪಿ) ಸೇರ್ಪಡೆಯಾಗಿದ್ದಾರೆ. ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ಅವರು, ಪ್ರಸ್ತುತ ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಕೊಪ್ಪಳ ಜಿಲ್ಲಾಧ್ಯಕ್ಷರಾಗಿದ್ದು, ವಿವಿಧ ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದಾರೆ. ಶಿಕ್ಷಣ ಕ್ಷೇತ್ರದ ಅನುಭವ ಮತ್ತು ಸಂಘಟನಾ ಸಾಮರ್ಥ್ಯವನ್ನು ಜನಸೇವೆಗೆ ಬಳಸುವ ಉದ್ದೇಶದಿಂದ ಅವರು ರಾಜಕೀಯಕ್ಕೆ ಪ್ರವೇಶಿಸಿದ್ದಾರೆ. ಇತ್ತೀಚಿಗೆ ಬಿಜೆಪಿ ಪಕ್ಷದ ರಾಜ್ಯಾಧ್ಯಕ್ಷರಾದ ಬಿ.ವೈ. ವಿಜಯೇಂದ್ರ,ಶಾಸಕರಾದ ಹಾಲಪ್ಪ ಆಚಾರ್, ಹೇಮಲತಾ ನಾಯಕ್, ಶರಣು ತಳ್ಳಿಕೇರಿ, ಬಸವರಾಜ ಕ್ಯಾವಟರ್, ಶಶಿಲ್ ನಮೋಸಿ ಸೇರಿದಂತೆಹಂಚಾಳಪ್ಪ ತಳವಾರ

ಶಿವಕುಮಾರ್ ನಾಗಲಾಪುರಮಠ,ನವೀನ್ ಗುಳಗಣ್ಣನವರ ಜಿಲ್ಲಾ ಅಧ್ಯಕ್ಷರು ,ಶ್ರೀನಿವಾಸ್ ನಿಂಗಾಪುರ ,ವೆಂಕಟೇಶ್ ಗಾದಿ ,ಅಯ್ಯಪ್ಪ ಗುಳೇದ ಯಡ್ಡೋನಿ ,ದೊಡ್ಡಯ್ಯ ಗುರುವಿನ, ಮಾರುತಿ ಗಾವರಾಳ, ಮರ್ತುಜಾಸಾಬ ವಾಟಪರ್ವಿ,ನೀಲಪ್ಪ ಕುದ್ರಿಕೊಟಗಿ

ಬಸನಗೌಡ ಪೊಲೀಸ್ ಪಾಟೀಲ ವಟಪರ್ವಿ,ಅಶೋಕ್ ಘಟ್ಟೆಪ್ಪನವರ, ವೀರಣ್ಣ ಹುಬ್ಬಳ್ಳಿ ಹಾಗೂ ಪಕ್ಷದ ಕಾರ್ಯಕರ್ತರು ಶುಭ ಹಾರೈಸಿದ್ದಾರೆ.

# ಶಂಭುಲಿಂಗನಗೌಡ ಪಾಟೀಲ್ ಹಲಿಗೇರಿ ನಿವಾಸಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಭೇಟಿ: ಪಕ್ಷ ಸೇರ್ಪಡೆಗೆ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ



ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಮಾಜಿ ಅಧ್ಯಕ್ಷ ಹಾಗೂ ಕೊಪ್ಪಳ ಜಿಲ್ಲಾ ಸರ್ಕಾರಿ ನೌಕರರ ಸಂಘದ ಮಾಜಿ ಜಿಲ್ಲಾಧ್ಯಕ್ಷರಾದ ಶಂಭುಲಿಂಗನಗೌಡ ಪಾಟೀಲ್ ಹಲಿಗೇರಿ ಅವರ ನಿವಾಸಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರಭೇಟಿ ನೀಡಿ,ಸೌಹಾರ್ದಯುತವಾಗಿ ಮಾತುಕತೆ ನಡೆಸಿದರು.

ಬುಧವಾರದಂದು ಕೊಪ್ಪಳ ಜಿಲ್ಲಾ ಪ್ರವಾಸ ಕೈಗೊಂಡಿದ್ದ ಬಿಜೆಪಿ ರಾಜ್ಯ ಅಧ್ಯಕ್ಷ ವಿಜಯೇಂದ್ರ ಈ ವೇಳೆ ಶಂಭುಲಿಂಗನಗೌಡ ಪಾಟೀಲ್ ಅವರ ಸಾಮಾಜಿಕ ಸೇವೆ, ಶಿಕ್ಷಕರ ಹಾಗೂ ಸರ್ಕಾರಿ ನೌಕರರ ಹಿತಾಸಕ್ತಿ ಪರವಾಗಿ ಅವರು ಸಲ್ಲಿಸಿರುವ ಸೇವೆಯನ್ನು ವಿಜಯೇಂದ್ರ ಮೆಚ್ಚುಗೆ ವ್ಯಕ್ತಪಡಿಸಿದರು. ರಾಜ್ಯದ ಅಭಿವೃದ್ಧಿ ಮತ್ತು ಜನಸೇವೆಯಲ್ಲಿ ಅನುಭವ ಹೊಂದಿರುವ ಶಿಕ್ಷಣವಂತ ವ್ಯಕ್ತಿಗಳ ಪಾತ್ರ ಮಹತ್ವದ್ದಾಗಿದ್ದು, ತಮ್ಮ ಅನುಭವವನ್ನು ರಾಜಕೀಯ ಕ್ಷೇತ್ರದಲ್ಲಿಯೂ ಬಳಸಿಕೊಳ್ಳುವಂತೆ ಆಹ್ವಾನಿಸಿದರು.ಬಿಜೆಪಿ ಪಕ್ಷದ ಸಿದ್ಧಾಂತ, ಅಭಿವೃದ್ಧಿ ಪರವಾದ ಕಾರ್ಯಚಟುವಟಿಕೆಗಳು ಹಾಗೂ ರಾಜ್ಯದ ಭವಿಷ್ಯದ ರಾಜಕೀಯ ಬೆಳವಣಿಗೆಗಳ ಕುರಿತು ಚರ್ಚಿಸಿದ ವಿಜಯೇಂದ್ರ, ಶಂಭುಲಿಂಗನಗೌಡ ಪಾಟೀಲ್ ಅವರು ಬಿಜೆಪಿ ಪಕ್ಷಕ್ಕೆ ಸೇರ್ಪಡೆಯಾಗುವಂತೆ ಅಧಿಕೃತವಾಗಿ ಆಹ್ವಾನ ನೀಡಿದರು.ಭೇಟಿಯ ಸಂದರ್ಭದಲ್ಲಿ ಶಂಭುಲಿಂಗನಗೌಡ ಪಾಟೀಲ್ ಅವರು ಆಹ್ವಾನವನ್ನು ಸ್ವಾಗತಿಸಿ, ಪಕ್ಷ ಸೇರ್ಪಡೆ ಕುರಿತಂತೆ ತಮ್ಮ ಹಿತೈಷಿಗಳು, ಬೆಂಬಲಿಗರು ಹಾಗೂ ಆಪ್ತರೊಂದಿಗೆ ಸಮಾಲೋಚನೆ ನಡೆಸಿದ ನಂತರ ಶೀಘ್ರವೇ ಸೂಕ್ತ ನಿರ್ಧಾರ ಕೈಗೊಳ್ಳುವುದಾಗಿ ತಿಳಿಸಿದರು.ಈ ಭೇಟಿ ಜಿಲ್ಲೆಯ ರಾಜಕೀಯ ವಲಯದಲ್ಲಿ ಕುತೂಹಲಕ್ಕೆ ಕಾರಣವಾಗಿದ್ದು, ಮುಂದಿನ ದಿನಗಳಲ್ಲಿ ಶಂಭುಲಿಂಗನಗೌಡ ಪಾಟೀಲ್ ಅವರ ರಾಜಕೀಯ ನಡೆ ಯಾವ ದಿಕ್ಕಿನಲ್ಲಿ ಸಾಗಲಿದೆ ಎಂಬುದರ ಬಗ್ಗೆ ಚರ್ಚೆಗಳು ಆರಂಭವಾಗಿವೆ.ಈ ಸಂದರ್ಭದಲ್ಲಿ ಶಂಭುಲಿಂಗನಗೌಡ್ರು ಕುಟುಂಬದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು ರಾಜ್ಯ ಕಾಯ9ದಶಿ9 ಶರಣು ತಳ್ಳಿಕೇರಿ,ಡಾ.ಬಸವರಾಜ ಕ್ಯಾವಟರ, ಬಿಜೆಪಿ ಜಿಲ್ಲಾಧ್ಯಕ್ಷರಾದ ನವೀನಕುಮಾರ ಗುಳಗಣ್ಣನವರ, ಬಳ್ಳಾರಿ ವಿಭಾಗದ ಪ್ರಭಾರಿ ಚಂದ್ರುಶೇಖರಗೌಡ ಪಾಟೀಲ, ಬಿಜೆಪಿಯ ಮುಖಂಡರಾದ ವೀರೇಶ ಸಜ್ಜನ, ಗಣೇಶ್ ಹೊರತಟ್ನಾಳ್ ಸೋಮಶೇಖರಗೌಡ್ರು, ಸುನೀಲ ಹೆಸರೂರು, ಕನಕಮೂತಿ9 ಸೇರಿದಂತೆ ಬಿಜೆಪಿ ಪಕ್ಷದ ಮುಖಂಡರು, ಕುಟುಂಬ ವಗ9ದವರು ಹಾಗೂ ಯುವಕ ಮಿತ್ರರು ಉಪಸ್ಥಿತರಿದ್ದರು.

# ಬರಗಾಲ ಘೋಷಿಸಿ ರೈತರಿಗೆ ಪರಿಹಾರ ಕೊಡಿ : ಬಿಜೆಪಿ ಜಿಲ್ಲಾ ಅಧ್ಯಕ್ಷ ನವೀನ್

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ



ಜಿಲ್ಲೆಯಲ್ಲಿ ಭೀಕರ ಬರ ಆವರಿಸಿದ್ದು, ಕೂಡಲೇ ಬರ ಪೀಡಿತ ಜಿಲ್ಲೆ ಎಂದು ಘೋಷಣೆ ಮಾಡಬೇಕು. ಜೊತೆಗೆ ರಾಜ್ಯ ಸರ್ಕಾರ ರೈತರ ನೆರವಿಗೆ ಧಾವಿಸಿ ಸೂಕ್ತ ಪರಿಹಾರ ಕೊಡಬೇಕು ಎಂದು ಬಿಜೆಪಿ ಜಿಲ್ಲಾಧ್ಯಕ್ಷ ನವೀನ್ ಗುಳಗಣ್ಣವರ ಒಟ್ಟಾತಿಯಿಸಿದ್ದಾರೆ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ (ಕೆಎಸ್‌ಎನ್‌ಡಿಎಂಸಿ) 2026 ರ ಅಧಿಕೃತ ವರದಿಯು ಜಿಲ್ಲೆಯಲ್ಲಿ ಭೀಕರ ಬರಗಾಲದ ಕರಾಳ ಮುನ್ಸೂಚನೆಯನ್ನು ನೀಡಿದೆ. ಜೂನ್ ತಿಂಗಳಿನಿಂದ ಜುಲೈ ಮಧ್ಯಭಾಗದವರೆಗಿನ ನೈರುತ್ಯ ಮುಂಗಾರು ಅವಧಿಯಲ್ಲಿ ಜಿಲ್ಲೆಯಾದ್ಯಂತ ಮಳೆ ಸಂಪೂರ್ಣವಾಗಿ ಕ್ಷೀಣಿಸಿದ್ದು, ಅನ್ನದಾತರು ಕಣ್ಣೀರಲ್ಲಿ ಕೈ ತೊಳೆಯುವಂತಾಗಿದೆ. ಬಿತ್ತನೆ ಮಾಡಿರುವ ಬೆಳೆಗಳು ಕಣ್ಣಮುಂದೆಯೇ ಒಣಗುತ್ತಿವೆ. ಇದರಿಂದ ರೈತರು ಕಂಗಾಲಾಗಿದ್ದಾರೆ. ರಾಜ್ಯದ ಕಾಂಗ್ರೆಸ್ ಸರ್ಕಾರ ತಕ್ಷಣವೇ ನಿದ್ದೆಯಿಂದ ಎದ್ದು, ಯುದ್ಧೋಪಾದಿಯಲ್ಲಿ ಮಧ್ಯಪ್ರವೇಶಿಸಿ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಕೊಪ್ಪಳ ಜಿಲ್ಲಾ ಭಾರತೀಯ ಜನತಾ ಪಾರ್ಟಿ ಪರವಾಗಿ ನವೀನ್ ಕುಮಾರ್ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.ಕೆಎಸ್‌ಎನ್‌ಡಿಎಂಸಿ ವರದಿಯ ಪ್ರಕಾರ ಜಿಲ್ಲೆಯ ಎಲ್ಲಾ ತಾಲೂಕುಗಳು ಎದುರಿಸುತ್ತಿರುವ ಮಳೆಯ ಕೊರತೆಯ (ಡಿಇಪಿ) ವಿವರಗಳು ಸರ್ಕಾರದ ಕಣ್ಣು ತೆರೆಸಬೇಕಾಗಿದೆ. ಕೇವಲ ಸರ್ಕಾರ ಸಚಿವ ಸಂಪುಟ ವಿಸ್ತರಣೆಯಲ್ಲಿಯಲ್ಲಿ ತಲ್ಲೀನವಾಗಿದ್ದು, ಜಿಲ್ಲೆಯ ಜಉಸ್ತುವಾರಿ ಸಚಿವರು ಹಾಗೂ ಶಾಸಕರು ಇದರ ಬಗ್ಗೆ ಗಮನ ಹರಿಸುತ್ತಿಲ್ಲ. ಸಚಿವ ಸ್ಥಾನ ಲಾಭಿಯಲ್ಲಿಯೇ ಮುಳುಗಿದ್ದಾರೆ. ಬರದ ಪರಿಹಾರದ ಬಗ್ಗೆ ಗಮನ ಹರಿಸುತ್ತಿಲ್ಲ. ಕೂಡಲೇ ರೈತರ ಸಹಾಯಕ್ಕೆ ಬರಬೇಕು. ಇಲ್ಲವಾದರೇ ಉಗ್ರಹ ಹೋರಾಟ ನಡೆಸಬೇಕಾಗುತ್ತದೆ ಎಂದು ನವೀನ್ ಕುಮಾರ್ ಗುಲಾಗಣ್ಣವರ ಒತ್ತಾಯಿಸಿದ್ದಾರೆ.

## ತುಟಿ ಬಿಚ್ಚದ ಹಾಲಿ ಮಾಜಿಗಳು

ಯಲಬುರ್ಗಾ ಮತ್ತು ಕುಕನೂರು ಅವಳಿ ತಾಲೂಕಿನಲ್ಲಿ ಎರಡು ತಿಂಗಳಿನಿಂದ ಮಳೆ ಆಗದೇ ರೈತರು ಕಂಗಾಲಾಗಿದ್ದಾರೆ, ಸಂಕಷ್ಟ ಎದುರುಸುತ್ತಿದ್ದರೂ ಹಾಲಿ ಶಾಸಕ ಬಸವರಾಜ್ ರಾಯರಡ್ಡಿ ಆಗಲಿ, ಮಾಜಿ ಸಚಿವ ಹಾಲಪ್ಪ ಆಚಾರ್ ಆಗಲಿ ರೈತರ ಬಗ್ಗೆ ಕಾಳಜಿಯ ಮಾತುಗಳು ಬಂದಿಲ್ಲ. ಅವಳಿ ತಾಲೂಕಿನಲ್ಲಿ ಮುಂಗಾರು ಬಹುತೇಕ ಕೈ ಕೊಟ್ಟಿದ್ದು ತೀವ್ರ ಬರಗಾಲ ಆವರಿಸಿದೆ, ಆದರೂ ಕೂಡ ಯಾರೂ ರೈತರ ನೆರವಿಗೆ ಧಾವಿಸುತ್ತಿಲ್ಲ ಎಂದು ರೈತರು ಖೇದ ವ್ಯಕ್ತಪಡಿಸಿದ್ದಾರೆ.

# ಆದರ್ಶ ವಿದ್ಯಾಲಯದ ಶಾಲಾ ಸಂಸತ್ ಪದಗ್ರಹಣ



• ಮಲ್ಲಮ್ಮ ನುಡಿ ವಾರ್ತೆ ಕುಕನೂರು

ತಾಲೂಕಿನ ಇಟಗಿ ಗ್ರಾಮದ ಪಿಎಂ ಶ್ರೀ ಸರ್ಕಾರಿ ಆದರ್ಶ ವಿದ್ಯಾಲಯದಲ್ಲಿ ಗುರುವಾರ ದಿವಸ 2026– 27 ನೇ ಸಾಲಿನ ಶಾಲಾ ಸಂಸತ್ ಪದಗ್ರಹಣ ಕಾರ್ಯಕ್ರಮ ಜರುಗಿತು.

ಕಾರ್ಯಕ್ರಮ ಉದ್ದೇಶಿಸಿ ವಿದ್ಯಾಲಯದ ಮುಖ್ಯ ಶಿಕ್ಷಕರಾದ ರಾಮರಡ್ಡೆಪ್ಪ ಹಾಲಕೇರಿ ಮಾತನಾಡಿ, ಶಾಲಾ ಸಂಸತ್ತಿಗೆ ಈ ವರ್ಷ ಆಯ್ಕೆಯಾದಂತ ಎಲ್ಲಾ ವಿದ್ಯಾರ್ಥಿಗಳ ಮಂತ್ರಿಗಳು, ತಮ್ಮ ತಮ್ಮ ಖಾತೆಗಳಿಗೆ ಪ್ರಾಮಾಣಿಕ ಕೆಲಸ ಮಾಡಬೇಕು, ಅವುಗಳನ್ನು ಮೈಗೂಡಿಸಿಕೊಂಡು ಉತ್ತಮ ಕೆಲಸ ಮಾಡಿದಾಗ ನಾಯಕತ್ವ ಗುಣ ಬೆಳೆಯುತ್ತದೆ ಶಾಲೆ ಮತ್ತು ಶಾಲಾ ಸಂಸತ್ತಿನ ಉದ್ದೇಶಗಳು ಈಡೇರಲು ಸಾಧ್ಯ, ಶಾಲಾ ಸಂಸತ್ತು ಮಂತ್ರಿಗಳು ಪ್ರತಿ ತಿಂಗಳು ಒಂದು ಸಭೆ ಮಾಡಿ ಈ ವರ್ಷದ ನನ್ನ ಕಾರ್ಯಕ್ರಮಗಳು ಹಾಗೂ ಮಾಡಬೇಕಾಗಿರುವ ಕೆಲಸದ ಬಗ್ಗೆ ಚರ್ಚಿಸಿ ನಿರ್ಧಾರ ಕೈಗೊಳ್ಳಬೇಕು, ಎಲ್ಲಾ ಮಂತ್ರಿಗಳು ಒಗ್ಗೂಡಿ ಕೆಲಸ ಮಾಡಿದಾಗ ಎಲ್ಲಾ ಕೆಲಸಗಳು ಉತ್ತಮ ಫಲ ಶ್ರುತಿ ದೊರೆಯುತ್ತದೆ, ಶಿಕ್ಷಕರು ಶಾಲಾ ಸಂಸತ್ತಿನ ಮಂತ್ರಿಗಳಿಗೆ ಸಲಹೆ ಸೂಚನೆ ಮಾರ್ಗದರ್ಶನ ನೀಡುತ್ತಿರಬೇಕು ಎಂದು ಹೇಳಿದರು. ಈ ವರ್ಷದ ಶಾಲಾ ಸಂಸತ್ತಿಗೆ, ಶರಣಕುಮಾರ. ಬಳಿಗಾರ್ (ಪ್ರಧಾನಮಂತ್ರಿ ), ಕೀರ್ತಿ. ಟಿ (ಉಪ ಪ್ರಧಾನಿ ) ಅನಿತಾ ಸಿ ಎಂ (ಪ್ರವಾಸೋದ್ಯಮ ಸಚಿವ) ಆದರ್ಶ, ಡಿ (ಸಾರಿಗೆ ಮಂತ್ರಿ) ಪಲ್ಲವಿ ( ಆಹಾರ ಮಂತ್ರಿ ) ಸೂರಜ್ (ಕ್ರೀಡಾ ಮಂತ್ರಿ ) ದಿವ್ಯಶ್ರೀ (ಸಾಂಸ್ಕೃತಿಕಾ ಮಂತ್ರಿ) ಸುನಿಲ್ ಕುಮಾರ್ (ಆರೋಗ್ಯ ಮಂತ್ರಿ) ಅನುಶ್ರೀ (ಶಿಕ್ಷಣ ಮಂತ್ರಿ ) ವಸಂತ್ (ಪರಿಸರ ಮಂತ್ರಿ ) ಸೌಜನ್ಯ ಎಂ ( ಹಣಕಾಸು ಮಂತ್ರಿ ) ಅಮಿತ್ ಎಸ್, (ವಾರ್ತೆ ಮತ್ತು ಪ್ರಸರಣ ಮಂತ್ರಿ ) ಕೃತಿಕಾ (ಗ್ರಂಥಾಲಯ ಮಂತ್ರಿ ) ಗಳಾಗಿ ಪ್ರಮಾಣವಚನ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಶಿಕ್ಷಕರಾದ ಸಂತೋಷ್ ಕುಮಾರಿ, ನಾಗರಾಜ ಸೋನಗ, ಬಸಮ್ಮ ಮೇಟಿ, ರಂಗಪ್ಪ ಓಲೆಕಾರ್, ವಿರುಪಾಕ್ಷಪ್ಪ ಮ್ಯಾಳಿ, ಜಯಪ್ಪ ಕನಕಮ್ಮನವರ, ರೋಹಿಣಿ ಸಿ , ಶ್ರೀದೇವಿ ಬೆಳದಡಿ,ಜಗದೇಶ್ ಅಜ್ಜಣ್ಣ ನವರ್, ಮಹೇಶ್ ರಾಮದುರ್ಗ, ಮುರಾರಿ ಭಜಂತ್ರಿ, ಶ್ವೇತಾ,ಪೂಜಾ, ಭೀಮಾಂಬಿಕಾ, ಕಿರಣ್, ರವಿಕಿರಣ್, ಸಿಂಧು, ರೋಹಿಣಿ, ಹಾಗೂ ರಹಿಮಾನಸಾಬ್, ಬಸಣ್ಣ ಶಾಲಾ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರು ಇದ್ದರು.

# ಗೃಹಜ್ಯೋತಿ ಯೋಜನೆ ಫಲಾನುಭವಿಗಳ ದಾಖಲಾತಿ ಪರಿಶೀಲನೆ

• ಮಲ್ಲಮ್ಮ ನುಡಿ ವಾರ್ತೆ ಹಗರಿಬೊಮ್ಮನಹಳ್ಳಿ




ತಾಲೂಕಿನ ಪಿಂಜಾರ್ ಹೆಗ್ಡಳ್ ಗ್ರಾಮದಲ್ಲಿ ಗೃಹ ಜ್ಯೋತಿ ಯೋಜನೆಯ ಫಲಾನುಭವಿಗಳ ದಾಖಲಾತಿ ಮರುಪರಿಶೀಲನೆ ಕಾರ್ಯ ನಡೆಯುತ್ತಿದ್ದು ಫಲಾನುಭವಿಗಳು ಅಗತ್ಯದಾಖಲಾತಿ ಗಳನ್ನು ನೀಡಿ ಸಹಕರಿಸಬೇಕು ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸದಸ್ಯರಾದ ಪರಶುರಾಮ್ ಹೆಗ್ಡಳ್ ಅವರು ಸಾರ್ವಜನಿಕರಲ್ಲಿ ಮನವಿ ಮಾಡಿಕೊಂಡರು. ಸರ್ಕಾರದ ಪ್ರಮುಖ ಯೋಜನೆಗಳಾದ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹಜ್ಯೋತಿ ಯೋಜನೆಯೂ ಕೂಡ ಕಳೆದ ಮೂರುವರ್ಷಗಳಿಂದ ಯಶಸ್ವಿಯಾಗಿ ಸಾರ್ವಜನಿಕರ ಮನೆ ಬೆಳಗುತ್ತಿದ್ದು, ಮುಂದೆಯೂ ಕೂಡ ಅರ್ಹ ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯದೊರಕಬೇಕು ಎಂಬುದು ಸರ್ಕಾರದ ಆಶಯವಾಗಿದ್ದು, ಅನಧಿಕೃತ ವಿದ್ಯುತ್ ಬಳಕೆಗೆ ಕಡಿವಾಣ ಹಾಕುವ ದೃಷ್ಟಿಯಿಂದ ಸರ್ಕಾರ ದಾಖಲಾತಿ ಮರುಪರಿಶೀಲನೆ ಕಾರ್ಯ ನಡೆಸುತ್ತಿದ್ದು ಕೆ ಇ ಬಿ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿ ದಾಖಲೆ ಸಂಗ್ರಹ ಮಾಡುತ್ತಾರೆ. ಆದ್ದರಿಂದ ಸಾರ್ವಜನಿಕರು ಅಗತ್ಯ ದಾಖಲೆಗಳು, ಆಧಾರ್ ಕಾರ್ಡ್, ವೋಟರ್ ಐ ಡಿ, ಕರೆಂಟ್ ಬಿಲ್, ಫೋಟೋ ಸೇರಿದಂತೆ ದಾಖಲೆಗಳನ್ನು ಒದಗಿಸಬೇಕು ಎಂದು ಸಾರ್ವಜನಿಕರಿಗೆ ಮನವಿ ಮಾಡಿದರು. ಈ ಸಂದರ್ಭದಲ್ಲಿ ಉಪನಾಯಕನಹಳ್ಳಿ ಶಾಖಾ ಅಧಿಕಾರಿ ಶ್ರೀನಿವಾಸ್ ಲೈನ್ ಮ್ಯಾನ್ ವಿನಾಯಕ, ಮೆಕಾನಿಕ್ ಪ್ರವೀಣ್ ಮತ್ತು ಊರಿನ ಪ್ರಮುಖರಾದ ರವಿಯಪ್ಪ ರೆಡ್ಡಿ, ಕೆ ಪರಮೇಶ್, ಕೇಶವರಾಯನಬಂಡಿ ದುರುಗಪ್ಪ ಅಂಗಡಿ ಮಂಜಪ್ಪ, ಸೋಮು ಜಂಗ್ಲಿ, ಬಡಿಗೇರ್ ವಿನಾಯಕ ಮತ್ತಿತರರು ಇದ್ದರು.

# ಇಂದು ದೃಷ್ಟಿ ಕೇಂದ್ರ ಉದ್ಘಾಟನೆ ಹಾಗೂ ಉಚಿತ ನೇತ್ರ ತಪಾಸಣಾ ಶಿಬಿರ:ವಿಕ್ರಮ್

• ಮಲ್ಲಮ್ಮ ನುಡಿ ವಾರ್ತೆ ಲಿಂಗಸಗೂರ





ಜು.16:ಜಿಲ್ಲಾ ಅಂದತ್ವ ನಿವಾರಣಾ ಸಂಸ್ಥೆ ರಾಯಚೂರು, ಲಯನ್ಸ್ ಕ್ಲಬ್ ಇಂಟರ್ನ್ಯಾಷನಲ್ ಫೌಂಡೇಶನ್ ಹುಬ್ಬಳ್ಳಿ, ಎಸ್ ಜೆ ಎಂ ನೇತ್ರ ಬಂಡಾರ ಹಾಗೂ ಸಂಶೋಧನಾ ಪ್ರತಿಷ್ಠಾನ ಎಂ ಎಂ ಜೋಶಿ ನೇತ್ರ ವಿಜ್ಞಾನ ಸಂಸ್ಥೆ ಹಾಗೂ ಲಯನ್ಸ್ ಕ್ಲಬ್ ಆಫ್ ಲಿಂಗಸಗೂರು ಇವರ ನೇತೃತ್ವದಲ್ಲಿ ಇದೇ ಜುಲೈ 17ರಂದು ಲಿಂಗಸಗೂರು ಪಟ್ಟಣದಲ್ಲಿ ದೃಷ್ಟಿ ಕೇಂದ್ರದ ಉದ್ಘಾಟನೆ ಹಾಗೂ ಉಚಿತ ನೇತ್ರ ತಪಾಸಣಾ ಮತ್ತು ಶಸ್ತ್ರಚಿಕಿತ್ಸಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಲಿಂಗಸಗೂರ ಲಯನ್ಸ್ ಕ್ಲಬ್ ನ ವಿಕ್ರಮ್ ಗುಡಗೇರಾ ತಿಳಿಸಿದರು.ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಈಗಾಗಲೇ ಲಯನ್ಸ್‌ಕ್ಲಬ್ ವತಿಯಿಂದ ವಿವಿಧ ಬಾಗಗಳಲ್ಲಿ ಈಗಾಗಲೇ ಮಾನ್ವಿ, ಹುನಗುಂದ, ಲೋಕಾಪುರ, ಬಬಲೇಶ್ವರ, ಹಾಗೂ ಮುದ್ದೇಬಿಹಾಳ ಸೇರಿದಂತೆ ಒಂದೇ ಬಾರಿಗೆ 6 ದೃಷ್ಟಿ ಕೇಂದ್ರಗಳನ್ನು ಉದ್ಘಾಟಿಸಲಾಗುತ್ತಿದೆ.

ಶಸ್ತ್ರಚಿಕಿತ್ಸೆಗೆ ಆಯ್ಕೆಯಾದವರಿಗೆ ವೈದ್ಯರಿಂದ ಕೃತಕ ಮಸೂದವನ್ನು ಅಳವಡಿಸಿ ಉಚಿತ ಶಸ್ತ್ರಚಿಕಿತ್ಸೆ ಮಾಡಲಾಗುವುದು. ಶಸ್ತ್ರಚಿಕಿತ್ಸೆಗೆ ಅಗತ್ಯವಿರುವ ರೋಗಿಗಳನ್ನು ಹುಬ್ಬಳ್ಳಿಗೆ ಕರೆಸಿಕೊಂಡು ಚಿಕಿತ್ಸೆ ಕೊಡಿಸಲಾಗುವುದು. ಗ್ರಾಮೀಣ ಜನತೆಗೆ ಗುಣಮಟ್ಟದ ಹಾಗೂ ಕೈಗೆಟಕುವ ನೇತ್ರ ಚಿಕಿತ್ಸೆ ಅವರ ಸಮೀಪದಲ್ಲಿಯೇ ದೊರಕಿಸುವಂತೆ ಮಾಡುವ ಉದ್ದೇಶದಿಂದಾಗಿ ಲಿಂಗಸಗೂರಿನಲ್ಲಿ ಈ ಕಾರ್ಯವನ್ನು ಹಮ್ಮಿಕೊಳ್ಳಲಾಗಿದ್ದು ಅವಶ್ಯಕತೆ ಇರುವವರು ಇದೇ ಜುಲೈ 17ರಂದು ಶುಕ್ರವಾರ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಲಿಂಗಸಗೂರು ಪಟ್ಟಣದ ವಾರ್ಡ್ 13 ರಲ್ಲಿ ಬರುವ ನಿವೃತ್ತ ತಹಸಿಲ್ದಾರ್ ಅಮರೇಶಪ್ಪ ಹೂನೂರ್ ಹಳೆಯ ಬಸ್ ನಿಲ್ದಾಣದ ಹತ್ತಿರ ಕರಡಕಲ್ ಟ್ಯಾಂಕ್ ರಸ್ತೆ, ಬಾಬುರಾವ್ ಗ್ಯಾರೇಜ್ ಎದುರುಗಡೆ ಈ ಉಚಿತ ನೇತ್ರ ತಪಾಸಣಾ ಶಿಬಿರವು ನಡೆಯಲಿದ್ದು ಶಿಬಿರದಲ್ಲಿ ಗ್ರಾಮೀಣ ಭಾಗದ ದೃಷ್ಟಿಕೋನ ಹೊಂದಿದವರು ಶಿಬಿರದಲ್ಲಿ ಪಾಲ್ಗೊಂಡು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು.

ಚಿಕಿತ್ಸೆಗೆ ಹಾಗೂ ತಪಾಸಣೆಗೆ ಬರುವವರು ಬಿಪಿಎಲ್ ಕಾರ್ಡ್ ಹೊಂದಿದವರಿಗೆ ಕಣ್ಣಿನ ಪೊರೆ ಶಾಸ್ತ್ರ ಚಿಕಿತ್ಸೆ ಉಚಿತವಾಗಿರುತ್ತದೆ. ಶಿಬಿರಕ್ಕೆ ಬರುವವರು ತಪ್ಪದೆ ತಮ್ಮ ಆಧಾರ್ ಕಾರ್ಡನ್ನು ತೆ–ಗೆದುಕೊಂಡು ಬರಬೇಕು. ಹೆಚ್ಚಿನ ಮಾಹಿತಿಗಾಗಿ 8123520406 ,9206783538,7760864169,9448571599 ಈ ದೂರವಾಣಿ ಸಂಖ್ಯೆಗಳಿಗೆ ಕರೆ ಮಾಡಿ ಹೆಚ್ಚಿನ ಮಾಹಿತಿ ಪಡೆಯಲು ಅವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿಲಯನ್ಸ್ ಕ್ಲಬ್ ಅಧ್ಯಕ್ಷ ನಾಗರಾಜ್ ಗಸ್ತಿ, ಎಸ್ ಎಂ ಕಡ್ಲೂರು, ವಿ ಎಸ್ ಜಗವತಿ ಮಠ್, ರಾಘವೇಂದ್ರ ಉಪಸ್ಥಿತರಿದ್ದರು.

# ಮಳೆ ಇಲ್ಲದೆ ಬೆಳೆ ಉಳಿಸಿಕೊಳ್ಳುವ ತಾಂತ್ರಿಕತೆ ಕುರಿತು ಮಾಹಿತಿ



• ಮಲ್ಲಮ್ಮ ನುಡಿ ವಾರ್ತೆ ಕುಕನೂರು

ಹೋಬಳಿಯಲ್ಲಿ ಬೆಳೆ ಪರಿವೀಕ್ಷಣೆ ಮಾಡಿ ಮಳೆ ಇಲ್ಲದ ಸಂದರ್ಭದಲ್ಲಿ ಬೆಳೆ ಉಳಿಸಿಕೊಳ್ಳುವ ತಾಂತ್ರಿಕತೆಗಳ ಕುರಿತು ಮತ್ತು ಪರ್ಯಾಯ ಬೆಳೆ ಬೆಳೆಯುವ ಕುರಿತು ಮಾಹಿತಿ ನೀಡಲಾಯಿತು. ಉಪಕೃಷಿ ನಿರ್ದೇಶಕರಾದ ಸಿದ್ದೇಶ್ವರ ಅವರು ಬೆಳೆ ವಿಮೆ ಕುರಿತು ಮಾಹಿತಿ ನೀಡಿದರು. ರೈತರಾದ ಶರಣಪ್ಪ ಮೇಟಿ, ಶೇಖಪ್ಪ ಅಸೂತಿ ಮತ್ತು ಆತ್ಮಾ ಯೋಜನೆಯ ಜಿ ಡಿ ಕೊಳಜಿ ಇದ್ದರು. ಇದೇ ಸಂದರ್ಭದಲ್ಲಿ ಎರೆ ಭೂಮಿಯಲ್ಲಿ ಉಸುಕು ಬಳಕೆ–ಯ ಪ್ರಯೋಜನ ಮತ್ತು ಅಪಾಯಗಳ ಕುರಿತು ರೈತರೊಂದಿಗೆ ಚರ್ಚಿಸಲಾಯಿತು. ಆಡಿ. ಬದರಿ ಪ್ರಸಾದ್ ಮುಖ್ಯಸ್ಥರು ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ ಕೊಪ್ಪಳ ಉಪಸ್ಥಿತರಿದ್ದರು.

# ಎಸ್‌ಐಆರ್ ಪ್ರಗತಿ ಪರಿಶೀಲನೆ



• ಮಲ್ಲಮ್ಮ ನುಡಿ ವಾರ್ತೆಮುದಗಲ್

ಪಟ್ಟಣದ ಪುರಸಭೆ ಕಾರ್ಯಾಲಯದ ಸಭಾಂಗಣದಲ್ಲಿ ಎಸ್‌ಐಆರ್ ಪ್ರಗತಿ ಪರಿಶೀಲನೆ ಗುರವಾರ ಜರುಗಿತು.

ಪ್ರಗತಿ ಪರಿಶೀಲನೆಯಲ್ಲಿ ಬಿಎಲ್‌ಓ ಮೇಲ್ವಿಚಾರಕ ರಿಯಾಜುದ್ದೀನ್ ಮಾತನಾಡಿ ಬಿಎಲ್‌ಓ ಮಟ್ಟದಲ್ಲಿ ಮನೆ ಮನೆಗೆ ತೆರಳಿ ನಡೆಸುತ್ತಿರುವ ಎನ್ಯುಮರೇಷನ್ ಗಣತಿ ಕಾರ್ಯ ಪ್ರಗತಿಯಲ್ಲಿದೆ. ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆಗೆ ಹೆಚ್ಚಿನ ಒತ್ತು ನೀಡಬೇಕು. ಎಸ್‌ಐಆರ್ ಪರಿಶೀಲನೆಯಲ್ಲಿ ಮತದಾರರ ಪಟ್ಟಿಯ ಪರಿಷ್ಕರಣೆ, ಎಸ್‌ಐಆರ್ ಅರ್ಜಿ ಭರ್ತಿ ಮಾಡುವ ವಿಧಾನ, ಅಗತ್ಯ ದಾಖಲೆಗಳು ಹಾಗೂ ಸಾರ್ವಜನಿಕರು ಅನುಸರಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಸವಿಸ್ತಾರವಾಗಿ ಮಾಹಿತಿ ನೀಡಿ, ಬಿಎಲ್‌ಓ ಗಳ ಸಹಕಾರದೊಂದಿಗೆ ಕೆಲಸವನ್ನು ಮಾಡಲು ಸೂಚಿಸಲಾಯಿತು.

ಪುರಸಭೆ ಮುಖ್ಯಾಧಿಕಾರಿ ಪ್ರವೀಣ ಕುಮಾರ ಬೋಗಾರ, ಕಂದಾಯ ವಿಭಾಗ ಅಂತೋಣಿ, ಜಿಲಾನಿ ಪಾಷಾ ಹಾಗೂ ಪುರಸಭೆ ಸಿಬ್ಬಂದಿಗಳು ಸೇರಿದಂತೆ ಮುದಗಲ್ಲ ಭಾಗದ ಬಿಎಲ್‌ಓಗಳು ಉಪಸ್ಥಿತರಿದ್ದರು.

# ಡಬ್ಬಾ ಅಂಗಡಿ ತೆರವು ಗೊಳಿಸಲು ಮನವಿ




• ಮಲ್ಲಮ್ಮ ನುಡಿ ವಾರ್ತೆಮುದಗಲ್

ವಿಕಲಚೇತನರ ಸ್ನೇಹ ಶೌಚಾಲಯಕ್ಕೆ ತಡೆಯಾಗಿರುವ ಡಬ್ಬಾ ಅಂಗಡಿಗಳನ್ನು ತೆರವು ಗೊಳಿಸಬೇಕೆಂದು ಕರ್ನಾಟಕ ರಾಜ್ಯ ವಿಕಲಚೇತನ ಆರ್ಪಿಡಿ ಟಾಸ್ಕ್ ಪೋರ್ಟ್ ವತಿಯಿಂದ ಪುರಸಭೆ ಮುಖ್ಯಾಧಿಕಾರಿ ಪ್ರವೀಣ ಕುಮಾರ ಬೋಗಾರ ಅವರಿಗೆ ಬುದುವಾರ ಮನವಿ ಪತ್ರ ಸಲ್ಲಿಸಿದರು.ವಿಕಲಚೇತನ ವ್ಯಕ್ತಿಗಳ ಹಕ್ಕುಗಳ ಕಾಯ್ದೆಗಳ ಕಾಯ್ದೆ 2016ರ ಸೆಕ್ಷನ್ 40 ರ ಅನ್ವಯ ಎಲ್ಲಾ ಸರ್ಕಾರಿ ಕಟ್ಟಡಗಳು, ಶಾಲಾ ಕಾಲೇಜುಗಳು ಹಾಗೂ ಸಾರ್ವಜನಿಕ ಸ್ಥಳಗಳು ವಿಕಲಚೇತನರ ಸ್ನೇಹಿಯಾಗಿರಬೇಕು ಮತ್ತು ವಿಕಲಚೇತನರ ಸುಲಭ ಪ್ರವೇಶಕ್ಕಾಗಿ, ಅಡೆ ತಡೆ ರಹಿತ ವಾತಾವರಣ ಕಲ್ಪಿಸಿಕೊಡಿವುದು ಸರಕಾರದ ಮುಖ್ಯ ಜವಾಬ್ದಾರಿಯಾಗಿದೆ. ವಿಕಲಚೇತನರ ಹಿತರಕ್ಷಣೆಗಾಗಿ ನಾಡ ಕಾರ್ಯಾಲಯ ಮುಂಭಾಗದ ಸಾರ್ವಜನಿಕರ ವಿಕಲಚೇತನರ ಸ್ನೇಹಿ ಶೌಚಾಲಯಕ್ಕೆ ಅಡೆತಡೆಯಾಗಿರುವ ಡಬ್ಬ ಅಂಗಡಿಗಳನ್ನು ತೆರವುಗೊಳಿಸಿ, ಶೌಚಾಲಕ್ಕೆ ಅನುಕೂಲ ಮಾಡಿಕೊಡಬೇಕೆಂದು ಮನವಿ ಸಲ್ಲಿಸಿದರು.ಸುರೇಶ ಭಂಡಾರಿ, ಅಜಮಲ್ ಅಹಮದ್, ರಹಿಮಾನ್ ದುಲಾ ಸೇರಿದಂತೆ ಇತರರಿದ್ದರು.

# ರೈತಬಳಗದಿಂದ ಮಣ್ಣೆತ್ತಿನ ಅಮಾವಾಸ್ಯೆ ಕರಿ



• ಮಲ್ಲಮ್ಮ ನುಡಿ ವಾರ್ತೆಮುದಗಲ್

ವೆಂಕಟರಾಯನಪೇಟೆ ಬಡಾವಣೆಯ ಮಾಜಿ ಶಾಸಕ ಎಂ. ಗಂಗಣ್ಣ ನಿವಾಸದ ಮುಂಭಾಗದಲ್ಲಿ ರೈತ ಬಳಗದಿಂದ ಮಣ್ಣೆತ್ತಿನ ಅಮಾವಾಸ್ಯೆ ಕರಿ ಬುಧವಾರ ಜರುಗಿತು.

ಕೃಷಿ ಕಾರ್ಯ ಚಟುವಟಿಕೆ ಸಜ್ಜುಗೊಳಿಸುವ ಸಿದ್ಧತೆಗಾಗಿ ಧಾರ್ಮಿಕ ವಿಧಿ ವಿಧಾನದಂತೆ ರೈತರ ಉಳುಮೆ ಮಾಡುವ ಎತ್ತುಗಳೊಂದಿಗೆ ಮಣ್ಣಿನ ಎತ್ತುಗಳಿಗೆ ಸಂಸ್ಕಾರ ಬದ್ಧವಾಗಿ ಪೂಜಿಸಿದರು. ಹೋಳಿಗೆ, ಕಡುಬು ಸೇರಿದಂತೆ ವಿವಿಧ ಸಿಹಿ ತಿನಿಸುಗಳ ಎಡೆ ಇಡಲಾಯಿತು. ನಂತರ ಒಟ್ಟಿಗೆ ಓಡಾಡಿಸುವ ಸಂಪ್ರದಾಯದಂತೆ ಬೇವಿನ ಸೊಪ್ಪಿನೊಂದಿಗೆ ಕರಿ ಹರಿಯಲಾಯಿತು. ಬಡಾವಣೆಯ ನಿವಾಸಗಳಿಗೆ ಕೊಬ್ಬರಿ, ಬೆಲ್ಲ ಸೇರಿದಂತೆ ವಿವಿಧ ವಸ್ತುಗಳನ್ನು ನೀಡಲಾಯಿತು.

ಗಂಗಾಧರ ಯಾದವ್, ಮುದಿನಂದಪ್ಪ ಫೆದಾರ, ಲೋಕೇಶ್ ದಫೆದಾರ, ಗದ್ದೆಪ್ಪ ಹೊಸಮನಿ, ಹನುಮಂತ ಯಾದವ, ನಾಗರಾಜ ಯಾದವ ಸೇರಿದಂತೆ ಯುವಕರು ಉಪಸ್ಥಿತರಿದ್ದರು.

# ಅಲೆಮಾರಿ, ಅರೆ ಅಲೆಮಾರಿ ಜನಾಂಗದ ಕುಂದು ಕೊರತೆ ಆಲಿಸಿದ ಡಿಸಿ ಸಂಗಪ್ಪ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**

ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದವರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಅಭಿವೃದ್ದಿಗೆ ಸರಕಾರದ ವಿವಿಧ ಯೋಜನೆಗಳನ್ನು ತಲುಪಿಸುವಲ್ಲಿ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಿಬೇಕೆಂದು ಜಿಲ್ಲಾಧಿಕಾರಿ ಸಂಗಪ್ಪ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಜರುಗಿದ ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದವರ ಕುಂದುಕೊರತೆ ಸಭೆಯ ಅಧ್ಯಕ್ಷತೆ ವಹಿಸಿ, ಮಾತನಾಡಿದ ಅವರು, ಸಮುದಾಯದ ಅರ್ಹ ಫಲಾನುಭವಿಗಳು ಸರ್ಕಾರದ ಯೋಜನೆಗಳ ಸೌಲಭ್ಯಗಳಿಂದ ಯಾವುದೇ ಕಾರಣಕ್ಕೂ ವಂಚಿತರಾಗದಂತೆ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು.ಯೋಜನೆಗಳಿಗೆಸಂಬಂಧಿಸಿದ ಅರ್ಜಿಗಳನ್ನು ನಿಗಧಿತ ಅವಧಿಯಲ್ಲಿ ವಿಲೇವಾರಿ ಮಾಡಿ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳುವಂತೆ ತಿಳಿಸಿದರು.



ಜಿಲ್ಲೆಯಲ್ಲಿ ಅಲೆಮಾರಿ ಹಾಗೂ ಅಲೆ ಅಲೆಮಾರಿ ಜನಾಂಗದ ಮಕ್ಕಳ ಶಿಕ್ಷಣಕ್ಕೆ ವಿಶೇಷ ಆದ್ಯತೆ ನೀಡಬೇಕು. ಆರೋಗ್ಯ ತಪಾಸಣೆ, ವಸತಿ ಹಾಗೂ ಜೀವನೋಪಾಯಕ್ಕೆಸಂಬಂಧಿತ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ಸಮುದಾಯದ ಜೀವನಮಟ್ಟ ಸುಧಾರಣೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ತಿಳಿಸಿದರು.

ಸಣ್ಣಪುಟ್ಟ ಉದ್ಯೋಗ ಕೈಗೊಳ್ಳಲು ಬ್ಯಾಂಕ್‌ಗಳ ಮೂಲಕ ಸಾಲ ವಿತರಣೆಗೆ ಕ್ರಮಕೈಗೊಳ್ಳುವಂತೆ ಸಭೆಯಲ್ಲಿದ್ದ ಜಿಲ್ಲಾ ಅಗ್ರಣಿ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ರಾಜಕುಮಾರ ಹೂಗಾರ ಅವರಿಗೆ ಜಿಲ್ಲಾಧಿಕಾರಿಗಳು ತಿಳಿಸಿದರು.

ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಪಂಕಜ ಮಾತನಾಡಿ, ಕಳೆದ 2025–26ನೇ ಸಾಲಿನಲ್ಲಿ ಅಲೆಮಾರಿ, ಅರೆ ಅಲೆಮಾರಿ ಜನಾಂಗಕ್ಕೆ ಸೇರಿದ 1 ರಿಂದ 8ನೇ ವಿದ್ಯಾರ್ಥಿಗಳಿಗೆ ಪ್ರತಿ ಪ್ರತಿ ತಿಂಗಳು 2 ಸಾವಿರ ರೂ.9 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು 4 ಸಾವಿರ ರೂ. ಗಳಂತೆ ಒಟ್ಟು 484 ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ಹಾಗೂ ಮೆಟ್ರಿಕ್ ನಂತರ ಪಿಯುಸಿ, ಡಿಪ್ಲೋಮಾ, ಪದವಿ, ಬಿಇ, ಎಂಬಿಬಿಎಸ್, ಬಿಡಿಎಸ್ ಹಾಗೂ ಇನ್ನಿತರ ವೃತ್ತಿಪರ ಕೋರ್ಸಗಳಲ್ಲಿ ಅಭ್ಯಾಸ ಮಾಡುತ್ತಿರುವ 264 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗಿದೆ. ವಸತಿ ಯೋಜನೆಯಡಿ 63 ಮನೆಗಳ ಗುರಿ ಹೊಂದಲಾಗಿದ್ದು, ಇದರ ಜೊತೆಗೆ ಮೂಲಭೂತ ಸೌಕರ್ಯ, ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಸದಾಶಿವ ಬಡಿಗೇರ ಮಾತನಾಡಿ, ಪರಿಶಿಷ್ಟಜಾತಿಯ ಅಲೆಮಾರಿ ಸಮುದಾಯದ ಜನಸಂಖ್ಯೆ 35265 ಇದ್ದರೆ, ಪರಿಶಿಷ್ಟ ಪಂಗಡದ ಅಲೆಮಾರಿ ಜನಸಂಖ್ಯೆ ಒಟ್ಟು 4257 ಇದೆ. ಸದರಿ ಸಮುದಾಯಕ್ಕೆ ಅಲೆಮಾರಿ ಅಭಿವೃದ್ದಿ ನಿಗಮದಡಿ 2025–26ನೇ ಸಾಲಿಗೆ ಪರಿಶಿಷ್ಟ ಜಾತಿಯ ಅಲೆಮಾರಿ ಜನಾಂಗಕ್ಕೆ ಸಾರಥಿ ಯೊಜನೆ, ನೇರಸಾಲ, ಉದ್ಯಮ ಶೀಲತಾ ಯೋಜನೆ, ಮೈಕ್ರೋ ಕ್ರೆಡಿಟ್, ಗಂಗಾ ಕಲ್ಯಾಣ, ಭೂ ಒಡೆತನ ಸೇರಿದಂತೆ ವಿವಿಧ ಯೋಜನೆಯಡಿ ಒಟ್ಟು 84 ಫಲಾನುಭವಿಗಳಿಗೆ ಸೌಲಭ್ಯ ನೀಡಿದರೆ, ಪರಿಶಿಷ್ಟ ಪಂಗಡದ ಅಲೆಮಾರಿ ಜನಾಂಗದ 12 ಫಲಾನುಭವಿಗಳಿಗೆ ಸೌಲಭ್ಯ ಒದಗಿಸಲಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ಜಿ.ಪಂ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಗಜಾನನ ಬಾಲೆ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಜಗದೀಶ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಮಂಜುನಾಥ ಡಿ. ಸೇರಿದಂತೆ ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದ ಸಂಘಟನೆಗಳ ಪ್ರತಿನಿಧಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.

## ತಡ ಬೆಳವಣಿಗೆ ಮಕ್ಕಳಿಗೆ ಪೌಷ್ಟಿಕ ಆಹಾರ ಕಿಟ್ ವಿತರಣೆ



**ಬಾಗಲಕೋಟೆ:** ಬಿಜಾಪೂರ ಇಂಟಿಗ್ರೇಟೆಡ್ ರೂರಲ್ ಡೆವಲಪ್ಮೆಂಟ್ ಸೊಸೈಟಿ (ಬರ್ಡ್ಸ್) ಹಾಗೂ ಅಜೀಂ ಪ್ರೇಮಜಿ ಫೌಂಡೇಶನ್ ಬೆಂಗಳೂರು ಸಂಯುಕ್ತ ಆಶ್ರಯದಲ್ಲಿ ಗುರುವಾರ 50 ಮಕ್ಕಳಿಗೆ ಮೂರು ತಿಂಗಳಿನ ಪೌಷ್ಟಿಕ ಆಹಾರ ಕಿಟ್ ಉಚಿತವಾಗಿ ವಿತರಿಸಲಾಯಿತು.

ಭಗಿನಿ ಸಮಾಜದ ಹಳೆಯ ಕಟ್ಟಡದಲ್ಲಿರುವ ಬರ್ಡ್ಸ್ ಥೇರಪಿ ಸೆಂಟರ್ ನಲ್ಲಿ ನಡೆದ ಕಾರ್ಯಕ್ರಮಕ್ಕೆ ಲಯನ್ಸ ಕ್ಲಬ್ ಅಧ್ಯಕ್ಷೆ ಡಾ.ಕ್ಷಮತಾ ಕೆರೂಡಿ ಹಾಗೂ ಲಯನ್ಸ ಲೇಡೀಸ್ ಕ್ಲಬ್ ಅಧ್ಯಕ್ಷೆ ಸುಮಾ ಪಟ್ಟಣಶೆಟ್ಟಿ ಹಾಗೂ ನಿವೃತ್ತ ಕೃಷಿ ಜಂಟಿ ನಿರ್ದೇಶಕ ಪಿ.ಡಿ.ಜತ್ತಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಕ್ಕಳ ಪಾಲಕರಿಗೆ ಕಿಟ್ ವಿತರಿಸುವ ಮೂಲಕ ಕಾರ್ಯಕ್ರಮ ಉದ್ಘಾಟನೆ ಮಾಡಿದರು.

ಪಿ.ಡಿ.ಜತ್ತಿ ಪೌಷ್ಟಿಕ ಆಹಾರದ ವಿವಿಧ ಪ್ರಯೋಜನಗಳ ಕುರಿತು ಮಾತನಾಡಿದರು. ಡಾ.ಕ್ಷಮತಾ ಕೆರೂಡಿ ಮಾತನಾಡಿ, ಲಯನ್ಸ್ ಕ್ಲಬ್ ಬರ್ಡ್ಸ್ ಸಂಸ್ಥೆಯೊಂದಿಗೆ ನಿಧಾನ ಗತಿ ಬೆಳವಣಿಗೆ ಹಾಗೂ ವಿಶೇಷ ಚೇತನ ಮಕ್ಕಳ ಸಲುವಾಗಿ ಕಾರ್ಯಕ್ರಮ ಹಮ್ಮಿಕೊಳ್ಳುವುದಾಗಿ ಘೋಷಿಸಿದರು.ಸುಮಾ ಪಟ್ಟಣಶೆಟ್ಟಿ ಮಾತನಾಡಿದರು. ಬರ್ಡ್ಸ್ ಅಧ್ಯಕ್ಷ ರಂಗನಗೌಡ ದಂಡಣ್ಣವರ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಮಹಾಂತೇಶ ಅಗಸಿಮುಂದಿನ ಹಾಗೂ ಮುಖ್ಯ ಅತಿಥಿಗಳನ್ನು ಬರ್ಡ್ಸ್ ವತಿಯಿಂದ ಶಾಲು ಹೊದಿಸಿ ಸನ್ಮಾನಿಸಿ ಸ್ಮರಣಿಕೆ ನೀಡಲಾಯಿತು. ಅನಿತಾ ವಾಲಿಕಾರ ಪ್ರಾರ್ಥಿಸಿದರು. ಚಿದಾನಂದ ಸ್ವಾಗಟಿಸಿದರು. ಸಿಇಓ ಪ್ರವೀಣ ಪ್ರಾಸ್ಥಾವಿಕ ಮಾತನಾಡಿದರು. ದೀಪಾ ವಂದಿಸಿದರು.

## ಬೃಹತ್ ರಕ್ತದಾನ ಶಿಬಿರಕ್ಕೆ ಕೈಜೋಡಿಸಿ



**ಚಿಕ್ಕಬಳ್ಳಾಪುರ:** ಶಿಕ್ಷಣ ತಜ್ಞ, ಮಾಜಿ ಶಾಸಕ ಹಾಗೂ ಕೆ.ವಿ. ಮತ್ತು ಪಂಚಗಿರಿ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷ ದಿವಂಗತ ಸಿ.ವಿ. ವೆಂಕಟರಾಯಪ್ಪ ಅವರ 111ನೇ ಜಯಂತಿ ಹಾಗೂ 30ನೇ ದತ್ತಿ ದಿನಾಚರಣೆ ಅಂಗವಾಗಿ ಬುಧವಾರ ಚಿಕ್ಕಬಳ್ಳಾಪುರ ನಗರದ ವಿವಿಧ ಭಾಗಗಳಲ್ಲಿ ಬೃಹತ್ ಅನ್ನಸಂತರ್ಪಣೆ ಕಾರ್ಯಕ್ರಮ ನಡೆಯಿತು.ದಿವಂಗತ ಸಿ.ವಿ. ವೆಂಕಟರಾಯಪ್ಪ ಅವರ ಶಿಕ್ಷಣ ಸೇವೆ ಹಾಗೂ ಮಾನವೀಯ ಮೌಲ್ಯಗಳನ್ನು ಸ್ಮರಿಸುವ ಉದ್ದೇಶದಿಂದ ನಗರದ ಪ್ರಮುಖ ವೃತ್ತಗಳು ಹಾಗೂ ಜನನಿಬಿಡ ಪ್ರದೇಶಗಳಲ್ಲಿ ಅನ್ನದಾನ ಏರ್ಪಡಿಸಲಾಗಿತ್ತು. ಕೆ.ವಿ. ಮತ್ತು ಪಂಚಗಿರಿ ದತ್ತಿಯ ಅಧ್ಯಕ್ಷ ಕೆ.ವಿ. ನವೀನ್ ಕಿರಣ್ ಅವರು ಎಲ್ಲ ಅನ್ನದಾನ ಕೇಂದ್ರಗಳಿಗೆ ಭೇಟಿ ನೀಡಿ ಕಾರ್ಯಕ್ರಮದ ವ್ಯವಸ್ಥೆ ಪರಿಶೀಲಿಸಿದರು. ಬೆಳಿಗ್ಗೆ ಆಮಂತ್ರಣ ಹೋಟೆಲ್‌ನಿಂದ ಆರಂಭವಾದ ಅನ್ನಸಂತರ್ಪಣೆ ಟೌನ್ ಹಾಲ್ ಸರ್ಕಲ್,ಹೂವಿನ ಮಾರುಕಟ್ಟೆ, ಬಿಇಒ ಕಚೇರಿ ವೃತ್ತ, ಮಂಚೇನಹಳ್ಳಿ ಬಸ್ ನಿಲ್ದಾಣ, ಬಲಮುರಿ ಸರ್ಕಲ್,ಅಭಿಷೇಕ್ ಹೋಟೆಲ್,ಖಾಸಗಿ ಬಸ್ ನಿಲ್ದಾಣ, ನಂದಿ ಹಾಗೂ ಪೆರೇಸಂದ್ರ ಸೇರಿದಂತೆ ವಿವಿಧ ಸ್ಥಳಗಳಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಮಾತನಾಡಿದ ಕೆ.ವಿ. ನವೀನ್ ಕಿರಣ್,ಯಾವೊಬ್ಬ ವ್ಯಕ್ತಿಯೂ ಹೊಟ್ಟೆ ಹಸಿದೇ ಉಳಿಯಬಾರದು,ಎಲ್ಲರಿಗೂ ಹೊಟ್ಟೆ ತುಂಬ ಊಟ ಸಿಗಬೇಕು ಎಂಬುದು ಸಿ.ವಿ. ವೆಂಕಟರಾಯಪ್ಪ ಅವರ ಕನಸಾಗಿತ್ತು.ಆ ಕನಸಿನ ಸಾಕಾರ ರೂಪವೇ ಈ ಅನ್ನಸಂತರ್ಪಣೆ ಕಾರ್ಯಕ್ರಮ ಎಂದು ಹೇಳಿದರು. ಅಲ್ಲದೆ,ಜುಲೈ 23ರಂದು ನಡೆಯಲಿರುವ ಬೃಹತ್ ರಕ್ತದಾನ ಶಿಬಿರದಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು.ನೀವು ನೀಡುವ ಒಂದು ಯೂನಿಟ್ ರಕ್ತ ಅಮೂಲ್ಯವಾದ ಜೀವವನ್ನು ಉಳಿಸುವ ಶಕ್ತಿಯನ್ನು ಹೊಂದಿದೆ. ಆದ್ದರಿಂದ ಪ್ರತಿಯೊಬ್ಬರೂ ರಕ್ತದಾನ ಮಾಡಿ,ಇತರರನ್ನೂ ಕರೆತಂದು ಈ ಸೇವಾಕಾರ್ಯಕ್ಕೆ ಕೈಜೋಡಿಸಬೇಕು ಎಂದು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಪಿ.ಪಿ.ಎಚ್.ಎಸ್. ಹೆಚ್.ಎಂ. ನಾರಾಯಣಸ್ವಾಮಿ,ಗುಂಪುಮರದ ಆನಂದ್,ಅನು ಆನಂದ್,ಉದ್ಯಮಿ ಮಹೇಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಬೆಳೆ ಸಾಲ ಪಡೆದ ರೈತರಿಗೆ ಶೇ.100ರಷ್ಟು ಬೆಳೆ ವಿಮೆ ನೋಂದಣಿ ಮಾಡಿಸಿ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**

ಜಿಲ್ಲೆಯಲ್ಲಿ ಪ್ರಸಕ್ತ 2026–27ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಬೆಳೆ ಸಾಲ ಪಡೆದಂತಹ ಎಲ್ಲಾ ರೈತರನ್ನು ಕಡ್ಡಾಯವಾಗಿ ಕರ್ನಾಟಕ ರೈತ ಸುರಕ್ಷಾ ಫ್ರದಾನಮಂತ್ರಿ ಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯಡಿ ಹೆಸರು ನೊಂದಣಿ ಮಾಡುವಂತೆ ಬ್ಯಾಂಕರ್ಸ್, ಪ್ಯಾಕ್ಸ್ ಸಂಸ್ಥೆಯ ಮುಖ್ಯಸ್ಥರಿಗೆ ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಕೃತ ಬ್ಯಾಂಕ್, ಖಾಸಗಿ ಬ್ಯಾಂಕ್, ಡಿ.ಸಿ.ಸಿ. ಬ್ಯಾಂಕ್ ಸೇರಿದಂತೆ ಕೃಷಿ ಪತ್ತಿನ ಸಹಕಾರ ಸಂಘಗಳ ಮುಖ್ಯಸ್ಥರೊಂದಿಗೆ ಸಭೆ ನಡೆಸಿದ ಅವರು, ಪ್ರಸಕ್ತ 2026–27ನೇ ಸಾಲಿನಲ್ಲಿ 1.93 ಲಕ್ಷ ರೈತರು ಸಾಲ ಪಡೆದಿದ್ದು, ಇದರಲ್ಲಿ ಫ್ರದಾನಮಂತ್ರಿ ಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯಡಿ ಹೆಸರು ನೊಂದಾಯಿಸಿದ್ದವರು ಕೇವಲ 9,980 ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸುತ್ತಾ ಆಯಾ ಬ್ಯಾಂಕ್‌ಗಳಿಗೆ ನೀಡಿದ ಗುರಿಯಂತೆ ಮುಂದಿನ ಒಂದು ವಾರದೊಳಗೆ ರೈತರಿಂದ ಬೆಳೆ ವಿಮೆ ನೋಂದಣಿ ಮಾಡಿಸಬೇಕೆಂದು ಸೂಚಿಸಿದರು.

ರೈತರಿಗೆ ಕಷ್ಟದ ಕಾಲದಲ್ಲಿ ನೆರವಾಗಬೇಕೆಂದು ಸರ್ಕಾರ ಬೆಳೆ ವಿಮೆ ಯೋಜನೆ ಜಾರಿಗೆ ತಂದಿದೆ. ಯಾವುದೇ ಅರ್ಹ ರೈತರು ಈ ಯೋಜನೆಯಿಂದ ವಂಚಿತರಾಗದಂತೆ ಬ್ಯಾಂಕ್‌ಗಳು, ಪ್ಯಾಕ್ಸ್ ಸಂಸ್ಥೆ ಹಾಗೂ ಸಂಬಂಧಿಸಿದ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದರು.



ಜಿಲ್ಲೆಯಲ್ಲಿ 1.93 ಲಕ್ಷ ರೈತರಿಗೆ ಕಿಸಾನ್ ಕ್ರೆಡಿಟ್ ಕಾರ್ಡ್ ನೀಡಿ 3,260 ಕೋಟಿ ರೂ. ಬೆಳೆ ಸಾಲ ನೀಡಲಾಗಿದೆ. ಸಾಲ ಪಡೆದ ರೈತರು ಬೆಳೆ ವಿಮೆ ಮಾಡಿಸದೆ ಹೋದಲ್ಲಿ ಪ್ರಕೃತಿ ವಿಕೋಪ ಸೇರಿದಂತೆ ಇನ್ನಿತರ ಕಾರಣದಿಂದ ಬೆಳೆ ಹಾನಿಯಾದಲ್ಲಿ ರೈತ ಸಂಕಷ್ಟ ಎದುರಿಸಬೇಕಾಗುತ್ತದೆ. ಬ್ಯಾಂಕ್ ಅಥವಾ ಸಂಸ್ಥೆ ವ್ಯವಸ್ಥಾಪಕರು ಬೆಳೆ ವಿಮೆ ಕಂತನ್ನು ರೈತರ ಪರವಾಗಿ ವಿಮಾ ಸಂಸ್ಥೆಗೆ ತುಂಬದಿದ್ದಲ್ಲಿ ಬೆಳೆ ಹಾಳಾದಾಗ ವಿಮೆ ಪರಿಹಾರದ ಮೊತ್ತವನ್ನು ಹಾನಿಗೊಂಡ ರೈತರಿಗೆ ನೀಡುವುದು ಸಾಲ ನೀಡಿದ ಸಂಸ್ಥೆಯ ಜವಬ್ದಾರಿಯಾಗಿರುತ್ತದೆ ಎಂದು ಬ್ಯಾಂಕರ್ಸ್ ಗಳಿಗೆ ಎಚ್ಚರಿಕೆ ನೀಡಿದರು.

**ಬ್ಯಾಂಕ್‌ಗಳಿಗೆ ಗುರಿ:** ಜಿಲ್ಲೆಯ ಬ್ಯಾಂಕ್ ಆಫ್ ಬರೋಡಾ ಅವರಿಗೆ 850, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಸಂಸ್ಥೆಗೆ 1,000, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸಂಸ್ಥೆಗೆ 12,000, ಕರ್ನಾಟಕ ಗ್ರಾಮೀಣ ಬ್ಯಾಂಕ್ ನವರಿಗೆ 37,000, ಡಿ.ಸಿ.ಸಿ ಬ್ಯಾಂಕ ನವರಿಗೆ 80,000 ಹಾಗೂ ಪ್ಯಾಕ್ಸ್ ಸಂಸ್ಥೆಗಳಿಗೆ 30,000 ರೈತರನ್ನು ಬೆಳೆ ವಿಮೆ ಯೋಜನೆಯಡಿ ಹೆಸರು ನೋಮದಾಯಿಸಲು ಗುರಿ ನಿಗದಿ ಮಾಡಿದ್ದು, ಕಾಲಮಿತಿಯಲ್ಲಿ ನೊಂದಣಿ ಮಾಡಿ ಶೇ.100ರಷ್ಟು ಪ್ರಗತಿ ಸಾಧಿಸುವಂತೆ ಬ್ಯಾಂಕ್ ಅಧಿಕಾರಿಗಳಿಗೆ ಡಿ.ಸಿ. ಸೂಚಿಸಿದರು.

ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್ ಮಾತನಾಡಿ, ಕಿಸಾನ್ ಕ್ರೆಡಿಟ್ ಕಾರ್ಡ್ ಪಡೆದ ಜಿಲ್ಲೆಯ ಎಲ್ಲಾ ರೈತರನ್ನು 2026–27ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಬೆಳೆ ವಿಮೆ ನೊಂದಣಿ ಮಾಡಿಸುವಂತೆ ತಿಳಿಸಿದಲ್ಲದೆ ಯೋಜನೆಯ ಅನುಷ್ಠಾನ, ನೋಂದಣಿ ಪ್ರಕ್ರಿಯೆ, ಗಡುವು ಹಾಗೂ ರೈತರಿಗೆ ದೊರೆಯುವ ಪ್ರಯೋಜನಗಳ ಕುರಿತು ವಿವರವಾದ ಮಾಹಿತಿ ನೀಡಿದರು.

ಸಭೆಯಲ್ಲಿ ಸಹಕಾರ ಸಂಘಗಳ ಉಪನಿಬಂಧಕ ಕಿಶೋರ, ಜಿಲ್ಲಾ ಲೀಡ್ ಬ್ಯಾಂಕ್ ಮುಖ್ಯ ವ್ಯವಸ್ಥಾಪಕ ಅಂಬ್ರೀಶ್ ತೆಗನೂರ ಸೇರಿದಂತೆ ಜಿಲ್ಲೆಯ ವಿವಿಧ ರಾಷ್ಟ್ರೀಕೃತ, ಖಾಸಗಿ ಬ್ಯಾಂಕ್ಗಳ ಜಿಲ್ಲಾ ವ್ಯವಸ್ಥಾಪಕರು, ಪ್ಯಾಕ್ಸ್ ಸಂಸ್ಥೆಯ ಪ್ರತಿನಿಧಿಗಳು ಉಪಸ್ಥಿತರಿದ್ದರು.

# ಹೋಮಿಯೋಪಥಿಕ್ ಕಾಲೇಜಿನಲ್ಲಿ ವೈವಿಧ್ಯದಲ್ಲಿ ಏಕತೆ ಪ್ರದರ್ಶನ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**

ನಗರದ ಬಿ.ವಿ.ವಿ.ಎಸ್. ಹೋಮಿಯೋಪಥಿಕ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಆಸ್ಪತ್ರೆಯಲ್ಲಿ ವಿದ್ಯಾರ್ಥಿಗಳಲ್ಲಿ ಸಾಂಸ್ಕೃತಿಕ ಜಾಗೃತಿ ಮತ್ತು ರಾಷ್ಟ್ರೀಯ ಏಕತೆಯ ಮನೋಭಾವ ಬೆಳೆಸುವ ಉದ್ದೇಶದಿಂದ "ವೈವಿಧ್ಯದಲ್ಲಿ ಏಕತೆ" ಎಂಬ ಶೀರ್ಷಿಕೆಯಡಿ ಭಾರತದ ವಿವಿಧ ರಾಜ್ಯಗಳ ಸಾಂಪ್ರದಾಯಿಕ ಉಡುಪುಗಳ ಪ್ರದರ್ಶನವನ್ನು ಆಯೋಜಿಸಲಾಯಿತು.

ಕಾರ್ಯಕ್ರಮವನ್ನು ಮಹಾವಿದ್ಯಾಲಯದ ಸಾಂಸ್ಕೃತಿಕ ಸಂಯೋಜಕಿ ಡಾ. ತೃಪ್ತಿ ಶಿಂದೆ ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡಿ, ಭಾರತದ ಪ್ರತಿಯೊಂದು ರಾಜ್ಯದ ಉಡುಪಿನಲ್ಲಿ ರಾಜ್ಯದ ಸಂಸ್ಕೃತಿ, ಹವಾಮಾನ ಹಾಗೂ ಕಲೆಯ ಪ್ರತಿಬಿಂಬ ಅಡಗಿದೆ. ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ದೇಶದ ವೈವಿಧ್ಯತೆ ಕುರಿತು ಗೌರವ ಮತ್ತು ಅರಿವು ಮೂಡಿಸುತ್ತವೆ ಎಂದು ಹೇಳಿದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ. ಅರುಣ ಹೂಲಿ ಮಾತನಾಡಿ, ವೈದ್ಯಕೀಯ ವಿದ್ಯಾರ್ಥಿಗಳು ರೋಗಿಯ ಚಿಕಿತ್ಸೆ ವೇಳೆ ಜಾತಿ, ಧರ್ಮ, ಭಾಷೆ ಅಥವಾ ರಾಜ್ಯವನ್ನು ನೋಡದೇ ಪ್ರತಿಯೊಬ್ಬ ರೋಗಿಯೂ ನಮಗೆ ಸಮಾನ. ಅದೇ ರೀತಿ ಉಡುಪುಗಳು ವಿಭಿನ್ನವಾಗಿದ್ದರೂ ನಾವೆಲ್ಲರೂ ಭಾರತೀಯರು. ನಮ್ಮೆಲ್ಲರ ರಕ್ತದ ಬಣ್ಣ ಒಂದೇ ಎಂಬ ಸಂದೇಶವನ್ನು ಈ ಕಾರ್ಯಕ್ರಮ ನೀಡುತ್ತದೆ ಎಂದು ಹೇಳಿದರು.

ಪ್ರದರ್ಶನದಲ್ಲಿ ಕಾಲೇಜಿನ 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾರತದ 20ಕ್ಕೂ ಹೆಚ್ಚು ರಾಜ್ಯಗಳ ಸಾಂಪ್ರದಾಯಿಕ ಉಡುಪುಗಳನ್ನು ಧರಿಸಿ ಭಾಗವಹಿಸಿ ವೈವಿಧ್ಯಮಯ ಸಾಂಸ್ಕೃತಿಕ ಪರಂಪರೆಯನ್ನು ಅನಾವರಣಗೊಳಿಸಿದರು. ವೈದ್ಯ ವಿದ್ಯಾರ್ಥಿನಿ ಅಪೂರ್ವಾ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ಸಂಜಯ ಸಾವಂತ ಸ್ವಾಗತಿಸಿದರು. ನಿಕುಂಜ ವಂದಿಸಿದರು. ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕರಾದ ಡಾ. ರವಿ ಕೋಟೆಣ್ಣವರ, ಡಾ. ಸುಧೀರ ಬೆಟಗೇರಿ, ಡಾ. ಫಾತಿಮಾ ಬಾಲಸಿಂಗ, ಡಾ. ಅಖಿಲಾ ಹುಲ್ಲೂರ, ಡಾ. ಪ್ರದೀಪ, ಡಾ. ಜಯಲಕ್ಷ್ಮಿ, ಡಾ. ದೀಪಕ, ಡಾ. ಲಕ್ಷ್ಮಿ, ಡಾ. ಮಂಜುನಾಥ ಪಾಟೀಲ ಹಾಗೂ ಡಾ. ಪವನ ಟಾವನಿ ಉಪಸ್ಥಿತರಿದ್ದರು.

ಕಾರ್ಯಕ್ರಮದ ಯಶಸ್ವಿ ಆಯೋಜನೆಯಲ್ಲಿ ವೈದ್ಯಕೀಯ ವಿದ್ಯಾರ್ಥಿಗಳಾದ ಐಶ್ವರ್ಯ, ಸಮರ್ಥ, ಅಭಿಷೇಕ, ತನ್ವಿ, ರಾಕೇಶ ಗೌಡ, ಮಂಜುನಾಥ, ಅಂಜನಾ ಹಾಗೂ ರೂಪಾ ಪ್ರಮುಖ ಪಾತ್ರವಹಿಸಿದ್ದರು.

# ಅನುಷ್ಠಾನಕ್ಕೆ ಬಂದ ಭಾರತ–ಯುಕೆ ಮುಕ್ತ ವ್ಯಾಪಾರ ಒಪ್ಪಂದ

• **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು**

ಭಾರತ ಮತ್ತು ಯುನೈಟೆಡ್ ಕಿಂಗ್‌ಡಮ್ ನಡುವಿನ ಮುಕ್ತ ವ್ಯಾಪಾರ ಒಪ್ಪಂದ ಬುಧವಾರದಿಂದ ಅನುಷ್ಠಾನಕ್ಕೆ ಬಂದಿದೆ. ಇದರಿಂದ ರಾಜ್ಯದ ಜೈವಿಕ ತಂತ್ರಜ್ಞಾನ, ಫಾರ್ಮಸುಟಿಕಲ್ಸ್, ಜವಳಿ ಮತ್ತು ಗಾರ್ಮೆಂಟ್ಸ್, ಸಮುದ್ರ ಉತ್ಪನ್ನಗಳು, ಎಂಜಿನಿಯರಿಂಗ್ ಉತ್ಪನ್ನಗಳು ಮತ್ತು ಮಷಿನರಿ, ಚಿಕ್ಕಮಗಳೂರು ಮತ್ತು ಕೊಡಗಿನ ಉತ್ಕೃಷ್ಟ ಕಾಫಿ ಹಾಗೂ ಸಾಂಬಾರ ಪದಾರ್ಥಗಳ ವಲಯಕ್ಕೆ ಭಾರೀ ಲಾಭವಾಗಲಿದೆ. ಉದ್ಯಮಿಗಳು ಈ ಸದವಕಾಶವನ್ನು ಸರಿಯಾಗಿ ಉಪಯೋಗಿಸಿಕೊಂಡು, ರಾಜ್ಯದ ಕೈಗಾರಿಕಾ ಬೆಳವಣಿಗೆಗೆ ಹೆಗಲು ಕೊಡಬೇಕು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲ ಹೇಳಿದ್ದಾರೆ.




ಭಾರತ–ಯು.ಕೆ. ನಡುವಿನ ಈ ಚಾರಿತ್ರಿಕ ಒಪ್ಪಂದವು ಕಳೆದ ವರ್ಷದ ಜುಲೈ 25ರಂದು ಅಖೈರಾಗಿತ್ತು. ಒಪ್ಪಂದ ಜಾರಿಯಾಗುತ್ತಿರುವ ಹಿನ್ನೆಲೆಯಲ್ಲಿ ಇಲ್ಲಿ ಉದ್ದಿಮೆದಾರರಿಗೆ ಏರ್ಪಡಿಸಿದ್ದ ಸಂತೋಷ ಕೂಟದಲ್ಲಿ ಅವರು ಮಾತನಾಡಿದರು.

ಈ ಒಪ್ಪಂದದಿಂದಾಗಿ ಭಾರತದ ಶೇ.99ರಷ್ಟು ಉತ್ಪನ್ನಗಳು ಸುಂಕರಹಿತವಾಗಿ ಬ್ರಿಟನ್ ಮಾರುಕಟ್ಟೆ ಪ್ರವೇಶಿಸಲಿವೆ ರಾಜ್ಯವು ಮುಂಚೂಣಿಯಲ್ಲಿರುವ ಎಲ್ಲಾ ವಲಯಗಳೂ ಈ ಒಪ್ಪಂದದ ವ್ಯಾಪ್ತಿಯಲ್ಲಿವೆ. ಆದ್ದರಿಂದ ನಾವು ಯುನೈಟೆಡ್ ಕಿಂಗ್ಡಮ್ ನ ವಿಶ್ವವಿದ್ಯಾಲಯಗಳು ಮತ್ತು ನಮ್ಮಲ್ಲಿನ ಉದ್ಯಮಗಳ ನಡುವೆ ಹೆಚ್ಚು ಹೆಚ್ಚು ಸಹಭಾಗಿತ್ವಕ್ಕೆಮುಂದಾಗಲಿದ್ದೇವೆ. ಇದರಿಂದ ಕೌಶಲ್ಯಾಭಿವೃದ್ಧಿ, ಸಂಶೋಧನೆ ಮತ್ತು ಜಂಟಿ ನಾವೀನ್ಯತೆಗೆ ಪ್ರೋತ್ಸಾಹ ಸಿಗಲಿದೆ. ಅಲ್ಲಿಂದ ನಮ್ಮಲ್ಲಿಗೆ ಬರುವ ಶೇ.90ರಷ್ಟು ಉತ್ಪನ್ನಗಳಿಗೂ ಯಾವುದೇ ಸುಂಕ ಇರುವುದಿಲ್ಲ ಎಂದು ಅವರು ಹೇಳಿದ್ದಾರೆ.

ಈ ಒಪ್ಪಂದದ ವ್ಯಾಪ್ತಿಯಲ್ಲಿ ಬರುವ ಮೋಡ್–1 ಸೇವೆಯಿಂದ ಬೆಂಗಳೂರು ಕೇಂದ್ರಿತ ಐಟಿ ಉದ್ಯಮಕ್ಕೆ ಭಾರೀ ಲಾಭ ಸಿಗಲಿದೆ. ಮುಂದಿನ ದಿನಗಳಲ್ಲಿ ಬ್ರಿಟನ್ನಿನ ಹಲವು ಕಂಪನಿಗಳು ಬೆಂಗಳೂರು ಮತ್ತು ಮೈಸೂರಿನಲ್ಲಿ ತಮ್ಮ ಜಿಸಿಸಿ ಕೇಂದ್ರಗಳನ್ನು ಸ್ಥಾಪಿಸಲಿವೆ. ಏರೋಸ್ಪೇಸ್ ವಲಯದಲ್ಲಿ ಬೆಂಗಳೂರು ನಗರದ ಜತೆಗೆ ಬೆಳಗಾವಿಗೆ ಪ್ರಯೋಜನವಾಗಲಿದೆ ಎಂದು ಅವರು ವಿವರಿಸಿದ್ದಾರೆ.

ಮುಕ್ತ ವ್ಯಾಪಾರ ಒಪ್ಪಂದದಿಂದ ನಮ್ಮ ಏರೋಸ್ಪೇಸ್ ಉತ್ಪನ್ನಗಳ ಮೇಲಿನ ಸುಂಕವು ಶೇ.11ರಿಂದ ಸೊನ್ನೆಗೆ, ಆಟೋಮೋಟಿವ್ ಮೇಲಿನ ಸುಂಕವು ಶೇ.110ರಿಂದ ಸೊನ್ನೆಗೆ, ಎಲೆಕ್ಟ್ರಿಕಲ್ ಮಷಿನರಿ ಮೇಲಿನ ಸುಂಕ ಶೇ.22ರಿಂದ ಸೊನ್ನೆಗೆ ಮತ್ತು ವೈದ್ಯಕೀಯ ಉಪಕರಣಗಳ ಮೇಲಿನ ಸುಂಕವು ಶೇ.13.75ರಿಂದ ಸೊನ್ನೆಗೆ ಇಳಿಯಲಿದೆ. ಇನ್ನು ಕೆಲವು ಉತ್ಪನ್ನಗಳ ಮೇಲಿನ ಸುಂಕವು 5–6 ವರ್ಷಗಳಲ್ಲಿ ಸೊನ್ನೆಗೆ ಬರಲಿದೆ ಎಂದು ಅವರು ವಿವರಿಸಿದ್ದಾರೆ.

ಇದಲ್ಲದೆ ಎಣ್ಣೆಬೀಜಗಳು, ಕಾಳುಮೆಣಸು, ಏಲಕ್ಕಿ, ಬ್ಯಾಡಗಿ ಮತ್ತು ದೇವನೂರು ಮೆಣಸಿನಕಾಯಿ ಮುಂತಾದ ಸಾಂಬಾರ ಪದಾರ್ಥಗಳು, ಸಿರಿಧಾನ್ಯಗಳು, ಹೂವು, ಹಣ್ಣು, ತರಕಾರಿ, ಮೀನು, ತೆಂಗು, ಮಾವು, ನಿಂಬೆ, ಮಲ್ಲಿಗೆ, ಚೆಂಡುಹೂವು, ಕೊಡಗು ಮತ್ತು ಚಿಕ್ಕಮಗಳೂರಿನ ಉತ್ಕೃಷ್ಟ ಕಾಫಿ, ಹಾಸನ, ಬೀದರ್ ಮತ್ತು ಬೆಂಗಳೂರು ನಗರ ಜಿಲ್ಲೆಗಳಲ್ಲಿ ತಯಾರಾಗುವ ಸಂಸ್ಕರಿತ ಕೃಷಿ ಮತ್ತು ಆಹಾರ ಉತ್ಪನ್ನಗಳ ರಫ್ತಿಗೆ ಇನ್ನು ಮುಂದೆ ಬ್ರಿಟನ್ ಮಾರುಕಟ್ಟೆಯಲ್ಲಿ ಸುಂಕದ ಹೊರೆ ಇರುವುದಿಲ್ಲ ಎಂದು ಅವರು ನುಡಿದಿದ್ದಾರೆ.

ಸಣ್ಣ ಕೈಗಾರಿಕೆಗಳಿಗೂ ಈ ಒಪ್ಪಂದದಿಂದ ಲಾಭವಾಗಲಿದೆ. ಈ ನಿಟ್ಟಿನಲ್ಲಿ ನಮ್ಮ ರಾಜ್ಯದ ಕಾಫಿ ಬೆಳೆಗಾರರು, ಗಾರ್ಮೆಂಟ್ಸ್ ಮಾಲೀಕರು, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ರಫ್ತುದಾರರಿಗೆ ಹೆಚ್ಚಿನ ತಿಳಿವಳಿಕೆ ಮೂಡಿಸಲು ಜಾಗೃತಿ ಕಾರ್ಯಕ್ರಮ ನಡೆಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ರಾಜ್ಯವು ಏರೋಸ್ಪೇಸ್, ರಕ್ಷಣೆ, ಆಧುನಿಕ ತಯಾರಿಕೆ, ವಿದ್ಯುತ್ ಚಾಲಿತ ವಾಹನಗಳ ಕ್ಷೇತ್ರ, ಶುದ್ಧ ಇಂಧನ, ಸೆಮಿಕಂಡಕ್ಟರ್, ಡೀಪ್–ಟೆಕ್ ಮತ್ತು ಜಿಸಿಸಿ ಕ್ಷೇತ್ರಗಳಲ್ಲೂ ಬ್ರಿಟನ್ ಜತೆ ಸಹಭಾಗಿತ್ವದ ಉಪಕ್ರಮಗಳನ್ನು ತೆಗೆದುಕೊಳ್ಳಲಿದೆ. ಬ್ರಿಟನ್ನಿನ ಹೂಡಿಕೆದಾರರನ್ನು ಸೆಳೆಯಲು ಅಲ್ಲಿಗೆ ಹೋಗಿ ರೋಡ್ ಶೋಗಳನ್ನು ನಡೆಸಲಾಗುವುದು ಎಂದು ಪಾಟೀಲ ವಿವರಿಸಿದ್ದಾರೆ.

ಬೆಂಗಳೂರಿನಲ್ಲಿ ಈಗಾಗಲೇ ಬ್ರಿಟನ್ ಮೂಲದ ರೋಲ್ಸ್ ರಾಯ್ಸ್, ಬಿಎಇ ಸಿಸ್ಟಮ್ಸ್, ಟೆಸ್ಕೊ, ಎ ಆರ್ ಎಂ ಮುಂತಾದ ಕಂಪನಿಗಳು ನೆಲೆಯೂರಿವೆ. ಇವುಗಳಲ್ಲಿ 30 ಸಾವಿರಕ್ಕೂ ಹೆಚ್ಚು ಜನ ಉದ್ಯೋಗಿಗಳಿದ್ದಾರೆ. ಟೆಸ್ಕೊ ಕಂಪನಿಯು ತನ್ನ ಹೊಸ ವಿಸ್ತರಣಾ ಕೇಂದ್ರವನ್ನು ತೆರೆಯುತ್ತಿದ್ದು, ಅಲ್ಲಿ 15 ಸಾವಿರ ಉದ್ಯೋಗಗಳು ಸೃಷ್ಟಿಯಾಗಲಿವೆ. ರೋಲ್ಸ್ ರಾಯ್ಸ್ ಕೂಡ ರಾಜ್ಯದಲ್ಲಿ ಬಂಡವಾಳ ಹೂಡಲು ಉತ್ಸುಕವಾಗಿದೆ. ಈಗಿನ ಮುಕ್ತ ವ್ಯಾಪಾರ ಒಪ್ಪಂದವು ಇವುಗಳಿಗೆ ವೇಗವರ್ಧಕವಾಗಿ ಕೆಲಸ ಮಾಡಲಿದೆ ಎಂದು ಅವರು ಪ್ರತಿಪಾದಿಸಿದ್ದಾರೆ.

ಬೆಂಗಳೂರಿನಲ್ಲಿರುವ ಬ್ರಿಟಿಷ್ ಡೆಪ್ಯುಟಿ ಹೈಕಮಿಷನರ್ ಚಂದ್ರು ಅಯ್ಯರ್ ಮಾತನಾಡಿ, ಬ್ರಿಟನ್ನಿನ ಲಿವರ್‌ಪೂಲ್, ಲ್ಯಾಂಕಾಸ್ಟರ್, ಬರ್ಕ್ ಬೆಕ್, ಇಂಪೀರಿಯಲ್ ಕಾಲೇಜು ವಿ.ವಿ.ಗಳು ರಾಜ್ಯದಲ್ಲಿ ತಮ್ಮ ಕ್ಯಾಂಪಸ್ ಆರಂಭಿಸಲಿವೆ. ಜತೆಗೆ ಕಿಂಗ್ಸ್ ಕ್ಯಾಂಟರಬರಿ ಮತ್ತು ಆರ್.ಜಿ.ಎಸ್ ಗಿಲ್ಡ್ ಫೋರ್ಡ್ ಶಾಲೆಗಳು ಕೂಡ ಇಲ್ಲಿ ಆರಂಭವಾಗಲಿವೆ ಎಂದು ಹೇಳಿದ್ದಾರೆ.

ಬೆಂಗಳೂರು ಮತ್ತು ಲಂಡನ್ ನಡುವೆ ಈಗ ವಾರದಲ್ಲಿ 34 ನೇರ ವಿಮಾನಸೇವೆ ಇದೆ. ಮುಂಬರುವ ದಿನಗಳಲ್ಲಿ ಇದು ಇನ್ನಷ್ಟು ಹೆಚ್ಚಾಗಲಿದೆ ಎಂದು ನುಡಿದರು.

ಈ ಒಡಂಬಡಿಕೆಯಿಂದ ಭಾರತ ಮತ್ತು ಯು.ಕೆ. ನಡುವಿನ ವ್ಯಾಪಾರ ವಹಿವಾಟು ಪ್ರತೀ ವರ್ಷವೂ 25 ಬಿಲಿಯನ್ ಪೌಂಡ್ ಹೆಚ್ಚಳವಾಗಲಿದ್ದು, 2030ರ ಹೊತ್ತಿಗೆ 100 ಬಿಲಿಯನ್ ಪೌಂಡ್ ಮಟ್ಟಕ್ಕೆ ಬೆಳೆಯಲಿದೆ ಎಂದು ಅಯ್ಯರ್ ತಿಳಿಸಿದ್ದಾರೆ.

ಇದಕ್ಕೂ ಮೊದಲು ಅಯ್ಯರ್ ಅವರು ನಗರದ ವೈಟ್ ಫೀಲ್ಡ್ ನಲ್ಲಿರುವ ಇನ್–ಲ್ಯಾಂಡ್ ಕಂಟೇನರ್ ಡಿಪೋದಿಂದ ಬ್ರಿಟನ್ನಿಗೆ ಹೊರಟ ಜಿಂದಾಲ್ ಕಂಪನಿಯ ಅಲ್ಯುಮಿನಿಯಂ ಮತ್ತು ಎಲೆಕ್ಟ್ರಾನಿಕ್ ಉತ್ಪನ್ನಗಳ ನಿರ್ಯಾತಕ್ಕೆ ಹಸಿರು ನಿಶಾನೆ ತೋರಿದರು. ಈ ಸಂದರ್ಭದಲ್ಲಿ ವಿದೇಶಾಂಗ ವಾಣಿಜ್ಯ ವ್ಯವಹಾರಗಳ ಜಂಟಿ ಮಹಾನಿರ್ದೇಶಕಿ ಡೋನಾ ಘೋಷ್ ಮತ್ತು ಕಸ್ಟಮ್ಸ್ ಇಲಾಖೆಯ ಆಯುಕ್ತೆ ಸುಚೇತಾ ಶ್ರೀಜೇಶ್ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ರಾಜ್ಯ ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತೆ ಖುಷ್ಬೂ ಗೋಯೆಲ್ ಚೌಧರಿ ಮುಂತಾದವರು ಉಪಸ್ಥಿತರಿದ್ದರು.

## ಎಸ್ಐಆರ್ ಸಮೀಕ್ಷೆ: ಮನೆ ಮನೆಗೆ ತೆರಳಿ ಅರ್ಜಿ ವಿತರಣೆ



**ಬೀದರ್:** ಕರ್ನಾಟಕ ರಾಜ್ಯ ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘ (ರಿ), ಬೀದರ ಜಿಲ್ಲಾ ಘಟಕದ ವತಿಯಿಂದ ಎಸ್ಐಆರ್ (ವಿಶೇಷ ಸಮಗ್ರ ಪರಿಷ್ಕರಣೆ) ಸಮೀಕ್ಷೆಯ ಅಂಗವಾಗಿ ಮನೆ ಮನೆಗೆ ತೆರಳಿ ಎಸ್ಐಆರ್ ಅರ್ಜಿಗಳನ್ನು ವಿತರಿಸುವ ಕಾರ್ಯ ನಡೆಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಅಧ್ಯಕ್ಷ ಪ್ರಕಾಶ ಚಿಕ್ಕಪೇಟಕರ್, ಎಸ್ಐಆರ್ ಸಮೀಕ್ಷೆಯ ಮೂಲಕ ಸರ್ಕಾರ ಉತ್ತಮ ಕಾರ್ಯ ಕೈಗೊಂಡಿದ್ದು, ಜಿಲ್ಲೆಯ ಎಲ್ಲಾ ಕೂಲಿ ಕಾರ್ಮಿಕರು ಹಾಗೂ ಮತದಾರರು ತಮ್ಮ ಎಸ್ಐಆರ್ ಅರ್ಜಿಗಳನ್ನು ಆದಷ್ಟು ಬೇಗ ಭರ್ತಿ ಮಾಡಿ ಸಂಬಂಧಿಸಿದ ಬಿ.ಎಲ್.ಒ. ಅವರಿಗೆ ಸಲ್ಲಿಸುವಂತೆ ಮನವಿ ಮಾಡಿದರು. ಚಿಕ್ಕಪೇಟ ನಾವದಗೇರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಗುರು ಕಮಲಾಕರ, ಎಸ್ಡಿಎಂಸಿ ಮಾಜಿ ಅಧ್ಯಕ್ಷ ಸುಧಾಕರ ದೊಡ್ಡೆ, ಕಾನೂನು ಸಲಹೆಗಾರ ರಾಮಚಂದ್ರ ಬೋಸ್ಲೆ, ಸಂಘದ ಜಿಲ್ಲಾ ಅಧ್ಯಕ್ಷ ಪ್ರಕಾಶ ಚಿಕ್ಕಪೇಟಕರ್, ಜಿಲ್ಲಾ ಉಪಾಧ್ಯಕ್ಷ ಧನರಾಜ ದೊಡ್ಡೆ, ಕುಪೇಂದ್ರ ಶಿಂಧೆ, ಬಸವರಾಜ ಶಿಂಧೆ, ಎಸ್ಡಿಎಂಸಿ ಅಧ್ಯಕ್ಷ ಅನೀಲಕುಮಾರ ಕ್ವಾಟೆನೂರ, ಬಿ.ಎಲ್.ಒ. ರೇಣುಕಾ ಹಾಗೂ ಸಂಘದ ಪದಾಧಿಕಾರಿಗಳ ಸಮ್ಮುಖದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಾಲಾಜಿ ಔರಾದಕರ್ ನೇತೃತ್ವದಲ್ಲಿ ಮನೆ ಮನೆಗೆ ತೆರಳಿ ಎಸ್ಐಆರ್ ಫಾರಂಗಳನ್ನು ವಿತರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಕಾರ್ಮಿಕ ಸಂಘದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

## ಮಹಿಳಾ ಘಟಕದ ನೂತನ ಪದಾಧಿಕಾರಿಗಳ ಆಯ್ಕೆ



**ಬೀಳಗಿ:** ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ಜಿಲ್ಲಾ ಮಹಿಳಾ ಶಾಖೆ ಬಾಗಲಕೋಟ ಇವರ ನೇತೃತ್ವದಲ್ಲಿ ಬೀಳಗಿ ತಾಲೂಕ ದಲಿತ ಸಂಘರ್ಷ ಸಮಿತಿಯ ನೂತನ ಮಹಿಳಾ ಘಟಕದ ಪದಾಧಿಕಾರಿಗಳ ಆಯ್ಕೆ ಸಭೆ ನಡೆಯಿತು.

ಹೌದು ಪಟ್ಟಣದ ಜೆ ಎಲ್ ಬಿ ಸಿ ಪ್ರವಾಸಿ ಮಂದಿರದಲ್ಲಿ ನಡೆದ ಸಭೆಯಲ್ಲಿ ತಾಲೂಕ ಮಹಿಳಾ ಸಂಚಾಲಿಕೆಯಾಗಿ ಜಯಶ್ರೀ ಹಲಗಣಿ, ತಾಲೂಕ ಸಂಘಟನಾ ಸಂಚಾಲಕರಾಗಿ ಕಸ್ತೂರಿ ಕೋಲಾರ, ಕಸ್ತೂರಿ ಜಾನಮಟ್ಟಿ, ಕೀರ್ತಿ ಚೌಹಾಣ, ಹಾಗೂ ತಾಲೂಕ ಖಜಾಂಚಿಯಾಗಿ ಯಮನವ್ವ ಸಿರಗನ್ನವರ ಇವರುಗಳನ್ನು ಆಯ್ಕೆ ಮಾಡಲಾಯಿತು. ಸಭೆಯಲ್ಲಿ ಜಿಲ್ಲಾ ಸಂಚಾಲಕರಾದ ಪರಶುರಾಮ್ ಕಾಂಬಳೆ, ಜಿಲ್ಲಾ ಸಂಘಟನಾ ಸಂಚಾಲಕರಾದ ಬಸವರಾಜ ಹಳ್ಳದಮನಿ, ರಮೇಶ ಅನಗವಾಡಿ, ಮಹಿಳಾ ಜಿಲ್ಲಾ ಸಂಚಾಲಕರಾದ ರೇಷ್ಮಾ ಬಿರಾದಾರ, ಅಲ್ಪಸಂಖ್ಯಾತರ ಜಿಲ್ಲಾ ಘಟಕದ ಸಂಚಾಲಕರಾದ ಕಾಶಿಂ ಗೋಟೆ, ನಗರ ಸಂಚಾಲಕರಾದ ಚಿನ್ನಪ್ಪ ಬಂಡಿವಡ್ಡರ, ತಾಲೂಕ ಸಂಚಾಲಕರಾದ ಪ್ರಕಾಶ ಕಾತರಕಿ, ಸೇರಿದಂತೆ ಸಮಿತಿ ಎಲ್ಲರೂ ಉಪಸ್ಥಿತರಿದ್ದರು.

## ಕಾಂಗ್ರೆಸ್ ಸರಕಾರದ ವಿರುದ್ಧ ಬೃಹತ್ ಪ್ರತಿಭಟನೆ: ವಿಜಯೇಂದ್ರ

**ಹಾವೇರಿ:** ಹಿಂದೂ ವಿರೋಧಿ ಕಾಂಗ್ರೆಸ್ ಸರಕಾರದ ವಿರುದ್ಧ ಇಂದು ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದ್ದೇವೆ ಎಂದು ಶಾಸಕ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ತಿಳಿಸಿದ್ದಾರೆ.

ಇಲ್ಲಿ ಇಂದು ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಎಸ್ಐಆರ್ ಸಂಬಂಧ ಕಲ್ಯಾಣ ಕರ್ನಾಟಕದಲ್ಲಿ ಪ್ರವಾಸ ಮಾಡಿದ್ದನ್ನು ವಿವರಿಸಿದರು. ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗಿನಿಂದ ಹಿಂದೂಗಳ ಮೇಲೆ ನಿರಂತರವಾಗಿ ದೌರ್ಜನ್ಯ ನಡೆಯುತ್ತಿದೆ. ಕೊಲೆಗಳಾಗುತ್ತಿವೆ. ರಾಜ್ಯ ಸರಕಾರದ ಅಲ್ಪಸಂಖ್ಯಾತರ ಓಲೈಕೆ ರಾಜಕಾರಣದಿಂದ ಮತೀಯ ಶಕ್ತಿಗಳಿಗೆ ಕರ್ನಾಟಕವು ಸ್ವರ್ಗದಂತಾಗಿದೆ. ಏನೇ ದೌರ್ಜನ್ಯ- ಕೊಲೆ ಮಾಡಿದರೂ ತಮ್ಮ ರಕ್ಷಣೆಗೆ ಕಾಂಗ್ರೆಸ್ ಸರಕಾರ ಬರುತ್ತದೆ ಎಂಬ ಧೈರ್ಯ ಮತೀಯ ಶಕ್ತಿಗಳಿಗೆ ಬಂದ ಪರಿಣಾಮವಾಗಿ ದಿನೇದಿನೇ ಇಂಥ ಪ್ರಕರಣಗಳು ಹೆಚ್ಚಾಗುತ್ತಿವೆ ಎಂದು ಆರೋಪಿಸಿದರು.

ಹಾವೇರಿಯಲ್ಲಿ ಹೋರಿ ಬೆದರಿಸುವ ಹಬ್ಬದಲ್ಲಿ ಪಟಾಕಿ ಸಿಡಿಸಿದರೆಂಬ ಕಾರಣಕ್ಕೆ ಲೋಹಿತ್ ಕುರುಬರ ಮತ್ತು ಅವರ ಮಿತ್ರರ ಮೇಲೆ ಮಾರಣಾಂತಿಕ ಹಲ್ಲೆ ಮಾಡಿದ್ದಾರೆ. ಕೈಯನ್ನೇ ಕಡಿದು ಹಾಕಿದ್ದಾರೆ ಎಂದು ಆಕ್ಷೇಪಿಸಿದರು. ರಟ್ಟೆಹಳ್ಳಿಯಲ್ಲಿ ಶಿವಾಜಿ ರಾವ್ ಅವರ ಬರ್ಬರ ಹತ್ಯೆ ಆಗಿದೆ ಎಂದು ವಿವರಿಸಿದರು. ಕೊಪ್ಪಳ, ಯಲ್ಲಾಪುರದಲ್ಲಿ ಇಂಥದ್ದೇ ಘಟನೆಗಳು ನಡೆದಿವೆ. ಸರಕಾರ ಸಂತ್ರಸ್ತರ ಮೇಲೆಯೇ ಕೇಸು ದಾಖಲಿಸುತ್ತಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.

**ಎಸ್.ಐ.ಆರ್ ಸವಾಲಾಗಿ ಸ್ವೀಕಾರ:** ಎಸ್.ಐ.ಆರ್ ಅನ್ನು ನಮ್ಮ ಎಲ್ಲ ಕಾರ್ಯಕರ್ತರು ಸವಾಲಾಗಿ ಸ್ವೀಕಾರ ಮಾಡಿದ್ದಾರೆ. ರಾಜ್ಯ ಸರಕಾರದ ಷಡ್ಯಂತ್ರ, ಕುತಂತ್ರದ ನಡುವೆಯೂ ನಮ್ಮ ಕಾರ್ಯಕರ್ತರು ಕಾರ್ಯಕರ್ತರು ಮತದಾರರ ಪಟ್ಟಿ ಪರಿಷ್ಕರಿಸುತ್ತಿದ್ದಾರೆ. ಇದರ ನಡುವೆ ಸರಕಾರವು ಅಕ್ರಮ ವಲಸಿಗರಿಗೆ ಶಾಶ್ವತ ನಿವಾಸಿ ಪ್ರಮಾಣಪತ್ರ ಕೊಡಲು ಮುಂದಾಗಿರುವುದು ಖಂಡನಾರ್ಹ ಎಂದರು.

**ರೈತರ ವಿಚಾರದಲ್ಲಿ ಅಸಡ್ಡೆ:** ಕಾಂಗ್ರೆಸ್ ಸರಕಾರಕ್ಕೆ ರೈತರ ಬಗ್ಗೆ ಅಸಡ್ಡೆ ಇದೆ. ಹೊಸಪೇಟೆ ತುಂಗಭದ್ರಾ ಡ್ಯಾಮಿನ ಕ್ರಸ್ಟ್‌ಗೇಟ್ ದುರಸ್ತಿ ಮಾಡಿಸಲು 24 ತಿಂಗಳು ಬೇಕಾಯಿತು ಎಂದು ಆಕ್ಷೇಪಿಸಿದರು. ಆದರೆ, ಮುಖ್ಯಮಂತ್ರಿ ಆದ ತಕ್ಷಣ ಬಿಡದಿಯಲ್ಲಿ ರೈತರ ಜಮೀನು ಕಸಿಯುವ ದುಸ್ಸಾಹಸಕ್ಕೆ ಕೈಹಾಕಿದ್ದಾರೆ ಎಂದು ಟೀಕಿಸಿದರು. ವಾಸ್ತವಿಕವಾಗಿ ರಾತ್ರೋರಾತ್ರಿ ಗೂಂಡಾಗಳು ಬಂದು ಬೆದರಿಕೆ ಹಾಕುತ್ತಿದ್ದಾರೆ. ಮತ್ತೊಂದು ಕಡೆ ಮುಖ್ಯಮಂತ್ರಿಗಳು ರೈತರು ಕೊಟ್ಟರೆ ಮಾತ್ರ ಜಮೀನು ತೆಗೆದುಕೊಳ್ಳುವುದಾಗಿ ಕಪಟ ನಾಟಕ ಮಾಡುತ್ತಿದ್ದಾರೆ ಎಂದು ದೂರಿದರು. ಮುಖ್ಯಮಂತ್ರಿಗಳು ಸಾವಿರಾರು ಎಕರೆ ಜಮೀನಿನ ಒಡೆಯರಿದ್ದಾರೆ. ಅವರ ಬಂಧು ಬಳಗದವರ ಜಮೀನೂ ಇದೆ ಎಂದ ಅವರು, ರೈತರನ್ನು ಒಕ್ಕಲೆಬ್ಬಿಸದಿರಿ ಎಂದು ಆಗ್ರಹಿಸಿದರು. ರೈತರ ಶಾಪಕ್ಕೆ ನಿಮ್ಮ ಸರಕಾರ ಬಲಿಯಾದೀತು ಎಂದು ಎಚ್ಚರಿಸಿದರು.

# ಅಕ್ರಮ ಶಸ್ತ್ರಾಸ್ತ್ರ ಜಾಲ ಭೇದಿಸಿದ ಪೊಲೀಸರು..!

• ಮಲ್ಲಮ್ಮ ನುಡಿ ವಾರ್ತೆ ಬೀದರ್



ಬೀದರ್ ಜಿಲ್ಲಾ ಪೊಲೀಸರು ಭರ್ಜರಿ ಕಾರ್ಯಾಚರಣೆ ನಡೆಸಿ ಅಕ್ರಮವಾಗಿ ಮಾರಾಟ ಮಾಡಲಾಗುತ್ತಿದ್ದ ಐದು ನಾಡ ಪಿಸ್ತೂಲ್, 26 ಜೀವಂತ ಮದ್ದುಗುಂಡುಗಳು, ಐದು ತಲ್ವಾರ್ ಸೇರಿದಂತೆ ಒಟ್ಟು ₹6.73 ಲಕ್ಷ ಮೌಲ್ಯದ ಶಸ್ತ್ರಾಸ್ತ್ರಗಳನ್ನು ಜಪ್ತಿ ಮಾಡಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದ್ದು, ಇನ್ನಿಬ್ಬರ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಅವರು ತಿಳಿಸಿದ್ದಾರೆ,

ಅವರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾಹಿತಿ ನೀಡಿದರು. ಬಂಧಿತ ಆರೋಪಿಗಳನ್ನು ಬೀದರ್ ಮೂಲದ ಅಮನ್‌ಜೀತ್ ಹಾಗೂ ವೆಂಕಟೇಶ್ ಎಂದು ಗುರುತಿಸಲಾಗಿದೆ. ಇವರು ಮಹಾರಾಷ್ಟ್ರದ ನಾಂದೇಡ್‌ನ ಕುಖ್ಯಾತ ವ್ಯಕ್ತಿಯೊಬ್ಬರಿಂದ ನಾಡ ಪಿಸ್ತೂಲ್ ಹಾಗೂ ತಲ್ವಾರ್‌ಗಳನ್ನು ತಂದು ಬೀದರ್‌ನಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಸಂಚು ರೂಪಿಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಬೀದರ ಸಬ್ ಅರ್ಬನ್ ಪೊಲೀಸ ಠಾಣೆ ವ್ಯಾಪ್ತಿಯ ಜ್ಞಾನಸುಧಾ ಶಾಲೆಯ ಹತ್ತಿರ ಹೊರವಲಯದ ರಿಂಗ್ ರೋಡ್ ಬಳಿ ಬೈಕ್‌ನಲ್ಲಿ ಶಸ್ತ್ರಾಸ್ತ್ರಗಳನ್ನು ತಂದು ಮಾರಾಟ ಮಾಡಲು ಯತ್ನಿಸುತ್ತಿದ್ದ ವೇಳೆ ಪೊಲೀಸರು ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ.

ಕಾರ್ಯಾಚರಣೆಯಲ್ಲಿ 3.5 ಲಕ್ಷಕ್ಕೂ ಹೆಚ್ಚು ಮೌಲ್ಯದ 5 ನಾಡ ಪಿಸ್ತೂಲ್, ₹2.60 ಲಕ್ಷ ಮೌಲ್ಯದ 26 ಜೀವಂತ ಮದ್ದುಗುಂಡುಗಳು, 10 ಖಾಲಿ ಗುಂಡುಗಳು ಹಾಗೂ ₹13 ಸಾವಿರ ಮೌಲ್ಯದ 5 ತಲ್ವಾರ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಪ್ರಾಥಮಿಕ ತನಿಖೆಯಲ್ಲಿ, ಕಪ್ಪು ಮಾರುಕಟ್ಟೆಯಲ್ಲಿ ಒಂದೊಂದು ನಾಡ ಪಿಸ್ತೂಲ್‌ನ್ನು ಸುಮಾರು ₹1 ಲಕ್ಷಕ್ಕೆ ಮಾರಾಟ ಮಾಡುವ ಯೋಜನೆ ರೂಪಿಸಿದ್ದ ಮಾಹಿತಿ ಬೆಳಕಿಗೆ ಬಂದಿದೆ, ಉಳಿದ ಆರೋಪಿಗಳ ಪತ್ತೆಗೆ ತನಿಖೆ ಮುಂದುವರೆದಿದೆ ಎಂದು ತಿಳಿಸಿದ್ದಾರೆ.

ಇದೇ ಸಂದರ್ಭದಲ್ಲಿ ಚಂದ್ರಕಾಂತ್ ಪೂಜಾರಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ, ಡಿವೈಎಸ್ಪಿಗಳಾದ ದೂದ ಪೀರ್ ಹುಸೇನಸಾಬ ಮುಲ್ಲಾ , ಎನ್.ಡಿ ಸನಧಿ, ಶರಣಪ್ಪಾ ಪೊಲೀಸ್ ಉಪಾಧೀಕ್ಷಕರು ಡಿಎಆರ್ ಘಟಕ ಬೀದರ, ವೃತನಿರೀಕ್ಷಕರಾದ ಪಾಲಾಕ್ಷಯ್ಯ, ಜಿ ಎಸ್ ಬಿರಾದಾರ, ಸಬ್ ಅರ್ಬನ್ ಪೊಲೀಸ ಠಾಣೆಯ ನಿರೀಕ್ಷಕರಾದ ತಸ್ಲೀಮಾ ಸುಲ್ತಾನ, ನಿಂಗಪ್ಪಾ ಮಣ್ಣೂರ, ಕಿರಣ್ ಧೋತ್ರೆ, ಗುಪ್ತಚರ ವಿಭಾಗದ ಗುಂಡಪ್ಪಾ ರೆಡ್ಡಿ, ಸಂತೋಷ್ ಮಹಾರಾಜ್ ಸೇರಿದಂತೆ ಪೊಲೀಸ್ ಸಿಬ್ಬಂಧಿಗಳು ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿದರು.

**ಬೀದರ ಪೊಲೀಸರ ಕಾರ್ಯಾಚರಣೆ 3.5 ಲಕ್ಷಕ್ಕೂ ಹೆಚ್ಚು ಮೌಲ್ಯದ 5 ನಾಡ ಪಿಸ್ತೂಲ್, ₹2.60 ಲಕ್ಷ ಮೌಲ್ಯದ 26 ಜೀವಂತ ಮದ್ದುಗುಂಡುಗಳು, 10 ಖಾಲಿ ಗುಂಡುಗಳು ಹಾಗೂ ₹13 ಸಾವಿರ ಮೌಲ್ಯದ 5 ತಲ್ವಾರ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಮಾರುಕಟ್ಟೆಯಲ್ಲಿ ಒಂದೊಂದು ನಾಡ ಪಿಸ್ತೂಲ್‌ನ್ನು ಸುಮಾರು ₹1 ಲಕ್ಷಕ್ಕೆ ಮಾರಾಟ ಮಾಡಲಾಗುತ್ತಿದೆ.**

**-ಪ್ರದೀಪ್ ಗುಂಟಿ**
**ಬೀದರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ**

ಕಾರ್ಯಾಚರಣೆಯಲ್ಲಿ ಭಾಗವಹಿಸಿದ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಎಸ್ಪಿ ಪ್ರದೀಪ್ ಗುಂಟಿ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

## ವೀರಶೈವ ಲಿಂಗಾಯತರಿಗೆ ಹೆಚ್ಚಿನ ಸ್ಥಾನ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಈ ಬಾರಿಯ ಸಚಿವ ಸಂಪುಟ ವಿಸ್ತರಣೆಯಲ್ಲಿ ವೀರಶೈವ ಲಿಂಗಾಯತ ಸಮುದಾಯಕ್ಕೆ ಹೆಚ್ಚಿನ ಪ್ರಾತಿನಿಧ್ಯ ದೊರಕಲಿದೆ ಎಂಬ ವಿಶ್ವಾಸವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಹಾಗೂ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಈಶ್ವರ ಬಿ ಖಂಡ್ರೆ ವ್ಯಕ್ತಪಡಿಸಿದ್ದಾರೆ.

ಬೆಂಗಳೂರಿನಲ್ಲಿಂದು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ಎಲ್ಲರಿಗೂ ಲೇಸನ್ನೇ ಬಯಸುವ ಸಮಾಜ ನಮ್ಮದು. ಅರ್ಹರೆಲ್ಲರಿಗೂ ಸಚಿವ ಸಂಪುಟದಲ್ಲಿ ಪ್ರಾತಿನಿಧ್ಯ ಸಿಗಬೇಕು ಎಂಬುದು ನಮ್ಮ ನಿಲುವಾಗಿದೆ. ಕಳೆದ 2023ರ ವಿಧಾನಸಭಾ ಚುನಾವಣೆಯಲ್ಲಿ ಸಮುದಾಯದ 36 ಶಾಸಕರು ಆಯ್ಕೆಯಾಗಿದ್ದು, ಸಂಪುಟದಲ್ಲಿ ಸಹಜವಾಗೇ ಹೆಚ್ಚಿನ ಸ್ಥಾನ ಲಭಿಸಲಿದೆ ಎಂದರು. ಹಿಂದಿನ ಸಿದ್ದರಾಮಯ್ಯ ಅವರ ಸಚಿವ ಸಂಪುಟದಲ್ಲಿ 7 ಲಿಂಗಾಯತ, ವೀರಶೈವ ಸಚಿವರಿದ್ದೆವು. ಡಿ.ಕೆ. ಶಿವಕುಮಾರ್ ಅವರ ಸಚಿವ ಸಂಪುಟದಲ್ಲಿ ಈಗಾಗಲೇ ಸಮಾಜದ 3 ಸಚಿವರಿದ್ದೇವೆ. ಇನ್ನೂ ಕನಿಷ್ಠ ನಾಲ್ಕು ಶಾಸಕರಿಗೆ ಸಚಿವ ಸ್ಥಾನ ನೀಡಬೇಕು ಎಂದು ತಾವು ವರಿಷ್ಠರಿಗೆ ಮತ್ತು ಮುಖ್ಯಮಂತ್ರಿಗಳಿಗೆ ಮನವಿ ಮಾಡಿರುವುದಾಗಿ ಅವರು ತಿಳಿಸಿದರು.

## ಕೌನ್ಸಲಿಂಗ್: ಸ್ಥಳ ನಿಯೋಜನೆಗೆ ಚಾಲನೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಕಲ್ಯಾಣ ಕರ್ನಾಟಕ ಭಾಗದ ಏಳು ಜಿಲ್ಲೆಗಳ ಸ್ಥಳೀಯ ವೃಂದದ ಕಾರ್ಯದರ್ಶಿ ಗ್ರೇಡ್-1 ಅಧಿಕಾರಿಗಳಿಗೆ ಪಿಡಿಒ ಆಗಿ ಮುಂಬಡ್ತಿ ನೀಡಲಾಗಿದ್ದು, ಇಂದು ಪಾರದರ್ಶಕವಾಗಿ ಕೌನ್ಸೆಲಿಂಗ್ ಮೂಲಕ ಸ್ಥಳ ನಿಯೋಜನೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ಚಾಲನೆ ನೀಡಿದರು.

ಗಾಂಧೀನಗರದಲ್ಲಿರುವ ಇಲಾಖೆಯ ಆಯುಕ್ತಾಲಯದಲ್ಲಿ ನಡೆದ ಈ ಕೌನ್ಸೆಲಿಂಗ್ ನಲ್ಲಿ ಪಿಡಿಒ ಆಗಿ ಬಡ್ತಿ ಪಡೆದ 80 ಗ್ರೇಡ್ 1 ಕಾರ್ಯದರ್ಶಿಗಳು ಭಾಗಿಯಾಗಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಈಶ್ವರ ಖಂಡ್ರೆ, ಗ್ರಾಮಗಳಲ್ಲಿ ಶಾಶ್ವತ ಮತ್ತು ಗುಣಮಟ್ಟದ ಆಸ್ತಿ ಸೃಜಿಸುವಲ್ಲಿ ಹಾಗೂ ದೇಶದ ಆತ್ಮವಾದ ಗ್ರಾಮಗಳ ಅಭಿವೃದ್ಧಿಯಲ್ಲಿ ಪಿಡಿಒ ಮತ್ತು ಕಾರ್ಯದರ್ಶಿಗಳು ಮಹತ್ವದ ಪಾತ್ರವಹಿಸುತ್ತಾರೆ ಎಂದರು.

ಭಾರತ ಹಳ್ಳಿಗಳ ದೇಶ. ಹಳ್ಳಿಗಳು ಭಾರತದ ಜೀವನಾಡಿ. ಆದರೆ ಇಂದು ಗ್ರಾಮೀಣ ಯುವಕರು ನಗರಗಳಿಗೆ ಹೋಗಿ ನೆಲೆಸುತ್ತಿದ್ದು, ಹಳ್ಳಿಗಳು ವೃದ್ಧಾಶ್ರಮಗಳಾಗಿ ಪರಿವರ್ತನೆ ಆಗುತ್ತಿವೆ. ತಮ್ಮ ಗ್ರಾಮದಲ್ಲೇ ಯುವಜನರಿಗೆ ಉದ್ಯೋಗ ಮತ್ತು ಮೂಲಭೂತ ಸೌಕರ್ಯ ಕಲ್ಪಿಸಿದರೆ, ಗ್ರಾಮಾಭಿವೃದ್ಧಿಯೂ ಆಗುತ್ತದೆ. ವಲಸೆಯೂ ನಿಲ್ಲುತ್ತದೆ ಎಂದರು.

ಕಾರ್ಯದರ್ಶಿ ಮತ್ತು ಪಿಡಿಒಗಳು ದಕ್ಷತೆ, ಪ್ರಾಮಾಣಿಕತೆಯಿಂದ ಕಾರ್ಯ ನಿರ್ವಹಿಸಿದರೆ, ಗಾಂಧೀ ಕಂಡ ಗ್ರಾಮ ರಾಜ್ಯದ ಕನಸು ನನಸಾಗುತ್ತದೆ ಎಂದರು. ಬಡ್ತಿ ಪಡೆದು ಸ್ಥಳ ನಿಯುಕ್ತಿ ಪಡೆದ ಪಿಡಿಒಗಳಿಗೆ ಅವರು ಶುಭ ಕೋರಿದರು.

## ಡೀನ್ ಕಚೇರಿ ಮುಂಭಾಗದಲ್ಲಿ ಶ್ರದ್ಧಾಂಜಲಿ ಸಭೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ





ದುಃಖದ ಘಟನೆ ಹಿನ್ನೆಲೆಯಲ್ಲಿ ಎಲ್ಲಾ ಶೈಕ್ಷಣಿಕ ತರಗತಿಗಳನ್ನು ಗೌರವ ಸೂಚಕವಾಗಿ ಸ್ಥಗಿತಗೊಳಿಸಲಾಯಿತು ಮತ್ತು ನಾಲ್ಕನೇ ದಿನದ ಇಂಡಕ್ಷನ್ ಕಾರ್ಯಕ್ರಮವನ್ನು ಮುಂದೂಡಲಾಯಿತು.

ಜುಲೈ 16, 2026 ರಂದು ಬೆಳಿಗ್ಗೆ 10:30ಕ್ಕೆ ಎಂಜಿನಿಯರಿಂಗ್ ಮತ್ತು ಟೆಕ್ನಾಲಜಿ ಫ್ಯಾಕಲ್ಟಿಯ ಡೀನ್ ಕಚೇರಿ ಮುಂಭಾಗದಲ್ಲಿ ಶ್ರದ್ಧಾಂಜಲಿ ಸಭೆ ಆಯೋಜಿಸಲಾಯಿತು. ಸಭೆಯಲ್ಲಿ ಡಾ. ಸುಭಾಷ್ ಕಮಲ್, ಡೀನ್, ಎಂಜಿನಿಯರಿಂಗ್ ಮತ್ತು ಟೆಕ್ನಾಲಜಿ ಫ್ಯಾಕಲ್ಟಿ, ಎಲ್ಲಾ ವಿಭಾಗಗಳ ಮುಖ್ಯಸ್ಥರು, ಅಧ್ಯಾಪಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿ ಪ್ರಾರ್ಥನೆ ಸಲ್ಲಿಸಿ ವಿಧಿವಶರಾದ ವಿದ್ಯಾರ್ಥಿಗೆ ಶ್ರದ್ಧಾಂಜಲಿ ಅರ್ಪಿಸಿದರು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಡೀನ್ ಡಾ. ಸುಭಾಷ್ ಕಮಲ್ ಅವರು ವಿದ್ಯಾರ್ಥಿಯ ಅಕಾಲಿಕ ನಿಧನದ ಬಗ್ಗೆ ಆಳವಾದ ದುಃಖ ವ್ಯಕ್ತಪಡಿಸಿ, ಮೃತರ ಕುಟುಂಬಕ್ಕೆ ಹೃತ್ಪೂರ್ವಕ ಸಂತಾಪ ಸೂಚಿಸಿದರು. ಅವರು ಎಲ್ಲರನ್ನೂ ಒಂದು ನಿಮಿಷ ಮೌನ ಪ್ರಾರ್ಥನೆಗೆ ಆಹ್ವಾನಿಸಿ, ವಿಧಿವಶರಾದ ಆತ್ಮಕ್ಕೆ ಶಾಶ್ವತ ಶಾಂತಿ ದೊರಕಲಿ ಹಾಗೂ ಕುಟುಂಬಕ್ಕೆ ಧೈರ್ಯ ದೊರಕಲಿ ಎಂದು ಪ್ರಾರ್ಥಿಸಿದರು.

ತಮ್ಮ ಭಾಷಣದಲ್ಲಿ ಅವರು ರಸ್ತೆ ಸುರಕ್ಷತೆಯ ಮಹತ್ವವನ್ನು ಒತ್ತಿ ಹೇಳಿ, ಎಲ್ಲಾ ವಿದ್ಯಾರ್ಥಿಗಳು ಕಟ್ಟುನಿಟ್ಟಾಗಿ ಟ್ರಾಫಿಕ್ ನಿಯಮಗಳನ್ನು ಪಾಲಿಸಬೇಕೆಂದು ಮನವಿ ಮಾಡಿದರು. ಎರಡು ಚಕ್ರ ವಾಹನ ಸವಾರರು ಹೆಲ್ಮೆಟ್ ಧರಿಸಬೇಕು, ಅಜಾಗರೂಕ ಹಾಗೂ ನಿರ್ಲಕ್ಷ್ಯ ಚಾಲನೆ ತಪ್ಪಿಸಬೇಕು, ಟ್ರಾಫಿಕ್ ಸಿಗ್ನಲ್‌ಗಳನ್ನು ಪಾಲಿಸಬೇಕು, ವಾಹನ ಚಲಾಯಿಸುವಾಗ ಮೊಬೈಲ್ ಫೋನ್ ಬಳಸಬಾರದು ಹಾಗೂ ಸದಾ ಜವಾಬ್ದಾರಿಯುತ ರಸ್ತೆ ವರ್ತನೆ ಅನುಸರಿಸಬೇಕು ಎಂದು ಸಲಹೆ ನೀಡಿದರು.

ಪ್ರತಿ ಜೀವವೂ ಅಮೂಲ್ಯವೆಂದು ನೆನಪಿಸಿ, ಶಿಸ್ತಿನೊಂದಿಗೆ ಎಚ್ಚರಿಕೆ ಹಾಗೂ ನಿಯಮ ಪಾಲನೆಯೇ ವೈಯಕ್ತಿಕ ಸುರಕ್ಷತೆಯನ್ನು ಖಚಿತಪಡಿಸುತ್ತದೆ ಎಂದು ಅವರು ಒತ್ತಿ ಹೇಳಿದರು.

ಸಭೆ ಪ್ರಾರ್ಥನೆಯೊಂದಿಗೆ ಮುಕ್ತಾಯಗೊಂಡಿತು. ನಂತರ ಎಲ್ಲಾ ತರಗತಿಗಳು ದಿನಪೂರ್ತಿ ಸ್ಥಗಿತಗೊಂಡವು ಮತ್ತು ನಾಲ್ಕನೇ ದಿನದ ಇಂಡಕ್ಷನ್ ಕಾರ್ಯಕ್ರಮವನ್ನು ವಿಧಿವಶರಾದ ವಿದ್ಯಾರ್ಥಿಗೆ ಗೌರವ ಸೂಚಕವಾಗಿ ಅಧಿಕೃತವಾಗಿ ಮುಂದೂಡಲಾಯಿತು.

# ಹೆಣ್ಣಿಗೆ ಹಠ ಗಂಡಿಗೆ ಚಟ ಒಳ್ಳೆಯದಲ್ಲ



**ಹಠ-ಚಟ**
**• ಓಂಕಾರ ಪಾಟೀಲ**
**ಕಾರ್ಯದರ್ಶಿಗಳು, ಜಿಲ್ಲಾ ಮಕ್ಕಳ ಸಾಹಿತ್ಯ ಪರಿಷತ್, ಬೀದರ್**

ಹೆಣ್ಣಿಗೆ ಹಠ ಗಂಡಿಗೆ ಚಟ ಒಳ್ಳೆದಲ್ಲ ಅನ್ನುವ ಹಿರಿಯರು ತಲತಲಾಂತರದಿಂದ ಹೇಳಿಕೊಂಡು ಬರುತ್ತಿರುವ ಗಾದೆಮಾತು ಅಕ್ಷರಸಹ ಸತ್ಯ. ನಮ್ಮ ಕನ್ನಡ ಸಂಸ್ಕೃತಿ ಮತ್ತು ಜನಪದ ಸಾಹಿತ್ಯದಲ್ಲಿ ಇಂತಹ ಗಾದೆ ಮಾತುಗಳಿಗೆ ಅತ್ಯಂತ ಉನ್ನತವಾದ ಸ್ಥಾನವಿದೆ. "ವೇದ ಸುಳ್ಳಾದರೂ ಗಾದೆ ಸುಳ್ಳಾಗದು" ಎಂಬ ಮಾತಿನಂತೆ, ಹಿರಿಯರು ತಮ್ಮ ಅನುಭವದ ಸಾರವನ್ನು ಇಂತಹ ಚುಟುಕಾದ ಮಾತುಗಳಲ್ಲಿ ಹಿಡಿದಿಟ್ಟಿದ್ದಾರೆ. ಅಂತಹ ಜನಪ್ರಿಯ ಹಾಗೂ ಇಂದಿನ ಕಾಲಕ್ಕೂ ಪ್ರಸ್ತುತವಾಗಿರುವ ಅತ್ಯಂತ ಅರ್ಥಗರ್ಭಿತ ಗಾದೆ ಮಾತಾಗಿದೆ.

"ಹೆಣ್ಣಿಗೆ ಹಠ ಗಂಡಿಗೆ ಚಟ ಒಳ್ಳೆದಲ್ಲ". ಈ ಗಾದೆಯ ಮಾತು ಆಳವಾದ ಅರ್ಥ ಮತ್ತು ಸಾಮಾಜಿಕ ಪ್ರಸ್ತುತತೆಯನ್ನು ವಿಶ್ಲೇಷಿಸುತ್ತದೆ. ಮಾನವನ ಸ್ವಭಾವ ಮತ್ತು ಹಠ ಮತ್ತು ಚಟವುಳ್ಳ ಮನುಷ್ಯನ ಬದುಕನ್ನು ಹೇಗೆ ಅವನತಿಯತ್ತ ತಳ್ಳುತ್ತದೆ, ಹಾಗು ಅದರಿಂದ ಆಗುವ ದುಷ್ಪರಿಣಾಮಗಳನ್ನು ಕುರಿತು ಈ ಮಾತು ವ್ಯಕ್ತವಾಗಿದೆ ಅನ್ನಬಹುದು.

"ಹೆಣ್ಣು ಒಂದು ಕುಟುಂಬದ ಕಣ್ಣು," ಸಂಸಾರದ ನಾವಿಕ ಎಂದು ಕರೆಯಲಾಗುತ್ತದೆ. ಅವಳಲ್ಲಿ ಶಾಂತಿ, ಸಹನೆ ಹೆಂತಹ ತಾಪತ್ರಯಗಳು ಎದುರಾದರೂ ಹೊಂದಿಕೊಂಡು ಹೋಗುವ ಸ್ವಭಾವವಿದ್ದರೆ ಬದುಕು ಸರಾಗವಾಗಿ ಸಾಗುತ್ತದೆ. ಮನೆ ನಂದಾದೀಪದಂತೆ ಬೆಳಗುತ್ತದೆ. ಆದರೆ ಅದೇ ಹೆಣ್ಣು ಅನಗತ್ಯ ವಿಷಯಗಳಿಗೆ ಅತಿಯಾಗಿ ಹಠಮರಿಯಾದರೆ ಆ ಇಡೀ ಸಂಸಾರದ ಶಾಂತಿ ಕಣ್ಮರೆಯಾಗುತ್ತದೆ. ಇಲ್ಲಿ 'ಹಠ' ಎಂದರೆ ಕೇವಲ ತನಗೆ ಬೇಕಾದುದನ್ನು ಸಾಧಿಸಿಕೊಳ್ಳುವುದಲ್ಲ; ಬದಲಿಗೆ ಅಹಂಕಾರ, ಮೊಂಡುತನ ಮತ್ತು ಇತರರ ಭಾವನೆಗಳಿಗೆ ಗೌರವ ನೀಡದಿರುವುದು. ಹೆಣ್ಣಿನ ಇಂತಹ ಮೊಂಡುತನವು ಗಂಡ-ಹೆಂಡತಿಯ ನಡುವೆ ಬಿರುಕು ಮೂಡಿಸುವುದಲ್ಲದೆ, ಮಕ್ಕಳ ಮೇಲೆಯೂ ಕೆಟ್ಟ ಪರಿಣಾಮ ಬೀರುತ್ತದೆ. ಅಂತಿಮವಾಗಿ ಸುಂದರವಾದ ಸಂಸಾರ ನರಕಸದೃಶವಾಗುತ್ತದೆ.

**ಗಂಡಿನ ಚಟ ಮತ್ತು ಅದರ ವಿನಾಶಕಾರಿ**

ಹೆಣ್ಣಿನಂತೆ ಗಂಡು ಕೂಡ ತನ್ನ ಕುಟುಂಬದ ಜವಾಬ್ದಾರಿ ಹೊರುವ ಮುಖ್ಯಸ್ಥ, ಅವನು ಕುಟುಂಬದ ಆಧಾರಸ್ತಂಭವಾಗಿ ಕುಟುಂಬ ನಿರ್ವಹಣೆ ಮಾಡುವ ದೊಡ್ಡ ಜವಾಬ್ದಾರಿ ಹಾಗು ಇಡೀ ಕುಟುಂಬದ ಆರ್ಥಿಕ ಭದ್ರತೆ ಮತ್ತು ಸುರಕ್ಷತೆಯ ಜವಾಬ್ದಾರಿ ಆತನ ಮೇಲಿರುತ್ತದೆ. ಇಂತಹ ಜವಾಬ್ದಾರಿಯುತ ಸ್ಥಾನದಲ್ಲಿರುವ ಗಂಡಸು ಕುಡಿತ, ಜೂಜು, ಸಿಗರೇಟ್ ಅಥವಾ ಇನ್ನ್ಯಾವುದೇ ದುಷ್ಟಚಟಗಳಿಗೆ ದಾಸನಾದರೆ, ಆತ ಕೇವಲ ತನ್ನ ಆರೋಗ್ಯವನ್ನಷ್ಟೇ ಅಲ್ಲದೆ ಇಡೀ ಕುಟುಂಬದ ಭವಿಷ್ಯವನ್ನೇ ನಾಶಪಡಿಸುತ್ತಾನೆ.



**ಚಟಗಳು ಚಟ್ಟ ಕಟ್ಟುತ್ತವೆ:** ಚಟಗಳು ಮನುಷ್ಯನ ವಿವೇಚನಾ ಶಕ್ತಿಯನ್ನು ಕುಂದಿಸುತ್ತವೆ. ಇದ-ರಿಂದ ಕಷ್ಟಪಟ್ಟು ಸಂಪಾದಿಸಿದ ಹಣವೆಲ್ಲ ನೀರಾಗಿ ಹರಿದು ಹೋಗುತ್ತದೆ, ಸಾಲದ ಶೂಲಕ್ಕೆ ಸಿಲುಕಿ ಇಡೀ ಕುಟುಂಬ ಬೀದಿಗೆ ಬರುವಂತಾಗುತ್ತದೆ. ಗಂಡಸರು ಅವರ ಚಟದಿಂದಾಗಿ ಅರೋಗ್ಯ ಹದಗೆಟ್ಟು ಸಮಾಜದಲ್ಲಿ ಎಷ್ಟೋ ಜನ ಹೆಂಡರು ಮಕ್ಕಳು ಹಾಗು ಅವರನ್ನೇ ನಂಬಿದ ಕುಟುಂಬದವರು ಅನಾಥರಾಗಿರುವುದು ಕಾಣ ಬಹುದಾಗಿದೆ.

ಹೆಣ್ಣು ಮತ್ತು ಗಂಡು ಸಂಸಾರದ ದಾರವಿದ್ದಂತೆ, ದಾರವೇ ಕಡಿದು ದಾರದಲ್ಲಿರುವ ಮುತ್ತುಗಳು ಛಿದ್ರವಾಗಿ ಚದುರಿ ಹೋದಂತೆ ಹಠ ಮತ್ತು ಚಟದ ಗುಣಗಳ ಕಾರಣ ಕುಟುಂಬದಲ್ಲಿ ಕಲಹ ಮೂಡಿ ಮನುಷ್ಯನ ಮನಸ್ಸು ಕಲುಷಿತವಾಗಿ ಕುಟುಂಬಗಳಲ್ಲಿ ಬಿರುಕು ಮೂಡುವ ಸಾಧ್ಯತೆ ಇರುತ್ತದೆ.

ಆತ್ಮೀಯರೇ ಮನುಷ್ಯನಿಗೆ ಹಠ ಮತ್ತು ಚಟ ಎರಡು ಇರಲಿ ಆದರೆ ಅವುಗಳು ಹೇಗಿರಬೇಕೆಂದರೆ ಹಠ ಎಂದರೆ ಸಾಧಿಸುವ ಛಲವಾಗಿರಬೇಕು, ಅದು ಮನುಷ್ಯನ ಬದುಕಿನ ಅಂತ್ಯವಾಗದೆ ಮನುಷ್ಯನ ಬದುಕಿನ ಪ್ರಗತಿಗೆ ನಾಂದಿಯಾಗಬೇಕು.

ಅದೇ ರೀತಿ ಮನುಷ್ಯ ದುಷ್ಟಗಳ ದಾಸನಾಗುವ ಬದಲು ಒಳ್ಳೆಯ ಅಭ್ಯಾಸಗಳನ್ನು ಚಟವಾಗಿಸಿಕೊಳ್ಳಬೇಕು. ಪುಸ್ತಕ ಓದುವುದು, ಯೋಗ ವ್ಯಾಯಾಮ, ಸಸಿಗಳನ್ನು ನೆಟ್ಟು ಪರಿಸರ ಜಾಗೃತಿ ಮೂಡಿಸುವದು, ಇನ್ನಿತರ ಸಮಾಜಮುಖಿ ಚಟುವಟಿಕೆಗಳನ್ನು ರೂಡಿಸಿಕೊಂಡರೆ ಅಂಥ ವ್ಯಕ್ತಿ ಸಮಾಜಕ್ಕೆ ಮಾದರಿಯಾಗುತ್ತಾನೆ.

ಒಂದು ಕುಟುಂಬದ ವಿಷಯವಾಗಿ ಹೇಳುವದಾದರೆ ಸಂಸಾರದಲ್ಲಿ ಸಾರವಿರಬೇಕು, ಸಂಸಾರ ಖಾರವಾಗಬಾರದು. ಬಂಡಿಯ ಎರಡು ಚಕ್ರಗಳಂತಿರುವ ಗಂಡು ಹೆಣ್ಣು ಜೋಡೆತ್ತುಗಳಂತೆ ಪರಸ್ಪರ ಹೊಂದಾಣಿಕೆ, ಪ್ರೀತಿ ಮತ್ತು ಜವಾಬ್ದಾರಿಯನ್ನು ಅರಿತು ಸಾಗಿದರೆ ಮಾತ್ರ ಸಂಸಾರ ಸರಾಗವಾಗಿ ಸಾಗಿ ಮನೆ ನಂದನವನವಾಗಲು ಸಾಧ್ಯ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000, Telephone Number:08483200222
PRGI NO. 120927
(RNINO:KARKAN/2011/48371)